Swabhimani Sahakari

Pages : 35 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸೌಹಾರ್ದ ಸಹಕಾರಿ ಕಾಯ್ದೆಯು ರಜತ ಮಹೋತ್ಸವ 2025

Volume - 22
Issue - 12
December- 2025



॥ ಹುತ್ತರಿ ಸಡಗರ ॥


ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ?
ಅಲ್ಲಿ ಆ ಕಡೆ ನೋಡಲಾ!
ಅಲ್ಲಿ ಕೊಡಗರ ನಾಡಲಾ!
ಅಲ್ಲಿ ಕೊಡವರ ಬೀಡಲಾ!

-ಪಂಜೆ ಮಂಗೇಶರಾಯರು

ಡಿಸೆಂಬರ್ ೦5
ಹುತ್ತರಿ ಹಬ್ಬ



ಜನವರಿ ೦1-2026
ಸೌಹಾರ್ದ ಸಹಕಾರಿ ದಿನಾಚರಣೆ



ಡಿಸೆಂಬರ್ ೦8 ರಿಂದ 18 ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ



ಡಿಸೆಂಬರ್ 25
ಕ್ರಿಸ್ಮಸ್

ಸೌಹಾರ್ದ ಸಹಕಾರಿಗಳ ಸಂಖ್ಯೆ: 6614

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1746

ಅಧ್ಯಕ್ಷರ ನುಡಿ

# ಸಹಕಾರ ಸಪ್ತಾಹದ ಅರ್ಥಪೂರ್ಣ ಆಚರಣೆ : ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.



ಜಿ. ನಂಜನಗೌಡ

ರಾಷ್ಟ್ರದಾದ್ಯಂತ ದಿನಾಂಕ ನವೆಂಬರ್ 14 ರಿಂದ 20 ರವರೆಗೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆದಿದೆ. ಕರ್ನಾಟಕದಲ್ಲಿ ಒಂದೊಂದು ರಾಜ್ಯ ಮಟ್ಟದ ಸಂಸ್ಥೆಯು ಒಂದೊಂದು ದಿನದ ನೇತೃತ್ವವನ್ನು ವಹಿಸಿಕೊಂಡು ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಸಹಕಾರ ಸಪ್ತಾಹವನ್ನು ಆಚರಿಸಲಾಗಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ನಿರ್ವಹಿಸುತ್ತ ಬಂದಿದೆ.

**ಆತ್ಮೀಯ ಸಹಕಾರಿ ಬಂಧುಗಳಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು.**

ರಾಷ್ಟ್ರದಾದ್ಯಂತ ದಿನಾಂಕ ನವೆಂಬರ್ 14 ರಿಂದ 20 ರವರೆಗೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆದಿದೆ. ಕರ್ನಾಟಕದಲ್ಲಿ ಒಂದೊಂದು ರಾಜ್ಯ ಮಟ್ಟದ ಸಂಸ್ಥೆಯು ಒಂದೊಂದು ದಿನದ ನೇತೃತ್ವವನ್ನು ವಹಿಸಿಕೊಂಡು ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಸಹಕಾರ ಸಪ್ತಾಹವನ್ನು ಆಚರಿಸಲಾಗಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ನಿರ್ವಹಿಸುತ್ತ ಬಂದಿದೆ. ಅಂದಾಜು 31 ಕೋಟಿ, ಸದಸ್ಯತ್ವ ಅಂದಾಜು 8.5 ಲಕ್ಷ ಸಹಕಾರಿ ಸಂಸ್ಥೆಗಳ ಮೂಲಕ ಹಸಿರು ಕ್ರಾಂತಿ ಶ್ವೇತ ಕ್ರಾಂತಿಗಳ ಹರಿಕಾರನಾಗಿ ಈ ದೇಶದ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಕರ್ನಾಟಕದಲ್ಲೂ ಸಹ 46,917 ಸಹಕಾರ ಸಂಘಗಳು 2,61,44,540 ಸದಸ್ಯ ಬಳಗವನ್ನು ಸಹಕಾರಿ ಕ್ಷೇತ್ರ ಹೊಂದಿದೆ. ಶೇಕಡಾ 100 ರಷ್ಟು ಗ್ರಾಮಗಳು ಸಹಕಾರಿ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿವೆ. ಆದಾಗ್ಯೂ ಕೆಲವೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕಾರಣಗಳಿಂದ ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ಮಾಡಿರುವ ಸದಸ್ಯರಿಗೆ ಮೋಸ ವಂಚನೆಗಳು ನಡೆದಿರುವುದು ಸಹಕಾರಿ ಕ್ಷೇತ್ರದ ಬಗ್ಗೆ ನಕಾರಾತ್ಮಕ ಭಾವನೆಗಳ ಬೆಳವಣಿಗೆಗೆ ಹಾಗೂ ಅಪಪ್ರಚಾರಕ್ಕೆ ಕಾರಣ ಎನಿಸಿದೆ. ಈ ಅಪಪ್ರಚಾರ, ನಕಾರಾತ್ಮಕ ಭಾವನೆಗಳನ್ನು ಸಕಾರಾತ್ಮಕ ಭಾವನೆಗಳನ್ನಾಗಿ ಪರಿವರ್ತಿಸುವುದಕ್ಕಾಗಿ, ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಜನರ, ಸರಕಾರಗಳ ಹಾಗೂ ಸಹಕಾರಿಗಳ ಅವಲೋಕನೆಗಾಗಿ ಪ್ರಸ್ತುತ ಪಡಿಸುವುದು ಮತ್ತು ಈ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವುದಕ್ಕಾಗಿ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿ ಈ ಸಹಕಾರ ಸಪ್ತಾಹದ ಆಚರಣೆ.

ಈ ಬಾರಿ ಸಹಕಾರಿ ಸಪ್ತಾಹದ ನವೆಂಬರ್ 15ನೇ ದಿನಾಂಕದಂದು ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ರಾಯಚೂರು ಜಿಲ್ಲೆಯ ಎಲ್ಲ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಅತ್ಯಂತ ಸಂಭ್ರಮದಿಂದ ವಿಜೃಂಭಣೆಯಿಂದ ಆಚರಿಸಲಾಗಿದೆ. ವಿಶೇಷವಾಗಿ ಯುವಕರು ಹಾಗೂ ಮಹಿಳೆಯರನ್ನು ಈ ಕ್ಷೇತ್ರದಡಿಯಲ್ಲಿ ಬರುವಂತೆ ಮಾಡಲು ಹಾಗೂ ಸಹಕಾರಿ ಕ್ಷೇತ್ರದ ಬಗ್ಗೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಮೂಡಿಸುವುದಕ್ಕಾಗಿ ಬೈಕ್ ರ್‍ಯಾಲಿ, ಸಹಕಾರಿ ಜಾಥಾ, ಸಹಕಾರಿ ಧ್ವಜಾರೋಹಣ, ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ ಸ್ವೀಕರಿಸುವುದು, ಸಹಕಾರಿ ಮಾರಾಟ ಮಳಿಗೆಗಳ ಮೂಲಕ ಸಹಕಾರಿಗಳಿಂದ ಉತ್ಪಾದಿತ ವಸ್ತುಗಳ ಮಾರಾಟ ವ್ಯವಸ್ಥೆ ಮಾಡುವುದು, ಸಹಕಾರಿಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಸನ್ಮಾನಿಸುವುದು, ಕಾರ್ಯಕ್ರಮಗಳಲ್ಲಿ ಸಚಿವರುಗಳು, ಶಾಸಕರು ಹಾಗೂ ಸಹಕಾರಿ ಮುಖಂಡರುಗಳನ್ನು ಆಹ್ವಾನಿಸಿರುವುದು ಅವರೂ ಭಾಗವಹಿಸಿರುವುದು ಸುಮಾರು 1500ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿ ಸಹಕಾರಿ ಕ್ಷೇತ್ರದ ಬಗ್ಗೆ ಅಭಿಮಾನದಿಂದ ಪ್ರಚಾರ ಮಾಡಿರವುದು ಎಲ್ಲವೂ ಉತ್ತಮವಾಗಿ ನಡೆದಿದೆ. ಈ ಯಶಸ್ಸಿಗೆ ಸಂಯುಕ್ತ ಸಹಕಾರಿಯ ಜೊತೆಗೆ ಸಹಕರಿಸಿದ ಸಹಕಾರಿ ಸಂಸ್ಥೆಗಳಿಗೂ ಹಾಗೂ ಸಹಕಾರಿಗಳಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳು.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–26
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 27–29
**ಲೇಖನಗಳು :**
ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರ ನಿರ್ದೇಶಕರ ಸೇರ್ಪಡೆ ಮತ್ತು ಅವಶ್ಯಕತೆ – ಒಂದು ವಿಮರ್ಷೆ .......... 30–31
ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಮಹತ್ವ .......... 32–33
ಸಸಿಗಳನ್ನೇ ಮಕ್ಕಳೆಂದು ಬೆಳೆಸಿದ ವೃಕ್ಷಮಾತೆ ಸಾಲುಮರದ ಡಾ. ತಿಮ್ಮಕ್ಕ .......... 34–35

# ಸಂಪಾದಕೀಯ

## ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಗಳು – ಆತ್ಮಾವಲೋಕನೆಯ ಹಾಗೂ ಅಭಿವೃದ್ಧಿಯ ದಿಕ್ಸೂಚಿ

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಅವಲೋಕನಾ ಸಭೆಗಳನ್ನು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ, ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ರಚಿತವಾದ ಶಾಸನಬದ್ಧ ಸಂಸ್ಥೆಯಾಗಿರುವುದರಿಂದ ಶಾಸನಾತ್ಮಕ ಕಾರ್ಯಚಟುಟಿಕೆಗಳ ನಿರ್ವಹಣೆ ದೃಷ್ಟಿಯಿಂದ ಸೌಹಾರ್ದ ಸಹಕಾರಿಗಳಿಗೆ ಅವರ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದರ ಜೊತೆಗೆ ಅವರಿಗೆ ಉತ್ತಮ ವೃತ್ತಿಪರ ಕಾರ್ಯನಿರ್ವಹಣೆಗಾಗಿ ಮಾರ್ಗದರ್ಶನ ದೃಷ್ಟಿಯಿಂದ ಈ ಸಭೆಗಳು ಹೆಚ್ಚಿನ ಮಹತ್ವವನ್ನು ಪಡೆಯುತ್ತವೆ. ರಾಜ್ಯದಲ್ಲಿ 6614 ಸೌಹಾರ್ದ ಸಹಕಾರಿಗಳು ನೊಂದಣೆಯಾಗಿದ್ದು 5050 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ದೇಶದಲ್ಲಿಯೇ ವಿಭಿನ್ನವಾಗಿರುವ ವಿಶಿಷ್ಟತೆಯಿಂದ ಕೂಡಿದ ಸಹಕಾರಿ ಚಳುವಳಿ. ರಾಜ್ಯ, ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಈ ಚಳುವಳಿಯನ್ನು ಅನೇಕ ವಿಶ್ವವಿದ್ಯಾಲಯದ ರಿಸರ್ಚ್ ಸ್ಕಾಲರ್‌ಗಳು ಅಧ್ಯಯನ ಮಾಡಿದ್ದಾರೆ. ಅಧ್ಯಯನ ಮಾಡುತ್ತಿದ್ದಾರೆ. ಹೀಗಾಗಿ ಈ ಚಳುವಳಿ ಮಹತ್ವ ಪಡೆದಿದೆ. ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣ ಈ ಚಳುವಳಿಯ ಧ್ಯೇಯವಾಗಿರುವುದನ್ನು ಕೆಲವು ಸಹಕಾರಿಗಳು ಸ್ವೇಚ್ಛಾಚಾರವಾಗಿ ಬಳಸಿಕೊಳ್ಳುವುದರ ಪರಿಣಾಮವಾಗಿ ಈ ಕ್ಷೇತ್ರದ ಬೆಳವಣಿಗೆಯಲ್ಲಿ ಸ್ವಲ್ಪ ಪ್ರಮಾಣದ ಹಿನ್ನಡೆಯನ್ನು ಕಾಣುವಂತಾಗಿದೆ. ಕೆಲವು ಸವಾಲುಗಳನ್ನು ಎದುರಿಸಬೇಕಾಗಿದೆ.

ಈ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಈ ಕ್ಷೇತ್ರದ ಅಧಿಕೃತ ಪ್ರತಿನಿಧಿಗಳು. ಅವರ ನಡೆ ನುಡಿ ಕಾರ್ಯನಿರ್ವಹಣೆ ಎಲ್ಲವೂ ಈ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಇರಬೇಕಾಗುತ್ತದೆ. ಹೀಗಾಗಿ ಮುಖ್ಯಕಾರ್ಯನಿರ್ವಾಹಕರಿಗೆ ಈ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳನ್ನು ತಿಳಿಯಪಡಿಸುವುದು ಸಂಯುಕ್ತ ಸಹಕಾರಿಯ ಉದ್ದೇಶವಾಗಿರುತ್ತದೆ. ಅವರು ನಿರ್ವಹಿಸುವ ಕಾರ್ಯಗಳ ಜೊತೆಗೆ ಅವರಿಗೆ ಕೆಲವೊಂದು ವಿಷಯಗಳನ್ನು ತಿಳಿಯಪಡಿಸುವ ಉದ್ದೇಶವೇ ಈ ವಾರ್ಷಿಕ ಸಭೆಗಳು.

ಈ ಸಭೆಗಳಲ್ಲಿ ಹೆಚ್ಚಿನ ಗಮನ ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ ಶಾಸನಾತ್ಮಕ ಕಾರ್ಯಚಟುವಟಿಕೆಗಳ ನಿರ್ವಹಣೆಯ ಕ್ರಮಬದ್ಧತೆ, ಠೇವಣಿಗಳ ಸಂಗ್ರಹ, ಠೇವಣಿಗಳ ಹೂಡಿಕೆ, ಆಡಳಿತ ಸುಧಾರಣೆಯ ಕ್ರಮಗಳು, ಆಧುನಿಕ ತಂತ್ರಜ್ಞಾನದ ಉಪಯೋಗ, ಸಾಲಗಳ ನೀಡಿಕೆ, ಸಾಲ ವಸೂಲಾತಿ ಕ್ರಮಗಳು, ದಾವಾ ಕ್ರಮಗಳ ನಿರ್ವಹಣೆ, ವಾರ್ಷಿಕ ಮಹಾಸಭೆ, ಆಡಳಿತ ಮಂಡಳಿ ಸಭೆಗಳ ನಿರ್ವಹಣೆ ಹಾಗೂ ಕ್ರಮಬದ್ಧತೆ, ಲೆಕ್ಕಪರಿಶೋಧನೆ ಸಿದ್ಧತೆ ಅನುಪಾಲನಾ ವರದಿಗಳ ಸಿದ್ಧಪಡಿಸುವುದು ಮತ್ತು ಇತ್ತೀಚಿಗೆ ತಿದ್ದುಪಡಿಯಾದ ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ ಇತ್ಯಾದಿ ಸಮಗ್ರ ಕಾರ್ಯಚಟುವಟಿಕೆಗಳ ಪರಿಶೀಲನೆ ಮತ್ತು ಮಾರ್ಗದರ್ಶನ ಮಾಡುವಂತಹ ಈ ಸಭೆ ಈ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ನಮ್ಮ ಅಸ್ತಿತ್ವವನ್ನು ಬಲಪಡಿಸುವ ದೃಷ್ಟಿಯಿಂದ ಮಹತ್ವವನ್ನು ಪಡೆಯುತ್ತದೆ. ಹೀಗಾಗಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ತಪ್ಪದೆ ಈ ಸಭೆಗಳಲ್ಲಿ ಭಾಗವಹಿಸುವುದು ಅವಶ್ಯಕ.

# ಜ್ಞಾನ ಜ್ಯೋತಿ



– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಶ್ರದ್ಧೆ"

ಶ್ರದ್ಧೆ ನಮ್ಮ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಬುದ್ಧಿಗೆ–ವಿಚಾರಕ್ಕೆ ಎಷ್ಟು ಮಹತ್ವ ಕೊಡುತ್ತೇವೆಯೋ ಅದಕ್ಕಿಂತಲೂ ಹೆಚ್ಚು ಮಹತ್ವ ನಂಬಿಕೆಗೆ ಕೊಡಬೇಕು. ಈ ಶ್ರದ್ಧೆ ಕುರಿತು ವ್ಯಾಸ ಮಹರ್ಷಿಗಳು ಒಂದು ಸುಂದರ ಮಾತು ಹೇಳುತ್ತಾರೆ.

ಅಶ್ರದ್ಧಧಾನಾಃ ಪುರುಷಾಃ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ॥

ಓ ಅರ್ಜುನನೇ, ಯಾರಿಗೆ ಈ ಧರ್ಮದಲ್ಲಿ ಶ್ರದ್ಧೆ ಇರುವುದಿಲ್ಲವೋ ಅವರು ನನ್ನನ್ನು ಪಡೆಯುವುದಿಲ್ಲ. ಸದ್ಗತಿಯನ್ನು ಹೊಂದುವುದಿಲ್ಲ ಬದಲಾಗಿ ಅವರು ಮೃತ್ಯುರೂಪ ಸಂಸಾರದಲ್ಲಿ ಬಿದ್ದು ಬಿಡುತ್ತಾರೆ.

ಈ ಜಗತ್ತಿನಲ್ಲಿ ನಾವು ಎಲ್ಲವನ್ನೂ ತಿಳಿದೇ ಬದುಕುತ್ತೇವೆ ಎಂದರೆ ಅದು ಸಾಧ್ಯವಿಲ್ಲ. ಈ ಜಗತ್ತು ಜೀವನ ಅಷ್ಟು ರಹಸ್ಯವಾಗಿದೆ. ಆದ್ದರಿಂದ ಕೆಲವೊಂದು ಸಂಗತಿಗಳು ನಮಗೆ ತಿಳಿಯದಿದ್ದರೂ, ಕಾಣದಿದ್ದರೂ ಅವುಗಳಲ್ಲಿ ನಂಬಿಗೆಯನಿಟ್ಟು ನಡೆಯಬೇಕಾಗುತ್ತದೆ. ಈ ನಂಬಿಗೆ ಅಥವಾ ವಿಶ್ವಾಸ ಇಲ್ಲದಿದ್ದರೆ ನಾವು ಬದುಕುವುದೇ ಕಷ್ಟವಾಗುತ್ತದೆ. ಜೀವನದಲ್ಲಿ ಸುಖ, ಶಾಂತಿ ನೆಮ್ಮದಿ ಇಲ್ಲದಾಗುತ್ತದೆ.

ಮೊದಲು ನಮಗೆ ನಮ್ಮ ಜೀವನದಲ್ಲಿ ನಂಬಿಗೆ ಇರಬೇಕು. ನಾನು ನೂರು ವರ್ಷ ಬದುಕುತ್ತೇನೆ. ಸಂಪತ್ತು ಹೆಚ್ಚು ಕಡಿಮೆ ಇದ್ದರೂ ಚಿಂತೆಯಿಲ್ಲ ನಾನು ನೆಮ್ಮದಿಯಿಂದ ಇರುತ್ತೇನೆ. ನನ್ನ ಈ ದೇಹದಲ್ಲಿ ಒಳ್ಳೆಯ ವಿಚಾರ, ಬುದ್ಧಿ, ಭಾವನ ಕಲ್ಪನಾ ಶಕ್ತಿ ಇದೆ. ಇದನ್ನೆಲ್ಲ ಬಳಸಿಕೊಂಡು ನಾನು ಚೆನ್ನಾಗಿ ಬದುಕುತ್ತೇನೆ ಎಂಬ ಆತ್ಮ ವಿಶ್ವಾಸ ನಮ್ಮಲ್ಲಿರಬೇಕು.

ಇರುವೆಯಲ್ಲಿ ಅದೆಂಥ ಉತ್ಸಾಹ! ನಮ್ಮ ದೇಹದ ತೂಕ ನೂರು ಕಿಲೊ. ಇರುವೆಯ ತೂಕ ಒಂದು ಗ್ರಾಂ ಇರಲಿಕ್ಕಿಲ್ಲ. ಆದರೆ ಅದೆಷ್ಟು ಚುರುಕಾಗಿದೆ! ಅಷ್ಟು ಉತ್ಸಾಹ ನಮ್ಮಲ್ಲಿ ಇದೆಯೊ ಇಲ್ಲೋ ಗೊತ್ತಿಲ್ಲ. ಬದುಕಿರುವಷ್ಟು ದಿವಸ ನಾನು ಉತ್ಸಾಹದಿಮದ ಬದುಕುತ್ತೇನೆ ಎಂಬ ಜೀನವೋತ್ಸಾಹ ನಮ್ಮಲ್ಲಿ ಇರಬೇಕು. ಈ ಉತ್ಸಾಹ ಅಥವಾ ಶ್ರದ್ಧೆಯೇ ಜೀವನದ ಶ್ರೇಯಸ್ಸಿಗೆ ಕಾರಣ.

ಇಂಗ್ಲೆಂಡ್ ದೇಶನ ಒಂದು ಹಳ್ಳಿಯಲ್ಲಿ ಒಬ್ಬ ಬಡ ಹುಡುಗನಿದ್ದ ಶಾಲೆಯನ್ನು ಅಷ್ಟಾಗಿ ಕಲಿತಿರಲಿಲ್ಲ. ಆದರೆ ಅವನಿಗೆ ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂಬ ಉತ್ಸಾಹ ತುಂಬಿ ತುಳುಕುತ್ತಿತ್ತು. ಬರಿಗೈಯಿಂದಲೇ ಲಂಡನ್ ಪಟ್ಟಣಕ್ಕೆ ಬಂದ. ಅಲ್ಲಿ ಒಂದು ಸುಂದರವಾದ ತೋಟ. ಆ ತೋಡದಲ್ಲಿ ಲಂಡನ್ ಪಟ್ಟಣದ ಮೇಯರ್ ಇರುತ್ತಿದ್ದ. ರಾಜ, ಮಹಾರಾಜರಿಗೆ ಸಾಲ ಕೊಡುವಷ್ಟು ಸಿರಿವಂತನಾಗಿದ್ದ ಆ ಮೇಯರ್, ಆ ತೋಟದಲ್ಲಿ ಕುಳಿತಿದ್ದ ಈ ಬಾಲಕನು ಮರದಲ್ಲಿದ್ದ ಒಂದು ಹಕ್ಕಿಗೆ ಹೇಳುತ್ತಿದ್ದ "ನಾನು ವಿಟ್ಟಂಗಟನ್ ನಾನು ಈ ಲಂಡನ್ ಪಟ್ಟಣದ ಮೇಯರು!" ಈ ಮಾತು ಅಲ್ಲೇ ಇದ್ದ ಮೇಯರನಿಗೆ ಕೇಳಿಸಿತು. ಬಾಲಕನ ಧೈರ್ಯವನ್ನು ಕಂಡು ಮೇಯರನು ಬೆರಗಾದನು. ಈ ಬಾಲಕನನ್ನು ತನ್ನ ಮನೆಯಲ್ಲಿ ಇಟ್ಟುಕೊಂಡು ಒಳ್ಳೆಯ ಶಿಕ್ಷಣ ಕೊಡಿಸಿದ್ದ. ಮುಂದೆ ಅದೇಬಾಲಕನು ಲಂಡನ್ ಪಟ್ಟಣದ ಮೇಯರನಾಗಿದ್ದ! ಇದನ್ನೇ ಶ್ರದ್ಧೆ ಅಥವಾ ಜೀವನೋತ್ಸಾಹ ಎನ್ನುತ್ತಾರೆ.

ನನ್ನ ಜನ್ಮ ಕುಂಡಲಿಯಲ್ಲ ಹಾಗೆ ಬರೆದಿದೆ. ಹೀಗೆ ಬರೆದಿದೆ ಎಂದು ನಾವು ಸಂಶಯ ತಾಳಿದರೆ ಹೇಗೆ? 'ಆಯುಷ್ಯದ ರೇಖೆ, ವಿದ್ಯಾ ರೇಖೆ ಎಷ್ಟು ಇದೆ ನಾನೇನು ಮಾಡಲಿ? ಎಂದು ಕೈ ಕಟ್ಟಿ ಕುಳಿತರೆ ಹೇಗೆ? ಅದು ಏನೇ ಇರಲಿ ನಾನು ಸುಖ–ಶಾಂತಿಯಿಂದ ಬದುಕುತ್ತೇನೆ ಎಂಬ ಶ್ರದ್ಧೆ–ವಿಶ್ವಾಸ ನಮ್ಮಲಿರಬೇಕು. ಆದರಿಂದ ನಮ್ಮ ಆಯುಷ್ಯ–ಆನಂದ, ವಿದ್ಯೆ–ಬುದ್ಧಿ–ಬಲಿ ಎಲ್ಲವೂ ಅಭಿವೃದ್ಧಿಯಾಗುತ್ತದೆ. ಜೀವನದಲ್ಲಿ ಸುಖ–ಶಾಂತಿ ನೆಲೆಸುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ನವೆಂಬರ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 880 | 417 | 444 | 178 | 1919 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 126 | 62 | 39 | 66 | 293 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 166 | 22 | 64 | 41 | 293 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 840 | 457 | 419 | 203 | 1919 |
| ನವೆಂಬರ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 293 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 293 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7258 | 1310 | 2204 | 778 | 11550 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 245 | 542 | 193 | 2064 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6174 | 1065 | 1662 | 585 | 9486 |
| ನವೆಂಬರ್ 2025ರ ತಿಂಗಳಿನಲ್ಲಿ ಒಟ್ಟು 58 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಪ್ರತಿ ನಗರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಲು ಕ್ರಮ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ

## ದಿನಾಂಕ 10 ಮತ್ತು 11ನೇ ನವೆಂಬರ್ 2025ರಂದು ದೆಹಲಿಯಲ್ಲಿ ನ್ಯಾಫ್‌ಕಾಬ್‌ರವರ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಸಹಕಾರ ಸಮ್ಮೇಳನ – "ಕೂಪ್ ಕುಂಭ 2025"



ಅಂತರರಾಷ್ಟ್ರೀಯ ಸಹಕಾರ ಸಮ್ಮೇಳನದ ಉದ್ಘಾಟನೆ




ಅಂತರರಾಷ್ಟ್ರೀಯ ಸಹಕಾರ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು

**ನವದೆಹಲಿ :** ನ್ಯಾಷನಲ್ ಫೆಡರೇಷನ್ ಆಫ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ಸ್ ಅಂಡ್ ಕ್ರೆಡಿಟ್ ಸೊಸೈಟೀಸ್ ಲಿ., ನವದೆಹಲಿ ಇವರ ವತಿಯಿಂದ ಅಂತರ ರಾಷ್ಟ್ರೀಯ ಸಹಕಾರ ಸಮ್ಮೇಳನವನ್ನು ದಿನಾಂಕ 10 ಹಾಗೂ 11ನೇ ನವೆಂಬರ್ 2025ರಂದು ನವದೆಹಲಿಯಲ್ಲಿ ಆಯೋಜಿಸಲಾಗಿತ್ತು.

ಈ ಸಮ್ಮೇಳನದ ಉದ್ಘಾಟನೆಯನ್ನು ಸನ್ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾರವರು ಉದ್ಘಾಟಿಸಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ ರವರು ನವದೆಹಲಿಯಲ್ಲಿ ನಡೆದ "ಕೋ–ಆಪ್ ಕುಂಭ 2025" ಎಂಬ ಅಂತರ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ, ಭಾರತದ ನಗರ ಸಹಕಾರಿ ಸಾಲ ವಲಯದ ಪರಿವರ್ತನೆ ಮತ್ತು ಡಿಜಿಟಲ್ ಸಬಲೀಕರಣಕ್ಕಾಗಿ ಸಮಗ್ರ ಮಾರ್ಗಸೂಚಿಯನ್ನು ವಿವರಿಸಿದರು.

ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಪ್ರತಿ ನಗರದಲ್ಲಿ ನಗರ ಸಹಕಾರಿ ಬ್ಯಾಂಕ್ ಅನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಘೋಷಿಸಿದರು. "ಸಹಕಾರಿ ಚಳುವಳಿ ಅಭಿವೃದ್ಧಿಯ ಅತ್ಯಂತ ಸಮಗ್ರ ಮಾದರಿಯಾಗಿದೆ" ಎಂದು ಅವರು ಹೇಳಿದರು, ಸಹಕಾರಿ ಸಂಸ್ಥೆಗಳು ಆರ್ಥಿಕ ಬೆಳವಣಿಗೆಗೆ ಮಾತ್ರವಲ್ಲದೆ ಸಾಮಾಜಿಕ ಸಮಾನತೆಗೂ, ವಿಶೇಷವಾಗಿ ಸಣ್ಣ ವ್ಯಾಪಾರಿಗಳು, ಉದ್ಯಮಿಗಳು ಮತ್ತು ಯುವಕರಿಗೆ ಅತ್ಯಗತ್ಯ ಎಂದು ಅವರು ಹೇಳಿದರು.

ಅಂಬ್ರೆಲ್ಲಾ ಆರ್ಗನೈಸೇಶನ್ ಎರಡು ಪ್ರಮುಖ ಡಿಜಿಟಲ್ ಉಪಕ್ರಮಗಳನ್ನು ಪ್ರಾರಂಭಿಸಿದ್ದು, ಅವುಗಳೆಂದರೆ ಸಹಕಾರ್ ಡಿಜಿ–ಪೇ ಮತ್ತು ಸಹಕಾರ್ ಡಿಜಿ–ಲೋನ್. ಈ ಅಪ್ಲಿಕೇಶನ್‌ಗಳು ಭಾರತದ ಡಿಜಿಟಲ್ ಪಾವತಿ ಕ್ರಾಂತಿಯ ಭಾಗವಾಗುವಂತೆ ಮಾಡುತ್ತದೆ, ತಳಮಟ್ಟದ ಹಣಕಾಸು ಸಂಸ್ಥೆಗಳು ಮತ್ತು ಮುಖ್ಯವಾಹಿನಿಯ ಬ್ಯಾಂಕಿಂಗ್ ನಡುವಿನ ತಂತ್ರಜ್ಞಾನ ಅಂತರವನ್ನು ಕಡಿಮೆ ಮಾಡುತ್ತದೆ ಎಂದು ಹೇಳಿದರು. "ಈ ವೇದಿಕೆಗಳು ಡಿಜಿಟಲ್ ಕ್ರಾಂತಿಯಲ್ಲಿ ಸಹಕಾರಿ ವಲಯದ ಭಾಗವಹಿಸುವಿಕೆಯ ಸಂಕೇತಗಳಾಗುತ್ತವೆ".

ಸಹಕಾರ ಸಚಿವಾಲಯವು (MoC) ಸಹಕಾರಿಗಳ ಎಲ್ಲಾ ವಲಯಗಳಿಗೆ ಅಂತರರಾಷ್ಟ್ರೀಯ ಸಹಕಾರಿ ವರ್ಷ 2025 ಅನ್ನು ಅದ್ದೂರಿಯಾಗಿ ಆಚರಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿಯಲ್ಲಿ ಸಹಕಾರ ವಲಯದ ಕೊಡುಗೆಯನ್ನು ವಿಶೇಷವಾಗಿ ಬೆಳಸಲು ಸಲಹೆ ನೀಡಿದೆ.

ಸಹಕಾರ ಸಚಿವಾಲಯದ ರಚನೆಯ ನಂತರ ಅದರ ಸಾಧನೆಗಳನ್ನು ವಿವರಿಸಿದ ಅವರು, ಸಹಕಾರಿ ರಚನೆಯನ್ನು ಆಧುನೀಕರಿಸಲು, ವಲಯ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ಹಲವಾರು ನೀತಿ ಸುಧಾರಣೆಗಳನ್ನು ಪರಿಚಯಿಸಲಾಗಿದೆ ಎಂದು ಹೇಳಿದರು. "ಕಳೆದ ಎರಡು ವರ್ಷಗಳಲ್ಲಿ ಮಾತ್ರ, ಈ ವಲಯದಲ್ಲಿನ ಅನುತ್ಪಾದಕ ಆಸ್ತಿಗಳನ್ನು (NPA) 2.8% ರಿಂದ 0.6% ಕ್ಕೆ ಇಳಿಸಲಾಗಿದೆ, ಇದು ಪ್ರಮುಖ ಯಶಸ್ಸು".

ಸಚಿವಾಲಯದ ನಾಲ್ಕು ಪ್ರಮುಖ ಗುರಿಗಳನ್ನು ವಿವರಿಸಿದ ಶ್ರೀ ಅಮಿತ ಶಾರವರು ಸಹಕಾರಿಗಳಲ್ಲಿ ಯುವಜನರನ್ನು ತೊಡಗಿಸುವ ಮೂಲಕ ಜೆನೆರೇಷನ್ ಸಹಕಾರನ್ನು ನಿರ್ಮಿಸುವುದು, ಉದಯೋನ್ಮುಖ ಸವಾಲುಗಳನ್ನು ಎದುರಿಸಲು ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದು, ಎಲ್ಲ ನಗರಗಳಲ್ಲಿ ನಗರ ಸಹಕಾರಿ ಬ್ಯಾಂಕ್‌ಗಳನ್ನು ವಿಸ್ತರಿಸುವುದು ಮತ್ತು ಸಹಕಾರಿ ಮಾದರಿಯ ಮೂಲಕ ದುರ್ಬಲ ವರ್ಗಗಳನ್ನು ಸಬಲಗೊಳಿಸುವುದು. ಸಾಮರ್ಥ್ಯವೃದ್ಧಿಗಾಗಿ, ಹೊಸದಾಗಿ ಸ್ಥಾಪಿತವಾದ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಸಹಕಾರಿ ಪರಿಸರ ವ್ಯವಸ್ಥೆಯ ಶಿಕ್ಷಣ ಮತ್ತು ಸಂಶೋಧನಾ ಅಗತ್ಯಗಳನ್ನು ಪೂರೈಸಲಿದೆ ಎಂದು ಅವರು ಹೇಳಿದರು.

ಜೀವನೋಪಾಯವನ್ನು ಸುಧಾರಿಸುವಲ್ಲಿ ಸಹಕಾರಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಹೆಚ್ಚುತ್ತಿರುವ ಜೀವನಮಟ್ಟ ಮತ್ತು ಎಲ್ಲರನ್ನೂ ಒಳಗೊಂಡ ಭಾಗವಹಿಸುವಿಕೆಯೊಂದಿಗೆ ಜಿಡಿಪಿ ಅಂಕಿಅಂಶಗಳು ಮಾತ್ರ

ರಾಷ್ಟ್ರದ ನಿಜವಾದ ಪ್ರಗತಿಯನ್ನು ಅಳೆಯಲು ಸಾಧ್ಯವಿಲ್ಲ. "ಸಹಕಾರ ಸಂಸ್ಥೆಗಳು ಅಭಿವೃದ್ಧಿ ಕೊನೆಯ ವ್ಯಕ್ತಿಯನ್ನು ತಲುಪುವುದನ್ನು ಖಚಿತಪಡಿಸುತ್ತವೆ" ಎಂದು ಅವರು ಹೇಳಿದರು, ರಾಜ್ಯಗಳು ಮತ್ತು ಪಾಲುದಾರರನ್ನು ಪಾರದರ್ಶಕವಾಗಿ ಮತ್ತು ನವೀಕೃತ ವಿಶ್ವಾಸದಿಂದ ಕೆಲಸ ಮಾಡಲು ಪ್ರೋತ್ಸಾಹಿಸಿದರು.

ಭಾರತೀಯ ಸಹಕಾರಿ ಸಂಘಗಳ ಜಾಗತಿಕ ಮನ್ನಣೆಯನ್ನು ಉಲ್ಲೇಖಿಸಿ, ಅಂತರರಾಷ್ಟ್ರೀಯ ಸಹಕಾರಿ ಒಕ್ಕೂಟವು ಅಮುಲ್ ಮತ್ತು ಇಫ್ಕೊವನ್ನು ವಿಶ್ವದ ಅಗ್ರ ಎರಡು ಸಹಕಾರಿ ಸಂಸ್ಥೆಗಳಾಗಿ ಶ್ರೇಣೀಕರಿಸಿದೆ. "ಸಹಕಾರಿ ಕಲ್ಪನೆ ಮತ್ತು ಸಂಸ್ಕೃತಿ ಪ್ರಸ್ತುತ ಮತ್ತು ಬಲವಾಗಿ ಉಳಿದಿದೆ ಎಂದು ಇದು ಸಾಬೀತುಪಡಿಸುತ್ತದೆ" ಎಂದು ಅವರು ಹೇಳಿದರು. 3.6 ಮಿಲಿಯನ್ ರೈತರಿಂದ ನಡೆಸಲ್ಪಡುವ ಅಮುಲ್, ಅವರಲ್ಲಿ ಶೇ. 65 ರಷ್ಟು ಮಹಿಳೆಯರು, 18,000 ಗ್ರಾಮ ಸಂಘಗಳು ಮತ್ತು 18 ಜಿಲ್ಲಾ ಒಕ್ಕೂಟಗಳ ಮೂಲಕ ಕಾರ್ಯನಿರ್ವಹಿಸುತ್ತದೆ, ಪ್ರತಿದಿನ 30 ಮಿಲಿಯನ್ ಲೀಟರ್ ಹಾಲು ಸಂಗ್ರಹಿಸುತ್ತದೆ. 2024–25 ರಲ್ಲಿ ರೂ. 90,000 ಕೋಟಿ ಮೀರಿದ ವಹಿವಾಟಿನೊಂದಿಗೆ, ಅಮುಲ್ ಸಹಕಾರಿ ಯಶಸ್ಸಿಗೆ ಉದಾಹರಣೆಯಾಗಿದೆ.

"ಸಹಕಾರಿ ಸಂಘಗಳ ಸಂಘ" ಎಂದು ಕರೆಯಲ್ಪಡುವ ಇಫ್ಕೋ 35,000ಕ್ಕೂ ಹೆಚ್ಚು ಸದಸ್ಯ ಸಂಘಗಳನ್ನು ಹೊಂದಿದೆ ಮತ್ತು ಐದು ಕೋಟಿಗೂ ಹೆಚ್ಚು ರೈತರನ್ನು ಪ್ರತಿನಿಧಿಸುತ್ತದೆ. ರೂ.41,000 ಕೋಟಿ ವಹಿವಾಟು ಮತ್ತು ರೂ.3,000 ಕೋಟಿ ಲಾಭದೊಂದಿಗೆ, ಇದು ಭಾರತದ ಹಸಿರು ಕ್ರಾಂತಿಯ ಬೆನ್ನೆಲುಬಾಗಿದೆ. ಇಫ್ಕೋದ ನ್ಯಾನೊ ರಸಗೊಬ್ಬರಗಳನ್ನು ಈಗ ಬ್ರೆಜಿಲ್, ಓಮನ್ ಮತ್ತು ಯುನೈಟೆಡ್ ಸ್ಟೇಟ್ಸ್ ಸೇರಿದಂತೆ 65 ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಕೋ–ಆಪ್ ಕುಂಭ 2025 ರಲ್ಲಿ ಪ್ರಾರಂಭಿಸಲಾದ ಡಿಜಿಟಲ್ ಉಪಕ್ರಮಗಳು ಭಾರತದ ಸಹಕಾರಿ ಬ್ಯಾಂಕಿಂಗ್ ವಲಯಕ್ಕೆ ಹೊಸ ಹಾದಿಯನ್ನು ರೂಪಿಸುತ್ತವೆ, ಸಮುದಾಯಗಳನ್ನು ಸಬಲೀಕರಣಗೊಳಿಸುತ್ತವೆ, ಆರ್ಥಿಕ ಸೇರ್ಪಡೆಯನ್ನು ಹೆಚ್ಚಿಸುತ್ತವೆ ಮತ್ತು ಸಹಕಾರಿ ಮಾದರಿಯ ಮೂಲಕ ಸುಸ್ಥಿರ ಬೆಳವಣಿಗೆಯನ್ನು ಹೆಚ್ಚಿಸುತ್ತವೆ.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಮಂಜುನಾಥ ಎಸ್.ಕೆ, ಶ್ರೀಮತಿ ಭಾರತಿ ಜಿ ಭಟ್, ಶ್ರೀ ಮಲ್ಲಿಕಾರ್ಜುನ ಹೊರಕೇರಿ ಹಾಗೂ ಶ್ರೀ ಕೆ. ಶಿವಲಿಂಗಪ್ಪರವರು ಭಾಗವಹಿಸಿದ್ದರು.

## ಡಿಸೆಂಬರ್ 28 ರಂದು ಬೆಳಗಾವಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ಸಮಾರೋಪ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ 25 ವರ್ಷಗಳು ದಿನಾಂಕ 01.01.2025 ರಂದು ತುಂಬಿದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ 2750ಕ್ಕೂ ಹೆಚ್ಚು ಏಕ ಕಾಲಕ್ಕೆ ಸಹಕಾರಿ ಧ್ವಜಾರೋಹಣ ಮಾಡಿ ಇಂಡಿಯಾ ಬುಕ್ ಆಫ್ ರೇಕಾಡ್ ನಲ್ಲಿ ದಾಖಲಿಸಲಾಗಿದೆ ಮತ್ತು ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ಅನೇಕ ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ದಿನಾಂಕ 22.08.2025 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಜತ ಮಹೋತ್ಸವ ಉದ್ಘಾಟನೆಯನ್ನು ಅದ್ದೂರಿಯಿಂದ ನೆರವೇರಿಸಿ ಸ್ಮರಣ ಸಂಚಿಕೆ ಬಿಡುಗಡೆ, ಸಹಕಾರಿಗಳಿಗೆ ಸನ್ಮಾನ, ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ, ಸೌಹಾರ್ದ ಸಹಕಾರಿ ಕ್ಷೇತ್ರದ ಸಂಬಂಧಿಸಿದ ಅನೇಕ ಪುಸ್ತಕಗಳ ಬಿಡುಗಡೆ ಮಾಡಲಾಗಿದೆ. ವರ್ಷವಿಡಿ ರಾಜ್ಯದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯದಾದ್ಯಂತ ಯುವಕರಿಗಾಗಿ ಯುವಕರು ಹಾಗೂ ಸಹಕಾರ, ಸಹಕಾರಿಗಳ ನಿರ್ದೇಶಕರಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ, ಮಹಿಳೆಯರಿಗಾಗಿ ಎಲ್ಲ ಪ್ರಾಂತೀಯ ಕಛೇರಿಗಳ ಮೂಲಕ ವಿಶೇಷ ತರಬೇತಿಗಳನ್ನು ಕ್ಲಸ್ಟರ್ ತರಬೇತಿಗಳನ್ನು ಸಂಪರ್ಕ, ಸಮಾಲೋಚನಾ ಹಾಗೂ ಸಹಕಾರ ಸಪ್ತಾಹದ ಆಚರಣೆಗಳನ್ನು ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ನಿರ್ವಹಿಸಲಾಗಿದೆ.

**ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 28.12.2025ರಂದು ಬೆಳಗಾವಿಯ ಕೆ.ಎಲ್.ಇ ಸಂಸ್ಥೆಯ ಜೆ.ಎನ್.ಎಂ.ಸಿ ಆವರಣ, ಡಾ. ಬಿ.ಎಸ್ ಜಿರ್ಗೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.**

ಈ ಕಾರ್ಯಕ್ರಮದಲ್ಲಿ ರಾಜ್ಯದ ಹಾಗೂ ವಿಶೇಷವಾಗಿ ಬೆಳಗಾವಿ ವಿಭಾಗ 3000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವಂತೆ ವ್ಯವಸ್ಥೆ ಮಾಡಲಾಗುವುದು ಈ ಸಂದರ್ಭದಲ್ಲಿ ಕಾಯ್ದೆ ಪ್ರಾರಂಭವಾಗಿನಿಂದ ಇಲ್ಲಿಯವರೆಗಿನ ಸಂಯುಕ್ತ ಸಹಕಾರಿಯ ಎಲ್ಲಾ ನಿರ್ದೇಶಕರುಗಳನ್ನು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮವಿಡುವುದು, ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸನ್ಮಾನಿಸುವುದು, ಕಾಯ್ದೆ ರಚನೆಯಾಗಿದ್ದ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ಗುರುತಿಸಿ ಗೌರವಿಸುವುದು, ಸೌಹಾರ್ದ ಸಹಕಾರಿ ಚಳುವಳಿಯ ಹಾಗೂ ಸಂಯುಕ್ತ ಸಹಕಾರಿಯ ಡಾಕ್ಯುಮೆಂಟರಿ ಸಿದ್ಧಪಡಿಸಿ ಬಿಡುಗಡೆ ಕ್ರಮವಿಡುವುದು, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ 25 ವರ್ಷಗಳ ಸಾಧನೆ ಕೈಪಿಡಿ ಸಿದ್ಧಪಡಿಸುವುದು ಮತ್ತು ಬಿಡುಗಡೆಗೆ ಕ್ರಮವಿಡುವುದು. 50 ಪ್ರಥಮ ಸಹಕಾರ ಸಂಘಗಳ (39) ಪ್ರಥಮ ಸಹಕಾರಿಗಳಿಗೆ ಸನ್ಮಾನ, ಪ್ರದರ್ಶಿನಿ (ಅಲ್ಬಮ್ ಮಾದರಿ) ವ್ಯವಸ್ಥೆ ಮಾಡುವುದು.

# ಶ್ರೀಲಂಕಾ ದೇಶದ ಕೊಲಂಬೊದಲ್ಲಿ ನಡೆದ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಏಶಿಯಾ ವಿಭಾಗದ 19ನೇ ಸಂಶೋಧನಾ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭಾಗಿ



19ನೇ ಸಂಶೋಧನಾ ಸಮ್ಮೇಳನದಲ್ಲಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಹಕಾರಿ ಗಣ್ಯರುಗಳು



ಶ್ರೀಲಂಕಾದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗೆ ಭೇಟಿ

**ಸಹಕಾರ ಕ್ಷೇತ್ರದಲ್ಲಿ ಸಂಶೋಧನೆ ಅಗತ್ಯ ಇದೆ – ಜಿ. ನಂಜನಗೌಡ ಸಿ.ಎ. ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ದಿನಾಂಕ 23 ಹಾಗೂ 24 ನವೆಂಬರ್ 2025 ರಂದು ಶ್ರೀಲಂಕಾ ದೇಶದ ಕೊಲಂಬೊ ನಗರದಲ್ಲಿ "ಸಾನಾಸಾ" ದ ಸಹಯೋಗದೊಂದಿಗೆ ನಡೆದ ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಏಶಿಯಾ ವಿಭಾಗದ ಮೂಲಕ 19ನೇ ಸಂಶೋಧನಾ ಸಮ್ಮೇಳನದಲ್ಲಿ ಭಾಗಿಯಾದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಸಹಕಾರ ಕ್ಷೇತ್ರದ ಮೂಲಕ ವಿಶ್ವದಾದ್ಯಂತ ಅನೇಕ ಪ್ರಗತಿಪರ ಕಾರ್ಯಚಟುವಟಿಕೆಗಳು ನಡೆಯುತ್ತಿವೆ. ಜನಸಾಮಾನ್ಯರಿಗೆ ಹಲವು ವಿಧವಾದ ಸೇವೆಗಳನ್ನು ನೀಡುವ ವ್ಯವಸ್ಥೆಗಳು ಇವೆ. ಈ ಕಾರ್ಯಚಟುವಟಿಕೆಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಡೆಯಬೇಕಾದರೆ ಈ ಕ್ಷೇತ್ರದಲ್ಲಿ ಸಂಶೋಧನೆ ಅಗತ್ಯ. ಸಹಕಾರ ಕ್ಷೇತ್ರದ ಬಗ್ಗೆ ಈ ಸಮ್ಮೇಳನದಲ್ಲಿ ಒಟ್ಟಾರೆ 123 ಪೇಪರ್‌ಗಳು ಬಂದಿದ್ದು ಅವುಗಳಲ್ಲಿ 65 ಪೇಪರ್‌ಗಳು ಪ್ರಸ್ತುತಪಡಿಸುವುದಕ್ಕಾಗಿ ಆಯ್ಕೆಮಾಡಲಾಗಿತ್ತು. ಆಯ್ಕೆಯಾದ 56 ಪೇಪರಗಳನ್ನು ಪ್ರಸ್ತುತಪಡಿಸಲಾಯಿತು. ಈ ಎಲ್ಲಾ ಪೇಪರ್‌ಗಳನ್ನು ಪ್ರಸ್ತುತ ಪಡಿಸಿದ ಸಂಶೋಧನಾಕಾರರು ಅವರ ವಿಷಯಗಳ ಆಯ್ಕೆ ಮತ್ತು ತಮ್ಮ ಪ್ರಸ್ತಾವನೆಯ ಮೂಲಕ ಸಹಕಾರ ಸಮಾಜಕ್ಕೆ ನೀಡಿದ ಸಂದೇಶ ಈ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಆಶಿಸುವುದು ಕಾರ್ಯಕ್ರಮದಲ್ಲಿ ಭಾಗವಹಿಸಿದ 6 ಅಂತರರಾಷ್ಟ್ರೀಯ ಸಹಕಾರಿ ಗಣ್ಯರು ಅಂತರರಾಷ್ಟ್ರಿಯ ಸಹಕಾರಿ ಮೈತ್ರಿ ಸಂಸ್ಥೆ ವಿಶ್ವದಲ್ಲಿ ಸಹಕಾರಿ ಚಳುವಳಿಯ ಬೆಳವಣಿಗೆಯ ಮಹತ್ವವನ್ನು ಅರಿತು ಈ ಚಳುವಳಿಯ ಅಸ್ತಿತ್ವ (ಕೋ-ಆಪರೇಟಿವ್ ಐಡೆಂಟಿಟಿ) ಬಗ್ಗೆ ಹೆಚ್ಚು ಒತ್ತು ಕೊಟ್ಟು ಸಭೆ ಸಮಾರಂಭಗಳನ್ನು ವಿಚಾರ ಗೋಷ್ಠಿಗಳನ್ನು, ವಿಶೇಷವಾಗಿ ಈ ಕ್ಷೇತ್ರದಲ್ಲಿ ಯುವಕರ ಭಾಗವಹಿಸುವಿಕೆಗೆ ಆದ್ಯತೆ ನೀಡಲಾಗುತ್ತದೆ ಎಂದು ತಿಳಿಸಿರುವುದು ಸಹಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಮತ್ತು ಆಸಕ್ತಿಯನ್ನು ನೀಡಿದಂತಾಗಿದೆ.

**ಉತ್ತಮ ಅಭ್ಯಾಸಗಳು ಸುಸ್ಥಿರ ಅಭಿವೃದ್ಧಿಗೆ ಮತ್ತು ಸ್ಥಿತಿಸ್ಥಾಪಕತ್ವದಲ್ಲಿ ಭಾರತೀಯ ಸಹಕಾರ ಸಂಸ್ಥೆಗಳು ಪಾಲು** ವಿಷಯದ ಬಗ್ಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪೇಪರ್ ಮಂಡಿಸಿದರು. ಈ ಪ್ರಸ್ತಾವನೆಯಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ಹಸಿವು ನಿವಾರಣೆ, ಲಿಂಗಸಮಾನತೆ, ಗ್ರಾಮೀಣ ಅಭಿವೃದ್ಧಿ, ನಿರುದ್ಯೋಗ, ಆರೋಗ್ಯ, ಪರಿಸರ ಅಭಿವೃದ್ಧಿ ನಿವಾರಣೆಯಲ್ಲಿ ಸೌಹಾರ್ದ ಸಹಕಾರಿಗಳು ವಹಿಸುತ್ತಿರುವ ಮಹತ್ವದ ಪಾತ್ರದ ಬಗ್ಗೆ ಹಲವಾರು ಉತ್ತಮ ಸೌಹಾರ್ದ ಸಹಕಾರಿಗಳ ಉದಾಹರಣೆಯೊಂದಿಗೆ ವಿವರಿಸಿದರು.

ಈ ಅಂತರರಾಷ್ಟ್ರೀಯ ಸಂಶೋಧನಾ ಸಮ್ಮೇಳದಲ್ಲಿ ಸೌಹಾರ್ದ ಸಹಕಾರಿಗಳ ಎರಡು ವಿಷಯಗಳ ಕುರಿತು ಪೇಪರ್ ಪ್ರಸ್ತುತಪಡಿಸಲಾಯಿತು. ಭಾಗವಹಿಸಿದ ಅನೇಕ ಗಣ್ಯರು, ಸಹಕಾರಿಗಳು ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಶ್ಲಾಘಿಸಿದರು ಮತ್ತು ಇದು ಒಂದು ಮಾದರಿಯಾಗಿದೆ ಎಂದು ಅಭಿಪ್ರಾಯ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಡಾ. ಪಿಚ್ಚೈ ಹಾಗೂ ಡಾ. ಯಶವಂತ ಡೋಂಗ್ರೆ ಉಪಸ್ಥಿತರಿದ್ದರು.

**"ಸಾನಾಸಾ" ಕ್ರೆಡಿಟ್ ಕೋ-ಆಪರೇಟಿವ್ ಸೋಸೈಟಿಗೆ ಭೇಟಿ :**

ಶ್ರೀಲಂಕಾ ಕ್ರೆಡಿಟ್ ಸಹಕಾರ ಸಂಘಗಳ ಮಹಾಮಂಡಳದ ಈ ಸಮ್ಮೇಳನದ ಅಂಗವಾಗಿ ಪ್ರತಿನಿಧಿಗಳನ್ನು "ಸಾನಾಸಾ" ಕ್ರೆಡಿಟ್ ಕೋ-ಆಪರೇಟಿವ್ ಸೊಸೈಯಿಟಿಗೆ ಭೇಟಿ ನೀಡಲಾಗಿತ್ತು "ಸಾನಾಸಾ" ಇದೊಂದು ಸ್ವಾಯತ್ತ ಸಂಸ್ಥೆ ಪ್ರಜಾಪ್ರಭುತ್ವ ಆಡಳಿತ ತಳಹದಿ ಗ್ರಾಮೀಣ ಅಭಿವೃದ್ಧಿ ಬಡತನ ನಿರ್ಮೂಲನ, ಉದ್ಯೋಗ ಸೃಷ್ಟಿ, ಶಿಕ್ಷಣ ಹಾಗೂ ಆರೋಗ್ಯ ಒದಗಿಸುವುದು ಇದರ ಮೂಲ ಧ್ಯೇಯ.

ಡಾ. ಕಿರಿವೆಂಡಿಯನ್ ರವರ ನೇತೃತ್ವದಲ್ಲಿ 1906ರಲ್ಲಿ ಪ್ರಾರಂಭವಾಗಿರುವ ಈ ಸಂಸ್ಥೆ ಒಂದು ರಾಜ್ಯ ಮಟ್ಟದ ಸಹಕಾರಿ ಮಹಾಮಂಡಳದಂತೆ ಶ್ರೀಲಂಕಾ ಸರಕಾರದ ಅನೇಕ ಕಾರ್ಯಕ್ರಮಗಳನ್ನು ಜಾರಿಮಾಡುತ್ತಲಿದ್ದು ದೇಶದ 8400 ಸಹಕಾರ ಸಂಸ್ಥೆಗಳು ಈ ಸಂಸ್ಥೆಯ ಸದಸ್ಯರಾಗಿದ್ದಾರೆ. ಈ ಸಂಸ್ಥೆಯಲ್ಲಿ 35 ಲಕ್ಷ ಗ್ರಾಹಕರು, 20000ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಬೇರೆ ಬೇರೆ ರಾಜ್ಯಗಳ ಮತ್ತು ದೇಶದ ಸಹಕಾರಿ ಕ್ಷೇತ್ರದ ಅನಾವರಣ – ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

2 ದಿನ ನಡೆದ ಸಮ್ಮೇಳನ ಅತ್ಯಂತ ವ್ಯವಸ್ಥಿತವಾಗಿ ಉನ್ನತ ಮಟ್ಟದ್ದಾಗಿತ್ತು. ಶ್ರೀಲಂಕ ದೇಶದ ಸಾಂಪ್ರಾಯಿಕ ನೃತ್ಯದೊಂದಿಗೆ ಅತಿಥಿಗಳಿಗೆ ಹಾಗೂ ಪ್ರತಿನಿಧಿಗಳೀಗೆ ಹೃದಯ ಪೂರ್ವಕ ಸ್ವಾಗತ ನೀಡಲಾಯಿತು. 6 ಸಹಕಾರಿ ಗಣ್ಯರ ಭಾಷಣಗಳು, ಸಂಶೋಧನಾಕಾರರಿಂದ ವಿಷಯ ಪ್ರಸ್ತಾವನೆ ಉತ್ತಮವಾಗಿತ್ತು. ಸಹಕಾರಿ ಕ್ಷೇತ್ರದಲ್ಲಿ ಇಂತಹ ಸಂಶೋಧನೆಗಳು ಆಗಿಂದ್ದಾಗ್ಗೆ ನಡೆಯುತ್ತಿದ್ದರೆ ಸಹಕಾರಿ ಕ್ಷೇತ್ರಕ್ಕೆ ಉತ್ತಮ ಮಾರ್ಗದರ್ಶನ ದೊರಕುತ್ತದೆ. ಈ ಕ್ಷೇತ್ರದ ಗುಣಮಟ್ಟ ಸುಧಾರಣೆ ಸಾಧ್ಯವಾಗುತ್ತದೆ.

# ರಾಯಚೂರುನಲ್ಲಿ ವೈಭವಯುತ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ರಾಯಚೂರು** : ದಿನಾಂಕ 15 ನವೆಂಬರ್ 2025ರಂದು ರಾಯಚೂರುನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು, ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ರಾಯಚೂರು ಜಿಲ್ಲಾ ಸಹಕಾರ ಯೂನಿಯನ್, ರಾಯಚೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳು, ಕ್ರೆಡಿಟ್ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು, ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು, ವಸತಿ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಹಕಾರ ಇಲಾಖೆ ಮತ್ತು ಇತರೆ ಎಲ್ಲ ವರ್ಗದ ಸಹಕಾರ ಸಂಘಗಳ ಸಹಯೋಗದೊಂದಿಗೆ ರಾಯಚೂರು ಕೃಷಿ ವಿಶ್ವ ವಿದ್ಯಾಲಯದ ಸಭಾಂಗಣದಲ್ಲಿ ಅತ್ಯಂತ ಅದ್ದೂರಿಯಿಂದ ವೈಭವೋಪ್ರೇರಿತವಾಗಿ ಆಚರಿಸಲಾಯಿತು.

## ಬೈಕ್ ರ್ಯಾಲಿ

ಜಿಲ್ಲೆಯ ವಿವಿಧ ಸಹಕಾರಿ ಸಂಸ್ಥೆಗಳ 100ಕ್ಕೂ ಹೆಚ್ಚು ಸಹಕಾರಿ ಕಾರ್ಯಕರ್ತರುಗಳು ರಾಯಚೂರು ನಗರದ ಗಾಂಧಿ ಸರ್ಕಲ್ ಬಳಿಯಿಂದ ಕೃಷಿ ವಿಶ್ವ ವಿದ್ಯಾಲಯದವರೆಗೆ ಬೈಕ್ ರ್ಯಾಲಿ ನಡೆಸಿದರು. ಈ ರ್ಯಾಲಿ ಪ್ರಾರಂಭಿಸುವುದಕ್ಕೆ ಮುನ್ನ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು, ರಾಷ್ಟ್ರಪಿತ ಶ್ರೀ ಗಾಂಧೀಜಿಯವರ ಪ್ರತಿಮೆಗೆ ಹೂಮಾಲೆ ಹಾಕಿ ರ್ಯಾಲಿಗೆ ಚಾಲನೆ ನೀಡಿದರು. ರ್ಯಾಲಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಜಿ. ಶ್ರೀಧರ, ರಾಯಚೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ, ಜಿಲ್ಲಾ ಬ್ಯಾಂಕ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ್ ಸಹಕಾರ ಇಲಾಖೆಯ ಅಧಿಕಾರಿಗಳು ಮುಂತಾದವರು ಭಾಗವಹಿಸಿದ್ದರು. ಸಹಕಾರ ಧ್ವಜಾವನ್ನು ಹಾರಾಡಿಸುತ್ತ ರ್ಯಾಲಿ ಅತ್ಯಂತ ಆಕರ್ಷಕವಾಗಿ ಕೃಷಿ ವಿಶ್ವವಿದ್ಯಾಲಯದ 1ನೇ ಗೇಟಿನ ವರೆಗೆ ತಲುಪಿತು.





## ಸಹಕಾರಿ ಜಾತಾ

ವಿವಿಧ ವರ್ಗದ ಸಹಕಾರಿ ಸಂಸ್ಥೆಗಳ 500 ಕ್ಕೂ ಹೆಚ್ಚು ಪ್ರತಿನಿಧಿಗಳು ಸಹಕಾರಿ ಬಾವುಟ ಹಾಗೂ ಸಹಕಾರ ಘೋಷಣೆಗಳ ಸಮೇತ ಸಹಕಾರಿ ಜಾತಾದಲ್ಲಿ ಭಾಗವಹಿಸಿದ್ದರು ಜಾತಾದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಹಕಾರಿ ಧ್ವಜವನ್ನು ಹಾರಿಸುವುದರ ಮೂಲಕ ಜಾತಾಗೆ ಚಾಲನೆ ನೀಡಿದರು. ಜಾತಾದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಜಿ. ಶ್ರೀಧರ, ರಾಯಚೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ, ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ್, ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಶೇಖರಗೌಡ ಮಾಲಿಪಾಟೀಲ್, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ದೊಡ್ಡಬಸವರಾಜ, ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೋಡ್, ಸಹಕಾರಿ ಇಲಾಖೆಯ ಜಂಟಿ ನಿಬಂಧಕರಾದ ಹಾಗೂ ನೋಡಲ್ ಅಧಿಕಾರಿಯಾಗಿ ಭಾಗವಹಿಸಿದ್ದ ಶ್ರೀ ಸುರೇಶಗೌಡ, ಜಿಲ್ಲಾ

ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಮ್.ಬಿ. ಪೂಜಾರಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎಮ್. ಆರ್ ಮನೋಹರ, ಲೆಕ್ಕ ಪರಿಶೋಧನಾ ಇಲಾಖೆಯ ಉಪನಿರ್ದೇಶಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 500ಕ್ಕೂ ಹೆಚ್ಚು ಸಹಕಾರಿಗಳು, ಅಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಮುಂಬಾಗದಲ್ಲಿ ಡೊಳ್ಳು ಕುಣಿತ, ಪ್ರದರ್ಶನ ಗೊಂಬೆಗಳ ಕುಣಿತಗಳು ಆಕರ್ಷಣೀಯವಾಗಿದ್ದವು. ಸಹಕಾರಿ ಘೋಷಣೆಗಳು ಮೊಳಗುತ್ತಿದ್ದವು.

## ಸಭಾ ಕಾರ್ಯಕ್ರಮ

ಸಭಾ ಕಾರ್ಯಕ್ರಮವನ್ನು ಶ್ರೀಮತಿ ಪ್ರತಿಭಾ ಗೋನಾಳ ಮತ್ತು ತಂಡದವರಿಂದ ಪ್ರಾರ್ಥನೆ ನಾಡಗೀತೆ ಹಾಗೂ ರೈತ ಗೀತೆಯೋಂದಿಗೆ ಪ್ರಾರಂಭಿಸಲಾಯಿತು.

## ಸಾಲುಮರದ ತಿಮ್ಮಕ್ಕ ರವರಿಗೆ ಶ್ರದ್ಧಾಂಜಲಿ



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಶೀಮತಿ ಸಾಲು ಮರದ ತಿಮ್ಮಕ್ಕರವರು ದಿನಾಂಕ 14.11.2025 ರಂದು ನಿಧನರಾಗಿರುವ ಪ್ರಯುಕ್ತ 2 ನಿಮಿಷ ಮೌನ ಆಚರಿಸಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.



## ಪುಷ್ಪಾರ್ಚನೆ :

ಸಹಕಾರಿ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಇವರ ಭಾವಚಿತ್ರಕ್ಕೆ ಗಣ್ಯರೆಲ್ಲರೂ ಪುಷ್ಪಾರ್ಚನೆ ಮಾಡುವುದರ ಮೂಲಕ ನಮನ ಸಲ್ಲಿಸಿದರು.



## ಧ್ವಜಾರೋಹಣ

ಬೆಳಿಗ್ಗೆ 11ಕ್ಕೆ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿಯವರು ಧ್ವಜಾರೋಹಣ ನೆರವೇರಿಸಿದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರರವರು, ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ. ಶ್ರೀ ಜಿ.ಎನ್. ಪಾಟೀಲ್, ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀಮತಿ ಶೈಲಜಾ ತಪಲಿ, ರಾಯಚೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ವಿಜಯಕುಮಾರ ಪಾಟೀಲ್, ಜಿಲ್ಲಾ ಬ್ಯಾಂಕ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ್ ಕೆ.ಓ.ಎಫ್ ಅಧ್ಯಕ್ಷರಾದ ಹಾಗೂ ಮಾಜಿ ಸಚಿವರಾದ ಶ್ರೀ ವೆಂಕಟರಾವ ನಾಡಗೌಡ, ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಶೇಖರಗೌಡ ಮಾಲಿಪಾಟೀಲ್, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ದೊಡ್ಡಬಸವರಾಜ ಹಾಗೂ ಅನೇಕ ಹಿರಿಯ ಸಹಕಾರಿಗಳು, ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೋಡ, ಸಹಕಾರ ಇಲಾಖೆಯ ನಿಬಂಧಕರ ಕಛೇರಿಯ ಜಂಟಿ ನಿಬಂಧಕರಾದ ಶ್ರೀ ಸುರೇಶಗೌಡ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಮ್ ಬಿ, ಪೂಜಾರಿ, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಮನೋಹರ, ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಸವರಾಜ ಕೊಂಕಲ್ ಸಹಕಾರಿ ಇಲಾಖೆಯ ಅಧಿಕಾರಿಗಳು, ಸಹಕಾರಿ ಸಂಘ ಸಂಸ್ಥೆಗಳ ಅಧಿಕಾರಿಗಳು, ಅನೇಕ ಸಹಕಾರಿಗಳು ಭಾಗವಹಿಸಿದ್ದರು.



## ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ

ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಧ್ವಜಾರೋಹಣದ ನಂತರ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋಧಿಸಿದರು.



## ಸಹಕಾರಿ ಮಾರಾಟ ಮಳಿಗೆಗಳ ಉದ್ಘಾಟನೆ

ನಂತರದಲ್ಲಿ ಸಿಂಧನೂರು ಶಾಸಕರಾದ ಹಂಪನಗೌಡ ಬಾದರ್ಲಿಯವರು ಸಹಕಾರಿ ಮಾರಾಟ ಮಳಿಗೆಗಳ ಉದ್ಘಾಟನೆಯನ್ನು ನೆರವೇರಿಸಿದರು.



## ಸ್ವಾಗತ :

ಸಹಕಾರ ಮಹಾಮಂಡಳದ ಮಾಜಿ ಅಧ್ಯಕ್ಷರೂ ಹಾಲಿ ನಿರ್ದೇಶಕರಾದ ಶ್ರೀ ಶೇಖರಗೌಡ ಮಾಲಿ ಪಾಟೀಲರವರು ಅತಿಥಿ ಗಣ್ಯರನ್ನು ಸ್ವಾಗತಿಸಿದರು.

## ಸ್ವಾಭಿಮಾನಿ ಸಹಕಾರಿ ವಿಶೇಷ ಸಂಚಿಕ ಅತಿಥಿ ಗಣ್ಯರಿಂದ ಬಿಡುಗಡೆ





## ಪ್ರಾಸ್ತಾವಿಕ ನುಡಿ

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ. ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅತಿಥಿ ಗಣ್ಯರನ್ನು ಹಾಗೂ ಸಹಕಾರಿಗಳನ್ನು ಉದ್ದೇಶಿಸಿ ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತ ಸಹಕಾರ ಕ್ಷೇತ್ರ ಇಂದು ಒಂದು ಜೀವನ ಪದ್ಧತಿಯಾಗಿ ಬೆಳೆದಿದೆ. ವಿಶ್ವ ಸಂಸ್ಥೆಯವರು ಈ ಕ್ಷೇತ್ರದ ಅಧ್ಯಯನವನ್ನು ಮಾಡಿ ಈ ಕ್ಷೇತ್ರ ಎಲ್ಲಾ ದೇಶಗಳ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಈ ಕ್ಷೇತ್ರ ಜನ ಸಾಮಾನ್ಯರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಬೆಳೆಯುತ್ತಿದೆ. ಈ ಕ್ಷೇತ್ರ ಇನ್ನೂ ಹೆಚ್ಚು ಬೆಳೆಯಬೇಕು ಅದಕೋಸ್ಕರವಾಗಿ ಸಹಕಾರ ಕ್ಷೇತ್ರದ ವ್ಯಾಪಕವಾಗಿ ಪ್ರಚಾರ ಅಗತ್ಯ. ಅದಕ್ಕಾಗಿ ಸಹಕಾರ ಸಪ್ತಾಹದ ಆಚರಣೆ. ಸಹಕಾರ ಸಪ್ತಾಹದ ಅವಧಿಯಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಜನರಿಗೆ ತಿಳಿಯಪಡಿಸುವುದು, ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿಗೆ ಮಹಿಳೆಯರು ಹಾಗೂ ಯುವಕರು ಪಾಲ್ಗೊಳ್ಳುವಂತೆ ಮಾಡುವುದು ಸಹಕಾರ ಸಂಸ್ಥೆಗಳು ಜನರ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಈ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಪ್ರಚಾರವನ್ನು ಹಮ್ಮಿಕೊಳ್ಳುವುದು ನಕಾರಾತ್ಮಕ ವಿಷಯಗಳು ಆಗದಂತೆ ಎಚ್ಚರ ವಹಿಸುವುದು ಎಂದು ತಿಳಿಸಿದರು.

## ಉದ್ಘಾಟನಾ ಭಾಷಣ : ಗ್ರಾಮೀಣ ಪ್ರದೇಶದಲ್ಲಿ ಸಹಕಾರ ಸಂಘಗಳನ್ನು ಬಲಪಡಿಸಬೇಕು : ಶ್ರೀ ಎನ್.ಎಸ್ ಬೋಸರಾಜು, ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ



ಸಹಕಾರ ಸಂಘಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಮತ್ತು ಯೋಜನೆಗಳಿಗೆ, ರಾಜ್ಯ ಸರ್ಕಾರದ ನಿಯೋಗದೊಂದಿಗೆ ಕೇಂದ್ರಕ್ಕೆ ಮನವಿ ಮಾಡಿದೆ. ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದ್ದು, ಹೆಚ್ಚಿನ ಪ್ರಮಾಣದ ಅನುದಾನ ಒದಗಿ ಬಂದಲ್ಲಿ ಸಹಕಾರ ಸಂಘಗಳು ಗ್ರಾಮೀಣ ಭಾಗದವರೆಗೂ ವಿಸ್ತರಿಸುವ ಪ್ರಯತ್ನ ಮುಂದುವರೆದಿದೆ ಎಂದು ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್ ಬೋಸರಾಜು ಹೇಳಿದರು.

ನಗರದ ಕೃಷಿ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಮಂಡಳ ನಿ., ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ, ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಸೌಹಾರ್ದ ಸಹಕಾರ ಒಕ್ಕೂಟ, ಸಹಕಾರ ಇಲಾಖೆ, ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮೂರು ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ಒಕ್ಕಲುತನ ಮತ್ತು ಪತ್ತಿನ ಸಹಕಾರ ಸಂಘಗಳು ಹಾಗೂ ಇತರೆ ವಿವಿಧ ರೀತಿಯ ಸಹಕಾರ ಸಂಘ ಆಶ್ರಯದಲ್ಲಿ ಆಯೋಜಿಸಿದ್ದ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತಾನಾಡಿದರು.

ಜಿಲ್ಲೆಯಲ್ಲಿ ಕಳೆದ ಅನೇಕ ವರ್ಷಗಳ ಹಿಂದಿನ ಸಹಕಾರ ಸಂಘಗಳು ಇಂದಿನ ಸಹಕಾರ ಒಲೈಕೆ ಮಾಡಿದಾಗ ಸಾಕಷ್ಟು ಅಭಿವೃದ್ಧಿ ಕಂಡಿವೆ. ರೈತರಿಗೆ, ಮಹಿಳೆಯರಿಗೆ ಸಾರ್ವಜನಿಕರಿಗೆ ಸಾಲ ಸೌಲಭ್ಯಗಳನ್ನು ನೀಡಿ ಪ್ರಗತಿ ಹೊಂದಿವೆ ಎಂದರು.

ಕಲಬುರಗಿಯಲ್ಲಿ ಸಹಕಾರ ಭವನ ನಿರ್ಮಾಣಕ್ಕೆ 10 ಕೋಟಿ ನೀಡಿದೆ. ಜಿಲ್ಲಾ ಕೇಂದ್ರದಲ್ಲಿಯೂ ಜಾಗವಿದ್ದು ಸಹಕಾರ ಭವನ ನಿರ್ಮಾಣಕ್ಕೆ 10 ಕೋಟಿ ನೀಡಲು ಪ್ರಯತ್ನಿಸುವುದಾಗಿ ಹೇಳಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅಧ್ಯಕ್ಷರಾದ ಜಿ. ನಂಜನಗೌಡ ಮಾತನಾಡಿ ದೇಶದಲ್ಲಿ 1950ರಲ್ಲಿ ಸಹಕಾರ ಸಂಘವು ಪ್ರಾರಂಭವಾಗಿ ಇಲ್ಲಿಯವರೆಗೆ ಬೆಳೆದು ಬಂದಿದೆ. ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಘಗಳು ಆರ್ಥಿಕತೆಯ ಮೂಲವಾಗಿದ್ದು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಗ್ರಾಮೀಣದತ್ತ ಕೊಂಡೊಯಬೇಕಿದೆ. ಸಹಕಾರ ವಿಷಯ ಕುರಿತು ಶಾಲಾ ಹಂತದಲ್ಲಿಯೇ ಮಾಹಿತಿ ನೀಡುವ ಕೆಲಸ ಮಾಡಿದರೆ ಯುವ ಜನರಿಗೆ ಅನುಕೂಲವಾಗಲಿದೆ. ದೇಶದ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿಗೆ ಪ್ರಯೋಜನವಾಗಲಿದೆ. ಕೇಂದ್ರದ ಮಟ್ಟದಲ್ಲಿ ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯವಿದ್ದು, ಎಲ್ಲಾ ರಾಜ್ಯಗಳಿಗೆ ಶಾಖೆಗಳು ವಿಸ್ತೀರ್ಣವಾಗಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರವು ಪ್ರಯತ್ನಿಸಬೇಕಾಗಿದೆ ಎಂದರು.

ಪ್ರತಿ ವಿಶ್ವವಿದ್ಯಾಲಯದಲ್ಲಿ ಒಂದು ಸಹಕಾರ ಅಧ್ಯಯನ ಕೇಂದ್ರ ಪ್ರಾರಂಭವಾಗಬೇಕು. ಸಹಕಾರ ಸಂಘಗಳು ಕುರಿತು ಶಿಕ್ಷಣ, ಸಂಶೋಧನೆಗೆ ಅನುಕೂಲವಾಗಲಿದೆ. ಇದರಿಂದ ಸಾಕಷ್ಟು ಬದಲಾವಣೆ ಕಾಣಬಹುದು. ಸಹಕಾರ ಕ್ಷೇತ್ರ 2030ಕ್ಕೆ ಹೊಸ ನಾಂಧಿಯಾಗಬೇಕು. ಉದ್ಯೋಗ, ಶಿಕ್ಷಣ, ಅಭಿವೃದ್ಧಿಗೆ


ಮಾನ್ಯ ಸಚಿವರಿಗೆ ಸನ್ಮಾನ

ಸಹಕಾರ ಕ್ಷೇತ್ರ ದಾಪುಗಾಲು ಆಗಬೇಕು ಎಂದರು.

ಸಮಾರಂಭದಲ್ಲಿ ಶಾಸಕರಾದ ಶ್ರೀ ದದ್ದಲ್ ಬಸನಗೌಡ, ಶ್ರೀ ಹಂಪಯ್ಯ ನಾಯಕ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಶರಣಗೌಡ ಬಯ್ಯಾಪುರ, ಶ್ರೀ ಎ ವಸಂತಕುಮಾರ, ಮಾಜಿ ಸಚಿವರಾದ ಹಾಗೂ ಕೆಓಎಫ್ ಅಧ್ಯಕ್ಷರಾದ ಶ್ರೀ ವೆಂಕಟರಾವ್ ನಾಡಗೌಡ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ರಾಯಚೂರು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ವಿಶ್ವನಾಥ ಪಾಟೀಲ ತೋರಣದಿನ್ನಿ, ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ, ಶ್ರೀ ಜಿ. ಶ್ರೀಧರ್, ಶ್ರೀಮತಿ ಶೈಲಜಾ ತಪಲಿ, ಸಹಕಾರ ಮಾರಾಟ ಮಹಾಮಂಡಳ ಅಧ್ಯಕ್ಷರಾದ ಶ್ರೀ ಮಹಾಂತೇಶ್ ಪಾಟೀಲ ಅತ್ತನೂರ, ಶ್ರೀ ಸುರೇಶ ರೆಡ್ಡಿ ಮಾದಿನೂರ, ಮೀನು ಸಹಕಾರ ಮಹಾಮಂಡಳ ನಿರ್ದೇಶಕರಾದ ಶ್ರೀ ಸೈಯದ್, ಶ್ರೀ ಸಂಜಯ್ ಪಾಟೀಲ, ಜೆ.ಆರ್.ಸಿ.ಎಸ್ ಶ್ರೀ ಸುರೇಶ್ ಗೌಡ, ಡಿ. ಆರ್.ಸಿ.ಎಸ್ ಶ್ರೀ ಎಂ ಆರ್ ಮನೋಹರ್, ಶ್ರೀ ವಿಶ್ವನಾಥ ಮಲಕೋಡ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ವಿಜಯ್ ಕುಮಾರ ಪಾಟೀಲ ಶಾವಂತಗೇರ, ನಕ್ಕುಂದಿ ಅಮರೇಗೌಡ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಉತ್ತಮ ಸಹಕಾರ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ

72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಉತ್ತಮ ಸೌಹಾರ್ದ ಸಹಕಾರಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



ಎಲ್ಲ ಗಣ್ಯ ಮಾನ್ಯರನ್ನು ಹಾಗೂ ಮುಖ್ಯ ಅತಿಥಿಗಳನ್ನು ಸ್ವಾಗತ ಸಮಿತಿಯ ಪರವಾಗಿ ಸನ್ಮಾನಿಸಲಾಯಿತು. ನಂತರಲ್ಲಿ ರಾಯಚೂರು ಜಿಲ್ಲೆಯ 5 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, 2 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ, 2 ಟಿ.ಎ.ಪಿ.ಸಿ.ಎಂ.ಎಸ್ ಸಹಕಾರ ಸಂಘಗಳಿಗೆ 1 ಇತರೆ ಸಹಕಾರ ಸಂಘಗಳಿಗೆ, 1 ಪ್ರಾಥಮಿಕ ಹಾಗೂ ಸಹಕಾರಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್, 2 ನೌಕರರ ಪತ್ತಿನ ಸಹಕಾರಿ ಸಂಘಗಳಿಗೆ 2 ಪತ್ತಿನ ಸಹಕಾರ ಸಂಘಗಳಿಗೆ, 5 ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಮತ್ತು ಆಯ್ಕೆ ಮಾಡಿದ ರಾಜ್ಯದ 5 ಉತ್ತಮ ಸೌಹಾರ್ದ ಸಹಕಾರಿಗಳಗೆ ಹಾಗೂ 5 ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನಿಸಲಾಯಿತು.

### ಸನ್ಮಾನಿತ ಉತ್ತಮ ಸೌಹಾರ್ದ ಸಹಕಾರಿಗಳು

1. ಶ್ರೀ ಬಸವೇಶ್ವರ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಣಿವಾಡ, ಬೆಳಗಾವಿ
2. ಓಂಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ, ಉತ್ತರ ಕನ್ನಡ
3. ಸಮಾನ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕೆಳಗೂರು, ಚಿಕ್ಕಮಗಳೂರು
4. ಶ್ರೀ ಸಿದ್ಧಿ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರನಗರ, ಬೆಂಗಳೂರು
5. ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ ರಸ್ತೆ, ಸಿಂಧನೂರು, ರಾಯಚೂರು

### ಸನ್ಮಾನಿತ ಶ್ರೇಷ್ಠ ಸಹಕಾರಿಗಳು

1. ಶ್ರೀ ಸುಭಾಷ್ ಎಮ್ ಗೋಳಶೆಟ್ಟಿ, ಅಧ್ಯಕ್ಷರು, ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಪಾರಿಶ್ವಾಡ, ಬೆಳಗಾವಿ
2. ಶ್ರೀ ಮಲ್ಲಯ್ಯ ಬಸಯ್ಯ ಕಂಬಿ, ಅಧ್ಯಕ್ಷರು, ವಾರಿ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ಅನಗವಾಡಿ, ಬಾಗಲಕೋಟ
3. ಶ್ರೀಮತಿ ಚಂಚಲ ತೇಜೋಮಯ, ಅಧ್ಯಕ್ಷರು, ಯಶಸ್ವಿನಿ ಶ್ರೀ ಮಹಿಳಾ ಸೌಹಾರ್ದ ಸಹಕಾರಿ ನಿ., ಬಲ್ಮಠ, ಮಂಗಳೂರು
4. ಶ್ರೀ ಮಹಾಬಲ ಭಟ್ ಹೆಚ್ ಎಂ, ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ಹೇಮಾದ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ತೀರ್ಥಹಳ್ಳಿ ಶಿವಮೊಗ್ಗ
5. ಶ್ರೀ ಗಿರಿಯಪ್ಪ ಹೊಸಕೇರಿ, ಅಧ್ಯಕ್ಷರು, ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ, ಕೊಪ್ಪಳ

ಸಮಾರಂಭದಲ್ಲಿ ವಿವಿಧ ಸಹಕಾರಿ ಸಂಸ್ಥೆಗಳಿಂದ 1500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ವಂದನಾರ್ಪಣೆ ನೆರವೇರಿಸಿದರು.

# ಯುವಜನ ಮತ್ತು ಸಹಕಾರ ಕುರಿತು ಸಂವಾದ ಕಾರ್ಯಕ್ರಮ

## ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರ ಭಾಗವಹಿಸುವ ಅಗತ್ಯವಿದೆ

### – ಹೆಚ್.ಜೆ ಹನುಮಂತಶೆಟ್ಟಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



**ಬಳ್ಳಾರಿ :** ದೇಶದ ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಯುವಕರ ಪಾತ್ರ ಅತ್ಯಗತ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜೆ.ಹೆಚ್ ಹನುಮಂತಯ್ಯ ಅಭಿಪ್ರಾಯಪಟ್ಟರು. ನಗರದ ಶ್ರೀಮತಿ ಹನುಮಂತಮ್ಮ ಕಾಲೇಜಿನ ಸಭಾಂಗಣದಲ್ಲಿ ದಿನಾಂಕ 04.11.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಸಿರಗುಪ್ಪ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು ಹಾಗೂ ಸಿರುಗುಪ್ಪ ಶಿಕ್ಷಣ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಯುವಜನ ಮತ್ತು ಸಹಕಾರ ಕುರಿತದ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಕಾಲೇಜು ಶಿಕ್ಷಣ ಪೂರ್ಣವಾದ ನಂತರ ಉದ್ಯೋಗಕ್ಕೆ ಸಹಕಾರ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ ಸಹಕಾರ ಕ್ಷೇತ್ರದ ಜ್ಞಾನ ಮತ್ತು ಪರಿಣಿತಿ ಪಡೆದ ಯುವಕರಿಗೆ ಇಲ್ಲಿ ಆದ್ಯತೆ ನೀಡಲಾಗುವುದು ಈ ವಿಚಾರ ಸಂಕಿರ್ಣದಲ್ಲಿ ಮಾಹಿತಿ ಪಡೆದು ಸದುಪಯೋಗ ಪಡೆಸಿಕೊಳ್ಳಲು ಸಲಹೆ ನೀಡಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಿರುವ ನಿವೃತ್ತ ಉಪನ್ಯಾಸಕರಾದ ಶ್ರೀ ಶಿವಕುಮಾರ ಬಳಿಗಾರ ಮಾತನಾಡಿ ಪರಿಸರ ಮತ್ತು ಮಾನವನ ಮಧ್ಯ ಇರುವ ಪರಸ್ಪರ ಸಹಕಾರ ಸಂಬಂಧದ ಮಹತ್ವವನ್ನು ತಿಳಿಸಿದರು. ಸಹಕಾರ ಕ್ಷೇತ್ರಕ್ಕೆ ತನ್ನದೆಯಾದ ಇತಿಹಾಸ ಇದೆ ಕೇವಲ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ ಎಂದು ತಿಳಿಸಿದರು. ಜಾಗತಿಕ ಮಟ್ಟದಲ್ಲಿ ಅನೇಕ ರಂಗಗಳು ವಿಫಲವಾಗಿದ್ದರು ಸಹಕಾರಿ ರಂಗ ಮಾತ್ರ ಬಲಗೊಂಡು ತನ್ನ ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿರುವ ಶ್ರೀ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ರಾಘವೇಂದ್ರ ಆಚಾರ್ಯ ಇವರು ಮಾತನಾಡಿ ರಾಜ್ಯದಲ್ಲಿ 5000 ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿದು ಅನೇಕ ಯುವಕ ಯುವತಿಯರಿಗೆ ಉದ್ಯೋಗ ಅವಕಾಶಗಳನ್ನು ನೀಡಿದೆ ಮುಂಬರುವ ದಿನಗಳಲ್ಲಿ ಯುವಕರು ಸಹಕಾರಿ ರಂಗದಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇ ನುಡಿದರು. ವಿಷ್ಣು ವಿಲಾಸ ಸೌಹಾರ್ದ ಸಹಕಾರಿ ಸಂಘ ನಿ.,ಸಿರುಗುಪ್ಪ ಇದರ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಅನಿಲಕುಮಾರ ಇವರು ಸ್ವಾಗತಿಸಿದರು. ವೇದಿಕೆ ಮೇಲೆ ಎಸ್.ಇ.ಎಸ್. ವಿದ್ಯಾ ಸಂಸ್ಥೆ ಸಿರಗುಪ್ಪ. ಇದರ ಬಿ.ಇ ಅವಿನಾಶ್ ಕಾರ್ಯದರ್ಶಿಗಳಾದ ಶ್ರೀ ಅವಿನಾಶ್, ಬಲಗುಂದಿ ಬನ್ನಿ ಮಹಾಕಾಳಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗಾದಿಲಿಂಗನಗೌಡ ಕಾಲೇಜು ಪ್ರಾಚಾರ್ಯರಾದ ಜಿ. ಬಸವನಗೌಡ ಉಪಸ್ಥಿತರಿದ್ದರು.

ವೀರಶೆಟ್ಟಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನಿರೂಪಿಸಿದರು. ಪವಿತ್ರಾ ಮತ್ತು ಮೌನಿಕಾ ಪ್ರಾರ್ಥಿಸಿದರು, ಶರಣಬಸವ ವಂದಿಸಿದರು. ಸಹಕಾರ ಕುರಿತು ಆಯೋಜಿಸಿದ ಪ್ರಬಂಧ ಸ್ವರ್ದೆಯಲ್ಲಿ ಪ್ರಥಮ ಸ್ಥಾನವನ್ನು ಶ್ರೀ ಹನುಮೇಶ ದ್ವಿತಿಯ ಸ್ಥಾನವನ್ನು ಶ್ರೀಮತಿ ಸೌಮ್ಯ ಹಾಗೂ ತೃತಿಯ ಸ್ಥಾನವನ್ನು ಶ್ರೀಮತಿ ಎಸ್ ಅಂಜಲಿ ಇವರಿಗೆ ಬಹುಮಾನ ನೀಡಿ ಸತ್ಕರಿಸಲಾಯಿತು. ಕಾಲೇಜು ಉಪನ್ಯಾಸಕರು ಇತರೆ ಸಿಬ್ಬಂದಿಗಳು ಹಾಗೂ ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿ,ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

---



**ಬೆಳಗಾವಿ :** ದಿನಾಂಕ 22.11.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಪ್ರಾಂತೀಯ ಕಚೇರಿ ಬೆಳಗಾವಿ ಮತ್ತು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ, ಚಿಕ್ಕೋಡಿ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಿಬ್ಬಂದಿಗಳಿಗೆ ಮತ್ತು ಚಿಕ್ಕೋಡಿ ತಾಲೂಕಿನ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ, ಚಿಕ್ಕೋಡಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ಉದ್ಘಾಟಿಸಿದರು. ತರಬೇತಿಯಲ್ಲಿ ಸಾಲ ವಸೂಲಾತಿ ನಿರ್ವಹಣಾ ಕೌಶಲ್ಯಾಭಿವೃದ್ಧಿ ವಿಷಯದ ಕುರಿತು ನಿವೃತ್ತ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ಇವರು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 88 ಪ್ರತಿನಿಧಿಗಳು ಭಾಗವಹಿಸಿದ್ದರು.

# ಯುವಜನ ಮತ್ತು ಸಹಕಾರ ಕುರಿತು ಸಂವಾದ ಕಾರ್ಯಕ್ರಮ




**ಮಂಡ್ಯ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಮಂಡ್ಯ ವಿಶ್ವವಿದ್ಯಾಲಯ ಇವರ ಸಂಂ–ಮುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ"ಯುವಜನ ಹಾಗೂ ಸಹಕಾರ ಕುರಿತು ಸಂವಾದ" ಕಾರ್ಯಕ್ರಮವನ್ನು ದಿನಾಂಕ: 04.11.2025ರಂದು "ಸಿಂಡಿಕೇಟ್ ಸಭಾಂಗಣ, 1ನೇ ಮಹಡಿ, ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ ಜಿಲ್ಲೆ ಇಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪಿ ರವಿಕುಮಾರ್‌ಗೌಡ, ಮಾನ್ಯ ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ, ಇವರು ಉದ್ಘಾಟಿಸಿದರು, ಗೌರವ ಉಪಸ್ಥಿತಿಯನ್ನು ಶ್ರೀ ಪ್ರೊ ಕೆ. ಶಿವಚಿತ್ತಪ್ಪ, ಮಾನ್ಯ ಕುಲಪತಿಗಳು ವಹಿಸಿದ್ದರು, ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಖಾದರ್ ಪಾಷಾ, ಮುಖ್ಯ ಹಣಕಾಸು ಅಧಿಕಾರಿ, ಮೈ ಶುಗರ್ ಮಂಡ್ಯ ಹಾಗೂ ಹಣಕಾಸು ಅಧಿಕಾರಿ, ಮಂಡ್ಯ ವಿಶ್ವವಿದ್ಯಾಲಯ, ಶ್ರೀ ಗುರುರಾಜ್ ಬಿ ಟಿ, ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇವರು ನುಡಿದರು. ಈ ಕಾರ್ಯಕ್ರಮದ ಗಣ್ಯರನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ, ಮೈಸೂರು ಇವರು ಸ್ವಾಗತಿಸಿದರು. ಈ ಕಾರ್ಯಕ್ರಮದ ಮೊದಲನೇ ಅವಧಿಯಲ್ಲಿ ಪ್ರೊ. ಕೆ. ಯೋಗನರಸಿಂಹಚಾರಿ, ಕುಲಸಚಿವರು (ಮೌಲ್ಯಮಾಪನ), ಮಂಡ್ಯ ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ "ಸಹಕಾರ ಕ್ಷೇತ್ರದ ಪರಿಚಯ ಹಾಗೂ ಯುವಕರ ಪಾತ್ರ"ದ ಕುರಿತು ಡಾ. ಎ.ಆರ್ ಶ್ರೀನಾಥ್, ಸಂದರ್ಶಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾಲಯ ಹಾಗೂ ನಿರ್ದೇಶಕರು(ನಿ), ಎನ್‌ಸಿಯುಐ, ನವದೆಹಲಿ, ಇವರು ಉಪನ್ಯಾಸ ನೀಡಿದರು.

ಈ ಕಾರ್ಯಕ್ರಮದ ಎರಡನೇ ಅವಧಿಯ ಸಂವಾದ ಕಾರ್ಯಕ್ರಮದಲ್ಲಿ ಶ್ರೀ ಮಂಜುನಾಥ್ ಎಸ್ ಕೆ, ಮಾನ್ಯ ನಿರ್ದೇಶಕರು, ಇವರ ಅಧ್ಯಕ್ಷತೆಯಲ್ಲಿ, ಸಂವಾದಕಾರರಾಗಿ ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಇವರು ನಡೆಸಿಕೊಟ್ಟರು, ಈ ಸಂವಾದ ಕಾರ್ಯಕ್ರಮದಲ್ಲಿ ಶ್ರೀ ಹೆಚ್ ಆರ್ ನಾಗಭೂಷಣ್, ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಹಾಗೂ ಶ್ರೀ ಖಾದರ್ ಪಾಷಾ, ಮುಖ್ಯ ಹಣಕಾಸು ಅಧಿಕಾರಿ, ಡಾ. ಎ. ಆರ್ ಶ್ರೀನಾಥ್, ಸಂದರ್ಶಕ ಪ್ರಾಧ್ಯಾಪಕರು ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು, ಕಾಲೇಜು ವಿದ್ಯಾರ್ಥಿಗಳು ಪ್ರಶ್ನೋತ್ತರಗಳನ್ನು ಕೇಳುವ ಮೂಲಕ ಈ ಸಂವಾದ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯವಾಯಿತು.

ನಂತರ ಮಧ್ಯಾಹ್ನದ ಅವಧಿಯಲ್ಲಿ ಉದ್ದೇಶಿತ ಕ್ಯಾಂಪಸ್ ಕೋ ಅಪರೇಟಿವ್ ರಚನೆ ಮಾಡುವ ಕುರಿತು ಡಾ.ಲೋಕೇಶ್ ಕೆ.ಪಿ ಸಹ ಪ್ರಾಧ್ಯಾಪಕರು ಇವರ ಅಧ್ಯಕ್ಷತೆಯಲ್ಲಿ ಡಾ. ದಿಲ್‌ಷಾದ್ ಬೇಗಂ, ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗ, ಶ್ರೀ ಪ್ರೇಮ್‌ಸಿಂಗ್ ಹಾಗೂ ಡಾ. ಶಿವರಾಂ ಸಹ ಪ್ರಾಧ್ಯಾಪಕರುಗಳು ಇವರ ಉಪಸ್ಥಿತಿಯಲ್ಲಿ ಕಾಲೇಜು ವಿಧ್ಯಾರ್ಥಿಗಳ ಸಮ್ಮುಖದಲ್ಲಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಒಂದು ಸಹಕಾ–ರಿಯನ್ನು ರಚನೆ ಮಾಡಿ ಕಾರ್ಯನಿರ್ವಹಿಸುವ ಕುರಿತು ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ವಿಷಯ ನಿರ್ವಹಣೆಯನ್ನು ಮಾಡಿದರು, ಈ ಸಂದರ್ಭದಲ್ಲಿ ಶ್ರೀ ಬಾಬು ಪಠಾಣ್, ತರಬೇತಿ ಅಧಿಕಾರಿ, ಕ.ರಾ.ಸೌ.ಸಂ.ನಿ.,ಬೆಂಗಳೂರು ಇವರು ಭಾಗವಹಿಸಿದ್ದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಿರೂಪಿಸಿದರು, ವಂದನಾರ್ಪಣೆಯನು ಶ್ರೀ ಅಶೋಕ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು.

ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 290ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು, ಸಿಬ್ಬಂದಿಗಳ ಹಾಗೂ ಸ್ಥಳೀಯ ಸೌಹಾರ್ದ ಸಹಕಾರಿಗಳ ಪಧಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ನೂತನ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ ಇವರಿಗೆ ಸನ್ಮಾನ

**ಮೈಸೂರು :** ದಿನಾಂಕ : 04.11.2025ರಂದು ಮೈಸೂರು ಪ್ರಾಂತೀಯ ಕಚೇರಿಯಲ್ಲಿ ಸಂಯುಕ್ತ ಸಹಕಾರಿಗೆ ನೂತನವಾಗಿ ಆಯ್ಕೆಯಾಗಿರುವ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ ಇವರನ್ನು ಪ್ರಾಂತೀಯ ಕಚೇರಿಯಲ್ಲಿ ಅಭಿನಂದಿಸಲಾಯಿತು ಹಾಗೂ ಈ ಸಂದರ್ಭದಲ್ಲಿ ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್ ಕೆ ರವರು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಪ್ರಾಂತೀಯ ಅಧಿಕಾರಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಭಾಗಿಯಾಗಿದ್ದರು.

# ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಸಂಘ, ರಾಯಚೂರು ಮತ್ತು ರಾಯಚೂರು, ಮಾನವಿ, ಸಿರವಾರ ಹಾಗೂ ದೇವದುರ್ಗ ತಾಲ್ಲೂಕು ಸೌಹಾರ್ದ ಸಹಕಾರಿಗಳ ಕ್ರೀಡಾಕೂಟ







**ರಾಯಚೂರು :** ಕರ್ನಾಟಕ ರಾಜ್ಯ ಸೌಹಾರ್ದ ಕಾಯ್ದೆಯ ರಜತ ಮಹೋತ್ಸವ ಮತ್ತು ಅಂತರರಾಷ್ಟ್ರೀಯ ಸಹಕಾರ ವರ್ಷ ಅಂಗವಾಗಿ ನವೆಂಬರ್–21&22 ರಂದು ಎರಡು ದಿನಗಳ ಕಾಲ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗಿತ್ತು ಇದರ ಸಮಾರೋಪ ಸಮಾರಂಭವನ್ನು ದಿನಾಂಕ 23–11–2025ರಂದು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬಸವೇಶ್ವರ ಪ್ರೇಕ್ಷಾಗ್ರಹದಲ್ಲಿ ಏರ್ಪಡಿಸಲಾಗಿತ್ತು, ಕಾರ್ಯಕ್ರಮವನ್ನು ಉದ್ಘಾಟಿಸಿ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿಮಾಧ್ಯಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಇವರು ಮಾತನಾಡುತ್ತ ದೇಶದ ಆರ್ಥಿಕ ಪ್ರಗತಿಯಲ್ಲಿ ಸಹಕಾರಿ ರಂಗದ ಪಾತ್ರದ ಬಗ್ಗೆ ಮತ್ತು ಸಹಕಾರಿಗಳನ್ನು ಸುಸ್ಥಿರ ಬೆಳವಣಿಗೆಯತ್ತ ಕೊಂಡ್ಯಯುವುದು ಸಹಕಾರಿಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಪಾತ್ರ ಬಹುಮುಖ್ಯವಾಗಿರುತ್ತದೆ ಎಂದರು ಮತ್ತು ಇಂತಹ ಕ್ರೀಡಾಕೂಟವನ್ನು ಅಯೋಜಿಸುವುದರಿಂದ ದಿನನಿತ್ಯದ ಕೆಲಸದ ಒತ್ತಡದಿಂದ ಹೋರಬರಲು ಸಹಾಯವಾಗಲಿದೆ ಎಂದು ಹೇಳುತ್ತಾ ಇಂತಹ ಕ್ರೀಡಾಕೂಟವನ್ನು ಆಯೋಜಿಸಲು ಸಹಕರಿಸಿದ 4 ತಾಲೂಕಿನ ಎಲ್ಲಾ ಸಹಕಾರಿಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಕಲಬುರಗಿ ವಿಭಾಗೀಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ್ ಮಹಾಜನ ರವರು ಮಾತನಾಡುತ್ತ ಸಹಕಾರಿ ರಂಗವು ಕೇವಲ ಸಾಲ ವಿತರಣೆ ಅಲ್ಲದೆ ಸಾಮಾಜೀಕ ಚಟುವಟಿಕೆಗಳಲ್ಲಿ ಕೂಡ ತನ್ನ ಕೊಡುಗೆಯನ್ನು ನೀಡುತ್ತಿದೆ ಎನ್ನುವುದರ ಬಗ್ಗೆ ತಮ್ಮ ಸಹಕಾರಿ ಸಂಸ್ಥೆಯಾದ ಶ್ರೀ ಸಿದ್ಧಿ ವಿನಾಯಕ ಪತ್ತಿನ ಸೌಹಾರ್ದ ಕಲಬುರಗಿ ವತಿಯಿಂದ ಮಹಿಳೆಯರಿಗೆ ಅತ್ಯಂತ ಕಡಿಮೆ ದರದಲ್ಲಿ ವಸತಿ ಸೌಲ್ಯಭ್ಯವನ್ನು ನೀಡುವುದರ ಜೋತೆಗೆ ವಿದ್ಯಾರ್ಥಿವೇತನವನ್ನು ನೀಡುವುದರ ಮೂಲಕ ಸಾಮಾಜಿಕ ಕಳಕಳಿಯನ್ನು ತೋರುತ್ತಿದೆ ಎಂದು ತಿಳಿಸುತ್ತಾ ಸಹಕಾರಿ ಬಂದುಗಳಿಗೆ ಅಯೋಜಿಸಿರುವ ಕ್ರೀಡಾಕೂಟದ ಬಗ್ಗೆ ಹರ್ಷ ವ್ಯಕ್ತ ಪಡಿಸಿದರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಕೊಪ್ಪಳ ಜಿಲ್ಲೆಯ ನಿರ್ದೇಶಕರಾದ ಶ್ರೀ ಜಿ ಶ್ರೀಧರ್ ಕೆಸರಟ್ಟಿರವರು ಅಥಿತಿಗಳಾಗಿ ಮಾತನಾಡುತ್ತಾ ಸಮಾಜದಲ್ಲಿ ಯಾರನ್ನೂ ಕೂಡ ಕಡೆಗಣಿಸಬಾರದು ಎಲ್ಲರೂ ಕೂಡ ಸಮಾನ ಮನಸ್ಕರರು ಎಂದು ಭಾವಿಸಿ ಎಲ್ಲಾರೊಡನೆ ಬೇರೆಯಬೇಕು ಮತ್ತು ದೈಹಿಕವಾಗಿ ಸದೃಡ ಹೊಂದಲು ಇಂತಹ ಕ್ರೀಡಾಕೂಟ ಅವಶ್ಯಕವಾಗಿದೆ ಎಂದು ತಿಳಿಸಿದರು, ಇನ್ನೋರ್ವ ಅಥಿತಿಗಳಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಕಲಬುರಗಿ ವಿಭಾಗೀಯ ನಿರ್ದೇಶಕರಾದ ಶ್ರೀ ಹುನುಮಂತಯ್ಯ ಶೆಟ್ಟಿಯವರು ಮಾತನಾಡುತ್ತಾ ಈ ದಿನದ ಕ್ರೀಡಾಕೊಟದ ಜೊತೆಗೆ ರಕ್ತಧಾನ ಶಿಭಿರವನ್ನು ಅಯೋಜಿಸಿರುವುದರ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು ಮತ್ತು ಮುಂದಿನ ತಿಂಗಳು ಡಿಸೆಂಬರ್‌ನಲ್ಲಿ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಯ ಒಕ್ಕೂಟದ ವತಿಯಿಂದ ಸಿರುಗುಪ್ಪದಲ್ಲಿ ಸೌಹಾರ್ದ ಸಹಕಾರಿಗಳಿಗೆ ಕ್ರೀಡಾಕೂಟವನ್ನು ಅಯೋಜಿಸಲಾಗಿರುತ್ತದೆ ಸದರಿ ಕ್ರೀಡಾಕೂಟದಲ್ಲೂ ಭಾಗವಹಿಸುವಂತೆ ಅಹ್ವಾನಿಸಿದರು ಮತ್ತೊರ್ವ ಅತಿಥಿಗಳಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ರಾಜಶೇಖರ ಇವರು ಮಾತನಾಡುತ್ತಾ ಸಹಕಾರಿಗಳ ಎಲ್ಲಾ ವರ್ಗದದವರಿಗೆ ಕ್ರೀಡಾಕೂಟವನ್ನು ಅಯೋಜಿಸಿವುದು ಅನಿವಾರ್ಯವಾಗಿತ್ತು ಇಂತಹ ಕ್ರೀಡಾಕೂಟ ಅಯೋಜಿಸಿದ 4 ತಾಲೂಕಿನ ಎಲ್ಲಾ ಸಹಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತ ರಾಯಚೂರು ತಾಲೂಕಿನ ಕಾರ್ಯನಿರತ ಸೌಹಾರ್ದ ಸಹಕಾರಿ ಸಂಘಕ್ಕೂ ಅಭಿನಂದನೆಗಳನ್ನು ತಿಳಿಸಿದರು ಮತ್ತು ಸರಕಾರಿ ಶಾಲೆಗಳ ಉಳಿವಿಗಾಗಿ, ಕನ್ನಡದ ಬೆಳವಣಿಗೆಗೆ ಪೂರಕವಾಗಿ ಹಾಗೂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬೆಂಬಲವಾಗಿ ನಿಲ್ಲಬೇಕು ಎನ್ನುವ ಉದ್ದೇಶದಿಂದ ತಮ್ಮ ಸಿಂದೂ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಸ್ಥೆಯ ಲಾಭದಿಂದ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಜೊತೆಗೆ ರಾಜ್ಯದಲ್ಲಿ ಸರಕಾರಿ ಶಾಲೆಗಳು ಉಳಿಸುವ ಜೊತೆಗೆ ಬೆಳೆಯಬೇಕು ಎನ್ನುವ ಸದುದ್ದೇಶದಿಂದ ಸಿಂಧು ಶಿಶು ಸುರಕ್ಷ ಠೇವಣಿ ಎಂಬ ಹೆಸರಿನಲ್ಲಿ ವತಿಯಿಂದ ರೂ10 ಲಕ್ಷ ಮೊತ್ತವನ್ನು ಈ ಯೋಜನೆಗೆ ಪ್ರಾವಧಾನ ಮಾಡುವುದರ ಮೂಲಕ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಲಾಗುತ್ತಿದೆ ಎಂದು ತಿಳಿಸಿದರು, ಮತ್ತೋರ್ವ ಮುಖ್ಯ ಅಥಿತಿಯಾದ ವಿಕಾಸ ಸೌಹಾರ್ದ ಕೋಆಪ್‌ರೇಟಿವ್ ಬ್ಯಾಂಕ್

ಹೊಸಪೇಟೆ ಬ್ಯಾಂಕನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ ಮಾತನಾಡುತ್ತಾ ಸಹಕಾರಿ ಕ್ಷೇತ್ರವು ವೇಗದಲ್ಲಿ ಬೆಳೆಯುತ್ತಿದ್ದು ಪಾರದರ್ಶಕತೆ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸುವುದು ಮತ್ತು ಕೆಟ್ಟಸಾಲಗಾರರನ್ನು ಗುರುತಿಸಲು ಸಿಬಿಲ್ ಮಾದರಿಯ ತಂತ್ರಾಂಶದ ಅವಶ್ಯಕತೆಯನ್ನು ರಾಯಚೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಸಂಘವು ಪ್ರಾರಂಭಿಸಿದಕ್ಕೆ ಹರ್ಷ ವ್ಯಕ್ತಪಡಿಸಿದರು ಮತ್ತು ಕ್ರೀಡಾಕೂಟದಲ್ಲಿ ಭಾಗವಹಿಸಿದ ಎಲ್ಲಾ ಸಹಕಾರಿ ಬಂದುಗಳಿಗೆ ಮತ್ತು ಕ್ರೀಡಾಕೂಟವನ್ನು ಅಯೋಜಿಸಲು ಸಹಕರಿಸಿದ ಎಲ್ಲಾ ಸಹಕಾರಿಯ ಆಡಳಿತ ಮಂಡಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ರಾಯಚೂರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜ ಇವರು ಮಾತನಾಡಿ ದೇಶ ಕಾಯುವ ಸೈನಿಕರಿಗೆ ಆಯುಧಗಳ ಬಲ ಸಹಕಾರಿಯ ಸದಸ್ಯರುಗಳ ಹಿತಾಸಕ್ತಿಯನ್ನು ಕಾಯಲು ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳೇ ಸೌಹಾರ್ದ ಕಾಯ್ದೆಯೇ ಬಲ ಎನ್ನುವ ನಾನ್ನುಡಿ ಹೇಳಿ ಸಹಕಾರಿಗಳನ್ನು ಪ್ರೇರಿಸಪಿಸಿದರು,

ಕಾರ್ಯಕ್ರಮದ ನಿರೂಪಣೆಯನ್ನು ಶಿವ ಪಾರ್ವತಿ ಗಣೇಶ್ ಸೌಹಾರ್ದ ಸಹಕಾರಿಯ ನಿರ್ದೇಶಕಿಯಾದ ಡಾ॥ ಶಿವಲೀಲಾ ಬಸವನಗೌಡ ಇವರು ನೇರವೇರಿಸಿದರು, ರಾಯಚೂರು ತಾಲೂಕ ಕಾರ್ಯನಿರತ ಸೌಹಾರ್ದ ಸಹಕಾರಿಗಳ ಸಂಘದ ಅಧ್ಯಕ್ಷರಾದ ಶ್ರೀ ರವಿಕುಮಾರ ವಿ ಆಶಾಪೂರ್ ಇವರು ಕ್ರೀಡಾವರದಿಯನ್ನು ನೀಡಿದರು, ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಂ ನಾಗರಾಜ ಇವರು ಸ್ವಾಗತಿಸಿದರು, ಕ್ರೀಡಾಕೂಟದಲ್ಲಿ ವಿಜೇತರಾದ ಸೌಹಾರ್ದ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಕ್ರಾರ್ಯಕ್ರಮವನ್ನು ವಿರೂಪಾಕ್ಷೇಶ್ವರ ಸೌಹಾರ್ದ ಸಹಕಾರಿ ಮಾನವಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ಶಂಕರಾನಂದ ಮತ್ತು ಸಿರವಾರದ ವಿಜೇತ ಕ್ರೆಡಿಟ್ ಸೌಹಾರ್ದ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಅಮರಗುಂಡಯ್ಯ ಬೃಹನ್ಮಠ ಇವರು ನೇರವರಿಸಿದರು, ಸಿರಿ ಸಂಜೀವಿನಿ ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕರಾದ ಮಹೇಶ್ ಪಾಟೀಲ್ ಇವರು ವಂದನಾರ್ಪಣೆಯನ್ನು ಸಲ್ಲಿಸಿದರು, ಈ ಸಂದರ್ಭದಲ್ಲಿ ರೋಟರಿ ಕಾಟನ್ ಸಿಟಿ ಇವರ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಸದರಿ ಕ್ರೀಡಾಕೂಟಕ್ಕೆ ವೈಯಕ್ತಿಕವಾಗಿ ದೇಣಿಗೆ ನೀಡಿದ ದಾನಿಗಳಿಗೆ ಸನ್ಮಾನಿಸಲಾಯಿತು. ಈ ಸಂಧರ್ಭದಲ್ಲಿ ನೌಕರರ ಸಂಘದ ಗಿರಿಯಪ್ಪ ಹವಾಲ್ದಾರ್, ವೆಲ್ಲೇಪು ಗಾಲಯ್ಯ, ಶ್ರೀಮತಿ ಶಿವಲೀಲಾರೆಡ್ಡಿ , ನಾಗರಾಜ ಪಾಟೀಲ್, ಶ್ರೀಮತಿ ರಾಧಿಕಾ, ದೇವಪ್ಪ, ಪ್ರಮೋದಕುಮಾರ, ಆಶೋಕ್ ನಾಯಕ್, ಶ್ರೀಮತಿ ಸುಸ್ಮೀತಾ, ಪ್ರಭಾಕರ ರೆಡ್ಡಿ, ರಾಜೇಶ ಚುಂದುರಿ, ಮಾನವಿಯ ಕೆ.ಅಮರನಾಥ, ತ್ರಿನೇತ್ರ ಸೌಹಾರ್ದ ಸಹಕಾರಿ ಸಿರವಾರದಿಂದ ಚೆನ್ನಾರೆಡ್ಡಿ ಗಣದಿನ್ನಿ ಮತ್ತು ಮಾನವಿ, ಸಿರವಾರ, ದೇವದುರ್ಗ ಹಾಗೂ ರಾಯಚೂರು ತಾಲೂಕುಗಳ ಎಲ್ಲಾ ಸಹಕಾರಿಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಪಿಗ್ಮೀ ಸಂಗ್ರಹಗಾರರು ಹಾಜರಿದ್ದರು. ಕಾರ್ಯಕ್ರಮದ ಮೊದಲಿಗೆ ಶ್ರೀ ಅಮರೇಶ್ ಸಾಲಿಮಠ ಇವರಿಂದ ಸಂಗೀತ ಕಾರ್ಯಕ್ರಮ ಮತ್ತು ನಾಡಗೀತೆಯನ್ನು ನೇರವರಿಸಲಾಯಿತು ಹಾಗೂ ಕುಮಾರಿ ಜೀವಿಕಾ ಪಾಟೀಲ್ ಇವರಿಂದ ಭರತನಾಟ್ಯ ನೃತ್ಯವನ್ನು ನೇರವರಿಸಲಾಯಿತು ಹಾಗೂ ಸಹಕಾರಿಯ ಪಿತಾಮಹಾರಾದ ಶ್ರೀ ಸಿದ್ದನಗೌಡ ಕಣಗಿನಹಾಳ ಇವರ ಭಾವಚಿತ್ರಕ್ಕೆ ಪ್ರುಷ್ಪಾರ್ಚಣೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

**ಬಾಗಲಕೋಟೆ : ದಿನಾಂಕ 28.10.2025 ರಂದು** ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಗುಳೇದಗುಡ್ಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ, ಬಾದಾಮಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಹಾಗೂ ಶಾಸನಾತ್ಮಕ ಕರ್ತವ್ಯಗಳಾದ ಲೆಕ್ಕಪರಿಶೋಧನೆ, ಚುನಾವಣೆ ಪ್ರಸ್ತಾವನೆ ಸಲ್ಲಿಕೆ, ಕಲಂ 34 ಕುರಿತಾದ ಮಾಹಿತಿಗಳು, ಅನುಪಾಲನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು, ಸಾಮಾನ್ಯ ಸೇವಾ ಕೇಂದ್ರದ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ರೇಷ್ಮಾ ಪಾಟೀಲ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ನೀಡಿದರು. ತರಬೇತಿಯಲ್ಲಿ 20 ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 29.10.2025 ರಂದು** ಬಾಗಲಕೋಟೆ ಜಿಲ್ಲೆಯ ಹುನಗುಂದ ಮತ್ತು ಇಲಕಲ್ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ನಿ, ಇಲಕಲ್ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಹಾಗೂ ಶಾಸನಾತ್ಮಕ ಕರ್ತವ್ಯಗಳಾದ ಲೆಕ್ಕಪರಿಶೋಧನೆ, ಚುನಾವಣೆ ಪ್ರಸ್ತಾವನೆ ಸಲ್ಲಿಕೆ, ಕಲಂ 34 ಕುರಿತಾದ ಮಾಹಿತಿಗಳು, ಅನುಪಾಲನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು, ಸಾಮಾನ್ಯ ಸೇವಾ ಕೇಂದ್ರದ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ರೇಷ್ಮಾ ಪಾಟೀಲ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ನೀಡಿದರು. ತರಬೇತಿಯಲ್ಲಿ 20 ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

**ಧಾರವಾಡ : ದಿನಾಂಕ 28.10.2025 ರಂದು** ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ.,ಧಾರವಾಡ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಮತ್ತು ಕಾಲಕಾಲಕ್ಕೆ ಸೌಹಾರ್ದ ಸಹಕಾರಿಗಳು ಸಲ್ಲಿಸಬೇಕಾದ ಮಾಹಿತಿಯ ಕುರಿತು, ಚುನಾವಣೆ ಕುರಿತು, ಕಾಯ್ದೆ ತಿದ್ದುಪಡಿ, ಕುರಿತು, ಸಾಮಾನ್ಯ ಸೇವಾ ಕೇಂದ್ರ ದ ಕುರಿತು ಮಾಹಿತಿಯನ್ನು

ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ನೀಡಿದರು. ಈ ತರಬೇತಿಯಲ್ಲಿ 35 ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 29.10.2025 ರಂದು** ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಮತ್ತು ಕಾಲಕಾಲಕ್ಕೆ ಸೌಹಾರ್ದ ಸಹಕಾರಿಗಳು ಸಲ್ಲಿಸಬೇಕಾದ ಮಾಹಿತಿಯ ಕುರಿತು, ಚುನಾವಣೆ ಕುರಿತು, ಕಾಯ್ದೆ ತಿದ್ದುಪಡಿ ಕುರಿತು, ಸಾಮಾನ್ಯ ಸೇವಾ ಕೇಂದ್ರದ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ನೀಡಿದರು. ಈ ತರಬೇತಿಯಲ್ಲಿ 26 ಸಹಕಾರಿಗಳಿಂದ 29 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ : ದಿನಾಂಕ 29.10.2025 ರಂದು** ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಶಾಖೆ ಬೈಲಹೊಂಗಲ ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು ಸಹಕಾರಿಗಳಿಂದ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಗಳ ಇತ್ತಿಚಿನ ಸಾಲದ ಅರ್ಜಿಗಳನ್ನು ಮತ್ತು ಠರಾವು ಪುಸ್ತಕವನ್ನು ಪರಿಶೀಲಿಸಲಾಯಿತು. ಈ ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 30.10.2025 ರಂದು** ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯ ಮೊದಲನೆಯ ಅವಧಿಯಲ್ಲಿ ದಾವಾ ದಾಖಾಲಾತಿ ಹಾಗೂ ಶಾಸನಾತ್ಮಕ ವಿಭಾಗಕ್ಕೆ ಸಂಭಂದಿಸಿದಂತೆ ಮಾಹಿತಿಯನ್ನು ಶ್ರೀಮತಿ ಶಿಲ್ಪಾ ಹೊಸಮನಿ ಇವರು ನೀಡಿದರು. ಎರಡನೇ ಅವಧಿಯಲ್ಲಿ ಶ್ರೀಮತಿ ಮಲ್ಲಮ್ಮ ದೇಗಾಂವ ರವರು ವಾರ್ಷಿಕ ಶುಲ್ಕ ಹಾಗು ಶಿಕ್ಷಣ ಶುಲ್ಕ ಪಾವತಿಸುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಮೂರನೇ ಅವಧಿಯಲ್ಲಿ ಕಲಂ 34 ರಡಿ ಮಾಹಿತಿ ಸಲ್ಲಿಕೆ ಹಾಗೂ ಮುಖ್ಯಕಾರ್ಯನಿರ್ವಾಹಕರ ಪ್ರಮುಖ ಕರ್ತವ್ಯಗಳ ಬಗ್ಗೆ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೋಳಾಪ್ಪೆ ಇವರು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು. ಈ ತರಬೇತಿಯಲ್ಲಿ 20 ಸಹಕಾರಿಗಳಿಂದ 24 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 31.10.2025 ರಂದು** ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಶಾಖೆ ಕಿತ್ತೂರ ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು ಸಹಕಾರಿಗಳಿಂದ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು, ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಗಳ ಇತ್ತಿಚಿನ ಸಾಲದ ಅರ್ಜಿಗಳನ್ನು ಮತ್ತು ಠರಾವು ಪುಸ್ತಕವನ್ನು ಪರಿಶೀಲಿಸಲಾಯಿತು. ಈ ಸಭೆಯಲ್ಲಿ 11 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 31.10.2025 ರಂದು** ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯ ಮೊದಲನೆಯ ಅವಧಿಯಲ್ಲಿ ದಾವಾ ದಾಖಾಲಾತಿ ಹಾಗೂ ಶಾಸನಾತ್ಮಕ ವಿಭಾಗಕ್ಕೆ ಸಂಭಂದಿಸಿದಂತೆ ಮಾಹಿತಿಯನ್ನು ಶ್ರೀಮತಿ ಶಿಲ್ಪಾ ಹೊಸಮನಿ ಇವರು ನೀಡಿದರು. ಎರಡನೇ ಅವಧಿಯಲ್ಲಿ ಶ್ರೀಮತಿ ಮಲ್ಲಮ್ಮ ದೇಗಾಂವ ರವರು ವಾರ್ಷಿಕ ಶುಲ್ಕ ಹಾಗು ಶಿಕ್ಷಣ ಶುಲ್ಕ ಪಾವತಿಸುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಮೂರನೇ ಅವಧಿಯಲ್ಲಿ ಕಲಂ 34 ರಡಿ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠಾ ಇವರು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು. ಈ ತರಬೇತಿಯಲ್ಲಿ 21 ಸಹಕಾರಿಗಳಿಂದ 26 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 31–10–2025 ರಂದು** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸುಲ್ತಾನಪುರ, ಬೆಣಿವಾಡ, ಅವರಗೋಳ, ಶಿರಗಾಂವ, ನೋಗನಿಹಾಳ, ಹೊಸೂರ ಹಾಗೂ ಮದಿಹಳ್ಳಿ ಗ್ರಾಮಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿ ಸಂಘಗಳು ಕಾಲಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಬಗ್ಗೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ 2025 ರ ಅಂಶಗಳ ಕುರಿತು, ಸೌಹಾರ್ದ ಸಹಕಾರಿ ಸಂಘಗಳ ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಇವರು ನೀಡಿದರು. ಈ ತರಬೇತಿಯಲ್ಲಿ ಒಟ್ಟು 14 ಸೌಹಾರ್ದ ಸಹಕಾರಿಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 04–11–2025ರಂದು** ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕ್ಲಸ್ಟರ್ ಮಟ್ಟದ ತರಬೇತಿಯನ್ನು ನಗರದ ವಿಷ್ಣುವಿಲಾಸ ಸೌಹಾರ್ದ ಸಹಕಾರಿ ಸಂಘ ನಿ., ಸಿರುಗುಪ್ಪ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ಜೆ ಹನುಮಂತಯ್ಯ ರವರು ವಹಿಸಿದರು. ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸರಕಾರವು ಇತ್ತಿಚಿಗೆ ಸೌಹಾರ್ದ ಕಾಯ್ದೆಗೆ ಮಾಡಿರುವ ತಿದ್ದುಪಡಿಯ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 2025–26ನೇ ಸಾಲಿನಲ್ಲಿ ನಡೆಯಲಿರುವ ಸೌಹಾರ್ದ ಸಹಕಾ–ರಿಗಳ ಚುನಾವಣೆ ಹಾಗೂ ಚುನಾವಣೆ ಮಾಹಿತಿ ಸಲ್ಲಿಸುವ ವಿಧಾನಗಳು, ಸಹಕಾರಿಗಳ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯಗಳ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ನೀಡಿದ್ದರು. ತರಬೇತಿಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇ ಇವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು ತಾಲ್ಲೂಕಿನಿಂದ 18 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ಪಡೆದುಕೊಂಡರು.

**ಬೆಳಗಾವಿ: ದಿನಾಂಕ 03.11.2025 ರಂದು** ಹುಕ್ಕೇರಿ ತಾಲ್ಲೂಕಿನ ಸ್ಥಳೀಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮಹಾವೀರ ಶಿಕ್ಷಣ ಸಂಸ್ಥೆಯ ಶ್ರೀಮತಿ ವಿಜಯಮಾಲಾ ಬಿ.ಸಿ.ಎ ಕಾಲೇಜ್ ಅರ್ಜುನವಾಡ ರಸ್ತೆ ಹುಕ್ಕೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು.ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿ ಸಂಘಗಳು ಕಾಲಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಬಗ್ಗೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ 2025 ರ ಅಂಶಗಳ ಕುರಿತು, ಸೌಹಾರ್ದ ಸಹಕಾರಿ ಸಂಘಗಳ ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾಧ ಸುಜಯ ಬೆಳವಿ ಇವರು ನೀಡಿದರು.ಈ ತರಬೇತಿಯಲ್ಲಿ ಒಟ್ಟು 28 ಸೌಹಾರ್ದ ಸಹಕಾರಿಗಳಿಂದ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 05.11.2025 ರಂದು** ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯ ಮೊದಲನೆಯ ಅವಧಿಯಲ್ಲಿ ಸಹಾಯಕರಾದ ಶ್ರೀಮತಿ ಶಿಲ್ಪಾ ಹೊಸಮನಿ ಇವರು ದಾವಾ ದಾಖಾಲಾತಿ ಹಾಗೂ ಶಾಸನಾತ್ಮಕ ವಿಭಾಗಕ್ಕೆ ಸಂಭಂದಿಸಿದಂತೆ ಮಾಹಿತಿಯನ್ನು ನೀಡಿದರು. ಎರಡನೇ ಅವಧಿಯಲ್ಲಿ ಹಿರಿಯ ಸಹಾಯಕರಾದ ಶ್ರೀಮತಿ ಮಲ್ಲಮ್ಮ ದೇಗಾಂವ ರವರು ವಾರ್ಷಿಕ ಶುಲ್ಕ ಹಾಗು ಶಿಕ್ಷಣ ಶುಲ್ಕ ಪಾವತಿಸುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಮೂರನೇ ಅವಧಿಯಲ್ಲಿ ಕಲಂ 34 ರಡಿ ಮಾಹಿತಿ ಸಲ್ಲಿಕೆ ಹಾಗೂ ಮುಖ್ಯಕಾರ್ಯನಿರ್ವಾಹಕರ ಪ್ರಮುಖ ಕರ್ತವ್ಯಗಳ ಬಗ್ಗೆ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೋಳಾಪ್ಪೆ ಇವರು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು. ಈ ತರಬೇತಿಯಲ್ಲಿ 20 ಸಹಕಾರಿಗಳಿಂದ 24 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 10.11.2025 ರಂದು** ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಾಗೃತಿ ಅರ್ಬನ ಸೌಹಾರ್ದ ಸಹಕಾರಿ ನಿ, ಹಾರೂಗೇರಿಯಲ್ಲಿ ಹಮ್ಮಿಕೊಳ್ಳಲಾಯಿತು.ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು, ಆಡಳಿತ ಮಂಡಳಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆ ಜರುಗಿಸುವ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಸಂಯುಕ್ತ ಸಹಕಾರಿಗೆ ಶುಲ್ಕ ಪಾವತಿಸುವ ಕುರಿತು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ – 2025 ರ ಅಂಶಗಳ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ನೀಡಿದರು. ರಾಯಬಾಗ ತಾಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಂಕರ್ ರವರು ಸೌಹಾರ್ದ ಸಹಕಾರಿಗಳ ಚುನಾವಣೆ ಪ್ರಸ್ತಾವನೆ ಸಲ್ಲಿಕೆ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಕು–ರಿತು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 26 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 11.11.2025 ರಂದು** ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಜಿನ್ನಪ್ಪಣ್ಣಾ ಚೌಗುಲೆ ಲಾಲಬಹಾದ್ದೂರ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಶಿರಗುಪ್ಪಿಯಲ್ಲಿ ಹಮ್ಮಿಕೊಳ್ಳಲಾಯಿತು.ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು, ಆಡಳಿತ ಮಂಡಳಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳ ನಡವಳಿ ದಾಖಲಿಸುವ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಸಂಯುಕ್ತ ಸಹಕಾರಿಗೆ ಶುಲ್ಕ ಪಾವತಿಸುವ ಕುರಿತು ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಕೆ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ನೀಡಿದರು. ಈ ತರಬೇತಿಯಲ್ಲಿ ಒಟ್ಟು 23 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 11.11.2025 ರಂದು** ವಿಜಯಪುರ ವಿಜಯಪುರ ತಾಲ್ಲೂಕಿನ (ಬಿಜೆಪಿ –0001 ರಿಂದ ಬಿಜೆಪಿ –0315) ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು, ವಿಜಯಪುರ ನಗರದ ಮಾರ್ಗದರ್ಶಿ ಕರಿಯರ್ ಅಕಾಡೆಮಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ, ವಾರ್ಷಿಕ ಸಾಮಾನ್ಯ ಸಭೆ ಜರುಗಿಸುವ ವಿಧಾನ, ಲೆಕ್ಕಪ–ರಿಶೋಧನೆ, ಆಡಳಿತ ಮಂಡಳಿ ಚುನಾವಣೆ, ಕಾಯ್ದೆ ತಿದ್ದುಪಡಿ ಅಂಶಗಳು, ಕಲಂ 34ರ ಕುರಿತಾದ ಮಾಹಿತಿಗಳು, ಅನುಪಾಲನಾ ವರದಿ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಬಗ್ಗೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ. ಎಸ್. ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 39 ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 12.11.2025 ರಂದು** ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಗುಜರಾತಿ ಮಂಗಲ ಕಾರ್ಯಾಲಯ, ಅಥಣಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು

ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು, ಲೆಕ್ಕಪರಿಶೋಧನ ವರದಿಯ ಅವಲೋಕನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಆಡಳಿತ ಮಂಡಳಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳ ನಡವಳಿ ದಾಖಲಿಸುವ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಸಂಯುಕ್ತ ಸಹಕಾರಿಗೆ ಶುಲ್ಕ ಪಾವತಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಕೆ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ನೀಡಿದರು.ಈ ತರಬೇತಿಯಲ್ಲಿ ಒಟ್ಟು 24 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 12.11.2025 ರಂದು** ಶ್ರೀ ಮಹಾಂತೇಶ ಕವಟಗಿಮಠ ಸೌಹಾರ್ದ ಸಹಕಾರಿ ಸಂಘ ನಿ, ಬೆಳಗಾವಿ, ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂಗಳಿಗೆ ತರಬೇತಿಯನ್ನು ಸಹಕಾರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಕಡಗಳ ನಿರ್ವಹಣೆ, ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ಮಾಹಿತಿ ನೀಡಿದರು.

**ದಿನಾಂಕ 13.11.2025 ರಂದು** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ, ಚಿಕ್ಕೋಡಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು, ಲೆಕ್ಕಪರಿಶೋಧನ ವರದಿಯ ಅವಲೋಕನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಆಡಳಿತ ಮಂಡಳಿ ಸಭೆಗಳ ನಡವಳಿ ದಾಖಲಿಸುವ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಸಂಯುಕ್ತ ಸಹಕಾರಿಗೆ ಶುಲ್ಕ ಪಾವತಿಸುವ ಕುರಿತು ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಕೆ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಕು–ರಿತು ಮಾಹಿತಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ನೀಡಿದರು. ಈ ತರಬೇತಿಯಲ್ಲಿ ಒಟ್ಟು 58 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ: ದಿನಾಂಕ 12.11.2025ರಂದು** ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ (ಬಿಜೆಪಿ –0322 ರಿಂದ ಬಿಜೆಪಿ –0614) ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು, ವಿಜಯಪುರ ನಗರದ ಮಾರ್ಗದರ್ಶಿ ಕರಿಯರ್ ಅಕಾಡೆಮಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ, ವಾರ್ಷಿಕ ಸಾಮಾನ್ಯ ಸಭೆ ಜರುಗಿಸುವ ವಿಧಾನ, ಲೆಕ್ಕಪರಿಶೋಧನೆ, ಮಂಡಳಿ ಚುನಾವಣೆ, ಕಾಯ್ದೆ ತಿದ್ದುಪಡಿ ಅಂಶಗಳು, ಕಲಂ 34ರ ಕುರಿತಾದ ಮಾಹಿತಿಗಳು, ಅನುಪಾಲನಾ ವರದಿ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಬಗ್ಗೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ. ಎಸ್. ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 43 ಸಹಕಾರಿಗಳಿಂದ 49 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 13.11.2025 ರಂದು** ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿಕಾಸ ಫ್ಯಾಮಿಲಿ ರೆಸ್ಟೋರೆಂಟ್, ಬಬಲೇಶ್ವರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಆಡಳಿತ ಮಂಡಳಲಿ ಸಭೆ, ವಾರ್ಷಿಕ ಸಾಮಾನ್ಯ ಸಭೆ ಜರುಗಿಸುವ ವಿಧಾನ, ಲೆಕ್ಕಪರಿಶೋಧನೆ, ಮಂಡಳಲಿ ಚುನಾವಣೆ, ಇತ್ತೀಚಿನ ಕಾಯ್ದೆಯ ತಿದ್ದುಪಡಿ ಅಂಶಗಳು, ಕಲಂ 34ರ ಕುರಿತಾದ ಮಾಹಿತಿಗಳು, ಅನುಪಾಲನಾ ವರದಿ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ. ಎಸ್. ಹಾಗೂ ಶ್ರೀಮತಿ ಪ್ರತಿಭಾ ಮಠ ಇವರು ಮಾಹಿತಿ ನೀಡಿದರು. ತರಬೇತಿಯಲ್ಲಿ 21 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ: ದಿನಾಂಕ 14.11.2025** ಹಾವೇರಿ ಜಿಲ್ಲೆಯ ಸವಣೂರು ಮತ್ತು ಶಿಗ್ಗಾಂವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಸಭೆಯನ್ನು ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಸವಣೂರು ಇಲ್ಲಿ ಆಯೋಜನೆ ಮಾಡಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ವಹಿಸಿದ್ದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ನಡುವಳಿ ದಾಖಲಿಸುವ ಕುರಿತು, ಕಲಂ 34ರ ಮಾಹಿತಿ, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳು, ಕಲಂ 18ರ ಅನ್ವಯ ಹೂಡಿಕೆ, ಲೆಕ್ಕ ಪರಿಶೋಧಕರ ನೇಮಕಾತಿ ಮಾಹಿತಿ, ಚುನಾವಣಾ ಪ್ರಸ್ತಾವನೆ ಸಲ್ಲಿಕೆ ಕುರಿತು, ಶಾಸನಾತ್ಮಕ ಪಾವತಿಗಳ ಕುರಿತು, ಕಾಯ್ದೆ ತಿದ್ದುಪಡಿ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ್ ರಾಠೋಡ ಹಾಗೂ ಪ್ರವೀಣ ಬಾರ್ಕಿ ಇವರು ನೀಡಿದರು. ತರಬೇತಿಯಲ್ಲಿ 15 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ : ದಿನಾಂಕ 04–11–2025 ರಂದು** ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕ್ಲಷ್ಟರ ಮಟ್ಟದ ತರಬೇತಿಯನ್ನು ನಗರದ ವಿಷ್ಣುವಿಲಾಸ ಸೌಹಾರ್ದ ಸಹಕಾರಿ ಸಂಘ ನಿ., ಸಿರುಗುಪ್ಪ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ಜೆ ಹನುಮಂತಯ್ಯ ರವರು ವಹಿಸಿದರು. ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸರಕಾರವು ಇತ್ತೀಚಿಗೆ ಸೌಹಾರ್ದ ಕಾಯ್ದೆಗೆ ಮಾಡಿರುವ ತಿದ್ದುಪಡಿಯ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 2025–26ನೇ ಸಾಲಿನಲ್ಲಿ ನಡೆಯಲಿರುವ ಸೌಹಾರ್ದ ಸಹಕಾ–ರಿಗಳ ಚುನಾವಣೆ ಹಾಗೂ ಚುನಾವಣೆ ಮಾಹಿತಿ ಸಲ್ಲಿಸುವ ವಿಧಾನಗಳು, ಸಹಕಾರಿಗಳ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯಗಳ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ನೀಡಿದ್ದರು. ತರಬೇತಿಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೇ ಇವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು ತಾಲ್ಲೂಕಿನಿಂದ 18 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದು ಮಾಹಿತಿ ಪಡೆದುಕೊಂಡರು.

**ಹಾವೇರಿ : ದಿನಾಂಕ 29.11.2025** ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ" ಸಭೆಯನ್ನು ಆದಿಶಕ್ತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾನಗಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು.ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಎಂ.ಬಿ.ಕಲಾಲ, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿದೇಶಕರು ಹಾಗೂ ಅಧ್ಯಕ್ಷರು ಆದಿಶಕ್ತಿ ಸೌಹಾರ್ದ ಸಹಕಾರಿ ನಿ, ಹಾನಗಲ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ನಡುವಳಿ ದಾಖಲಿಸುವ ಕುರಿತು, ಕಲಂ 34ರ ಮಾಹಿತಿ, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳು, ಕಲಂ 18ರ ಅನ್ವಯ ಹೂಡಿಕೆ, ಲೆಕ್ಕ ಪರಿಶೋಧಕರ ನೇಮಕಾತಿ ಮಾಹಿತಿ, ಚುನಾವಣಾ ಪ್ರಸ್ತಾವನೆ ಸಲ್ಲಿಕೆ ಕುರಿತು, ಶಾಸನಾತ್ಮಕ ಪಾವತಿಗಳ ಕುರಿತು, ಕಾಯ್ದೆ ತಿದ್ದುಪಡಿ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ್ ರಾಠೋಡ ಹಾಗೂ ಪ್ರವೀಣ ಬಾರ್ಕಿ ಇವರು ನೀಡಿದರು. ತರಬೇತಿಯಲ್ಲಿ 15 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

**ಶಿವಮೊಗ್ಗ: ದಿನಾಂಕ 25.11.2025ರಂದು** ತೀರ್ಥಹಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ರಾಮೇಶ್ವರ ಬಹುಉದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತೀರ್ಥಹಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 19 ಸೌಹಾರ್ದ ಸಹಕಾರಿಗಳಿಂದ 26 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 25.11.2025ರಂದು** ಹೊಸನಗರ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸುಮೇದಾ ಸೌಹಾರ್ದ ಸಹಕಾರಿ ಸಂಘ ನಿ, ಹೊಸನಗರ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 17 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 27.11.2025ರಂದು** ಶಿಕಾರಿಪುರ/ಸೊರಬ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶಿವಗಿರಿ ಸಮುದಾಯ ಭವನ, ಶಿಕಾರಿಪುರ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 28.11.2025ರಂದು** ಭದ್ರಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವೀರಶೈವ ಸಭಾಭವನ, ಭದ್ರಾವತಿ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ. ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 27.11.2025ರಂದು** ಸಾಗರ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಕ್ಷಯಸಾಗರ ಸೌಹಾರ್ದ ಸಹಕಾರಿ ಸಂಘ ನಿ, ಅಕ್ಷಯಸಾಗರ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 28.11.2025ರಂದು** ಶಿವಮೊಗ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್‌ರವರು ವಹಿಸಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು ಗ್ರಾಮಾಂತರ** : ದಿನಾಂಕ 26.11.2025ರಂದು ನೆಲಮಂಗಲ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶ್ರೀ ಕೂಡಲ ಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ನೆಲಮಂಗಲ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ಇವರು ಭಾಗವಹಿಸಿ ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ, ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಚುನಾವಣೆ ಹಾಗೂ ಕಲಂ 34ರ ಮಾಹಿತಿ ಸಲ್ಲಿಕೆ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

## ಕ್ಯಾಂಪ್ಕೊ ಸಹಕಾರಿಯ ಅಧ್ಯಕ್ಷರ – ಉಪಾಧ್ಯಕ್ಷರ ಆಯ್ಕೆ



**ಮಂಗಳೂರು:** ಸೆಂಟ್ರಲ್ ಅರೆಕಾನಟ್ ಮತ್ತು ಕೋಕೋ ಮಾರ್ಕೆಟಿಂಗ್ ಅಂಡ್ ಪ್ರೊಸೆಸಿಂಗ್ ಕೋ–ಆಪರೇಟಿವ್ ಲಿಮಿಟೆಡ್ (ಕ್ಯಾಂಪ್ಕೊ), ಮಂಗಳೂರು ಇದರ ನೂತನ ಅಧ್ಯಕ್ಷರಾಗಿ ಶ್ರೀ ಎಸ್. ಆರ್ ಸತೀಶ್ಚಂದ್ರ, ಉಪಾಧ್ಯಕ್ಷರಾಗಿ ಪದ್ಮರಾಜ್ ಪಟ್ಟಾಜೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

2025–2030ರ ಅವಧಿಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಎಸ್. ಆರ್. ಸತೀಶ್ಚಂದ್ರ ಅವರನ್ನು ನೂತನ ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಪದ್ಮರಾಜ್ ಪಟ್ಟಾಜೆ ಅವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಬಂಟ್ವಾಳ ತಾಲೂಕಿನ ಪುಣಚ ಗ್ರಾಮದವರಾದ ಎಸ್. ಆರ್. ಸತೀಶ್‌ಚಂದ್ರ ಅವರು ಸಹಕಾರಿ ಕ್ಷೇತ್ರದಲ್ಲಿ ಹಿರಿಯರಾಗಿದ್ದು ನಾಲ್ಕು ದಶಕಗಳಿಗೂ ಹೆಚ್ಚಿನ ಸುದೀರ್ಘ ಅನುಭವ ಹೊಂದಿದ್ದಾರೆ. ಇವರು 2015–2020ರ ಅವಧಿಯಲ್ಲೂ ಕ್ಯಾಂಪ್ಕೊ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ನಿರ್ಗಮಿತ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾಗಿದ್ದರು. ಕೃಷಿ ಹಾಗೂ ಸಹಕಾರಿ ವಲಯದಲ್ಲಿ ಇವರ ನಾಯಕತ್ವಕ್ಕೆ ಅಪಾರ ಮನ್ನಣೆಯಿದೆ.

ಕಾಸರಗೋಡಿನ ಪಟ್ಟಾಜೆ–ಬದಿಯಡ್ಕ ಮೂಲದ ಪ್ರಗತಿಪರ ಕೃಷಿಕರಾದ ಪದ್ಮರಾಜ್ ಪಟ್ಟಾಜೆ ಅವರು ದೀರ್ಘಕಾಲದಿಂದ ಸಹಕಾರಿ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಇವರು ಸತತ ಎರಡು ಅವಧಿಗೆ ಕ್ಯಾಂಪ್ಕೊ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಸಾಲಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಬ್ಯಾಂಕ್ ಖಾತೆಗಳ ವಿವರ

- **ಸಹಕಾರ ಸಂಘಗಳ ಉಪನಿಬಂಧಕರು (ನಿ.,441) ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಪೀಠ**

ಬ್ಯಾಂಕ್ ಹೆಸರು : ಕೆನರಾ ಬ್ಯಾಂಕ್
ಹೆಸರು : DRCS R441
ಚಾಲ್ತಿ ಖಾತೆ ಸಂಖ್ಯೆ: 9921201006031
ಶಾಖೆ ಹೆಸರು: 18ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು
IFSC CODE : CNRB0010424

- **ಸಹಕಾರ ಸಂಘಗಳ ಉಪನಿಬಂಧಕರು (ನಿ.,441)ಸೌಹಾರ್ದ ಸಹಕಾರಿಗಳ ದಾವಾಪಂಚಾಯಿ ನ್ಯಾಯಾಲಯ, ಬೆಳಗಾವಿ ಪೀಠ**

ಬ್ಯಾಂಕ್ ಹೆಸರು: ಕೆನರಾ ಬ್ಯಾಂಕ್
ಹೆಸರು: DRCS R441 Belagavi
ಚಾಲ್ತಿ ಖಾತೆ ಸಂಖ್ಯೆ: 110179105933
ಶಾಖೆ ಹೆಸರು: ಆಂಜನೇಯನಗರ, ಬೆಳಗಾವಿ.
IFSC CODE : CNRB0008513

- **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಅಮಲ್ದಾರಿ ವಿಭಾಗ**

ಬ್ಯಾಂಕ್ ಹೆಸರು: ಕೆನರಾ ಬ್ಯಾಂಕ್
ಹೆಸರು: ARCS R441
ಚಾಲ್ತಿ ಖಾತೆ ಸಂಖ್ಯೆ: 9921201006879
ಶಾಖೆ ಹೆಸರು: 18ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು
IFSC CODE : CNRB0010424

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

ಡಿಸೆಂಬರ್ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಬೆಳಗಾವಿ ಪ್ರಾಂತದಿಂದ 14, ಬೆಂಗಳೂರು ಪ್ರಾಂತದಿಂದ 13, ಕಲಬುರಗಿ ಪ್ರಾಂತದಿಂದ 13, ಮೈಸೂರು ಪ್ರಾಂತದಿಂದ 19, ಒಟ್ಟು 59 ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

# ಹೊಸ ಸೌಹಾರ್ದ ಸಹಕಾರಿ ಸಂಘಗಳ ಪ್ರಾರಂಭಕ್ಕಾಗಿ ಪ್ರವರ್ತಕರುಗಳ ಸಭೆ

**ದಕ್ಷಿಣ ಕನ್ನಡ :** ದಿನಾಂಕ : 13.11.2025ರಂದು ಗುರುವಾರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಅಂಗವಾಗಿ ಕಡಬ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ಮಧ್ಯಾಹ್ನ 03:00 ಗಂಟೆಗೆ ದುರ್ಗಾಂಬಿಕ ಸಭಾಭವನದಲ್ಲಿ ಅಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಜಾಗೋ ಭಾರತ್ ಸೌಹಾರ್ದ ಸಹಕಾರಿ ಸಂಘ ನಿ., ಶ್ರೀ ವೆಂಕಟರಮಣ್ಣ ನಿರ್ದೇಶಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ನಂದನ್ ಬಿ. ಎನ್. ರವರು ನೆರವೇರಿಸಿದರು, ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಪ್ರಾಂತೀಯ ಅಧಿಕಾರಿ ಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾಹಿತಿಯನ್ನು ನೀಡಿದರು, ನಂತರ ಮುಖ್ಯ ಅತಿಥಿಗಳಾದ ಶ್ರೀ ವೆಂಕಟರಮಣ್ಣ ರವರು ಸೌಹಾರ್ದ ಕಾಯ್ದೆಯ ಬಗ್ಗೆ ಹಾಗೂ ನೂತನ ಸೌಹಾರ್ದ ರಸನೆಯ ಬಗ್ಗೆ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯವನ್ನು ಸಭೆಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಸಹಕಾರಿಗಳು ಮತ್ತು ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 21 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೊಡಗು ಗೋಣಿಕೊಪ್ಪ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಪೊನ್ನಂಪೇಟೆ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 21 ನವೆಂಬರ್ 2025ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕಾವೇರಿ ಮಹಿಳಾ ಸಮಾಜ, ಗೋಣಿಕೊಪ್ಪ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವಿರಾಜಪೇಟೆ ಕೊಡವ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎನ್ ಪಿ ಮುತ್ತಣ್ಣ ರವರು ಇವರು ನೆರವೇ–ರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾವೇರಿ ಮಹಿಳಾ ಸಮಾಜ ಇದರ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಕಟೇರ ಉತ್ತರೆ ಅಪ್ಪಚ್ಚು ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾವೇರಿ ಮಹಿಳಾ ಸಮಾಜದ ಕಾರ್ಯದರ್ಶಿಯಾದ ಶ್ರೀಮತಿ ಭೋಜಮ್ಮ ರವರು ಉಪಸ್ಥಿತರಿದ್ದರು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಸುರೇಶ್ ಆರ್ ಎಸ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಪೊನ್ನಂ ಪೇಟೆ ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಭಾಗವಹಿಸಿ ಒಟ್ಟು 51 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಮಗಳೂರು :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ತರಿಕೆರೆ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 25 ನವೆಂಬರ್ 2025ರ ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ಹರಿಶ್ರಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ, ಕೋಡಿಕ್ಯಾಂಪ್, ತರಿಕೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹರಿಶ್ರೀ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ವಾಸುದೇವಮೂರ್ತಿ ರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಶ್ರೀ ಅಶೋಕ ಜಿ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 30 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಮಗಳೂರು :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಅಜ್ಜಂಪುರ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 25 ನವೆಂಬರ್ 2025ರ ಮಂಗಳವಾರ ಸಂಜೆ 03:00 ಗಂಟೆಗೆ ಯೋಗ ವಿಸ್ಮಯ ಸೌಹಾರ್ದ ಸಹಕಾರಿ ಸಂಘ, ಎ.ಪಿ.ಎಂ.ಸಿ ಆವರಣ, ಅಜ್ಜಂಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯೋಗವಿಸ್ಮಯ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಅನಂತ್ ರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 25 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಶಿವಮೊಗ್ಗ:** ದಿನಾಂಕ 03.11.2025ರಂದು ಶಿವಮೊಗ್ಗ ಜಿಲ್ಲೆಯ ಮಾನ್ಯ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಹಕಾರ ಇಲಾಖೆ ಲೆಕ್ಕಪರಿಶೋಧನಾ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆ, ಹಾಲು ಒಕ್ಕೂಟಗಳು, ಡಿಸಿಸಿ ಬ್ಯಾಂಕ್ ಇತರೆ ಎಲ್ಲಾ ಒಕ್ಕೂಟಗಳ ಸಮನ್ವಯ ಸಮಿತಿ ಸಭೆಯನ್ನು ಮಾನ್ಯ ಉಪನಿಬಂಧಕರ ಕಛೇರಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿ ಶಿವಮೊಗ್ಗ ಜಿಲ್ಲೆಯಲ್ಲಿನ ಸೌಹಾರ್ದ ಸಹಕಾರಿಗಳಿಂದ ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗಿರುವ ಲೆಕ್ಕಪರಿಶೊಧನಾ ವರದಿಗಳು ಹಾಗೂ ಲೆಕ್ಕಪರಿಶೋಧನಾ ಇಲಾಖೆಗೆ ಸಲ್ಲಿಕೆಯಾಗಿರುವ ವರದಿಗಳ ವ್ಯತ್ಯಾಸಗಳ ಕುರಿತು ಚರ್ಚಿಸಿ ಸರಿಪಡಿಸಿದರು. ಮುಂದುವರೆದೂ, ಬಾಕಿ ಇರುವ ಲೆಕ್ಕಪರಿಶೋಧನಾ ವರದಿಗಳ ಕುರಿತು ಚರ್ಚಿಸಿ ಇಲಾಖೆಯಿಂದ ನೇಮಕವಾಗಿರುವ ಲೆಕ್ಕಪರಿಶೋಧಕರ ಮಾಹಿತಿ ನೀಡಿದರು.

## ಸಿ.ಎಸ್.ಸಿ ಕೇಂದ್ರಗಳ ಕುರಿತು ಮಾಹಿತಿ

ಸಂಯುಕ್ತ ಸಹಕಾರಿಯ ವತಿಯಿಂದ ತಮ್ಮ ಸಹಕಾರಿಗಳಲ್ಲಿ ಸಿ.ಎಸ್.ಸಿ ಕೇಂದ್ರಗಳನ್ನು ಹೊಂದಲು 200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ದಾಖಲೆಗಳನ್ನು ಸಲ್ಲಿಸಿವೆ. ಇವುಗಳ ಪೈಕಿ 39 ಸಹಕಾರಿಗಳನ್ನು ವೈಟ್‌ಲಿಸ್ಟ್ ಮಾಡಿ ಸಿ.ಎಸ್.ಸಿ ಐಡಿ ರಚನೆಯಾಗಿವೆ. ಎರಡನೇ ಹಂತದಲ್ಲಿ 97 ಸಹಕಾರಿಗಳ ವೈಟ್ ಲಿಸ್ಟ್ ಮಾಡಲಾಗಿದ್ದು, ಸಿ.ಎಸ್.ಸಿ ಐಡಿ ರಚನೆಯಾಗಬೇಕಿದೆ. ಮೊದಲ ಹಂತದಲ್ಲಿ ಐಡಿ ರಚನೆಯಾದ 39 ಸಹಕಾರಿಗಳಿಗೆ ಒಂದು ಸಿ.ಎಸ್.ಸಿ ಕೇಂದ್ರದಲ್ಲಿ ನೀಡಬಹುದಾದ ಸೇವೆಗಳ ಕುರಿತು ದಿನಾಂಕ 17.10.2025 ರಂದು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ದಿನಾಂಕ 25/10/2025ರಂದು ಸಿ.ಎಸ್.ಸಿ ಕೇಂದ್ರದಲ್ಲಿ ವಿಮಾ, ಪ್ರಯಾಣ ಹಾಗೂ ಡಿಜಿಪೇ ಸೇವೆಗಳನ್ನು ನೀಡುವ ಕುರಿತು ತರಬೇತಿ ಹಾಗೂ 27/10/2025ರಂದು ಗ್ರಾಮೀಣ್ ಇ-ಸ್ಟೋರ್, ಅಗ್ರಿ ಇ-ಸ್ಟೋರ್ ಹಾಗೂ ಜೀವನ್ ಪ್ರಮಾಣ್ ಸೇವೆಗಳನ್ನು ನೀಡುವ ಕುರಿತು ತರಬೇತಿ ಆಯೋಜಿಸಲಾಗಿತ್ತು.

ಸೌಹಾರ್ದ ಸಹಕಾರಿಗಳಲ್ಲಿ ಸಿ.ಎಸ್.ಸಿ ಕೇಂದ್ರ ಹೊಂದಲು ಇಚ್ಛಿಸುವ ಸಹಕಾರಿಗಳು ತಮ್ಮ ಉಪವಿಧಿಯಲ್ಲಿ ಸರ್ಕಾರದ ಸೇವೆಗಳನ್ನು ಸಾರ್ವಜನಿಕ–ರಿಗೆ ನೀಡಲು ಪ್ರಾವಧಾನ ಮಾಡಿಕೊಂಡಿರುವ ಪ್ರತಿ, ಆಡಳಿತ ಮಂಡಲಿ ಠರಾವಿನ ಅನುಮೋದಿತ ಪ್ರತಿ, ಸಹಕಾರಿಯ ಪ್ಯಾನ್ ಕಾರ್ಡ್ ಪ್ರತಿ, ಮುಖ್ಯಕಾರ್ಯನಿರ್ವಾಹಕರ ಆಧಾರ್ ಪ್ರತಿ ಮತ್ತು ಪ್ಯಾನ್ ಕಾರ್ಡ್ ಪ್ರತಿ (ಎರಡರಲ್ಲೂ ಹೆಸರು, ಜನ್ಮ ದಿನಾಂಕ ಒಂದೇ ಆಗಿರಬೇಕು), ಸಹಕಾರಿಯ ಬ್ಯಾಂಕ್ ಪಾಸ್‌ಬುಕ್ ಪ್ರತಿ, ಸಹಕಾರಿಯ ನೋಂದಣಿ ಪ್ರಮಾಣ ಪತ್ರದ ಪ್ರತಿ, ಮುಖ್ಯ ಕಾರ್ಯನಿರ್ವಾಹಕರ 2 ಭಾವಚಿತ್ರ ಪಾಸ್‌ಪೋರ್ಟ್ ಅಳತೆ, ಮತ್ತು ಭದ್ರತಾ ಠೇವಣಿಯಾಗಿ ಸಂಯುಕ್ತ ಸಹಕಾರಿಗೆ ರೂ.10,000/– ಪಾವತಿಸಬೇಕು.

ಸಿ.ಎಸ್.ಸಿ ಕೇಂದ್ರ ಹೊಂದಲು ಬರುವ ಆರಂಭಿಕ ಖರ್ಚು * ಬ್ರಾಂಡಿಂಗ್ ಕಿಟ್‌ಗೆ ಬೆಲೆ ರೂ.3,199/–(ಹೊರಾಂಗಣದ ಬ್ಯಾನರ್, ಒಳಾಂಗಣ–ಕ್ಕೆ ಸೇವೆಗಳ ಮಾಹಿತಿ ಕುರಿತ ಬ್ಯಾನರ್, 2ಸೆಲ್ಫ್ ಇಂಕ್ ಸ್ಟಾಂಪ್, ಸರ್ಟಿಫಿಕೇಟ್, ಗುರುತಿನ ಚೀಟಿ, ಮುಂತಾದವು), * 1 ಮಂತ್ರಾ ಎಲ್1 ಬಯೋಮೆಟ್ರಿಕ್ ಡಿವೈಸ್ ಬೆಲೆ ರೂ.2,999/–, * IRCTC ನೋಂದಣಿಗೆ ರೂ.1,180/– * ವಿಮೆ ಏಜೆಂಟ್ ಆಗಲು 10ನೇ ತರಗತಿ ತೇರ್ಗಡೆಯಾಗಿರಬೇಕು ಹಾಗೂ INS VLE ಅಥವಾ RAP ಪರೀಕ್ಷೆಯಲ್ಲಿ ತೇರ್ಗಡೆ ಕಡ್ಡಾಯವಾಗಿರುತ್ತದೆ. INS VLEಗೆ ರೂ.250/– (ಐದು ಲಕ್ಷದವರೆಗೆ ಪಾಲಿಸಿ ಮಾಡಿಸಬಹುದು) ಹಾಗೂ RAPಗೆ ರೂ.350/–, (ಮೊತ್ತದ ಮಿತಿ ಇರುವುದಿಲ್ಲ) ಖಂಕಿಗೆ ಪರೀಕ್ಷೆ ತೇರ್ಗಡೆಯಾದ ವ್ಯಕ್ತಿಗೆ INS VLE ಪರೀಕ್ಷೆ ಮಾಡುವ ಅಗತ್ಯವಿರುವುದಿಲ್ಲ) ಆಗಿರುತ್ತದೆ.

ಸಿ.ಎಸ್.ಸಿ ಕೇಂದ್ರದಿಂದ ನೀಡಬಹುದಾಗಿರುವ ಸೇವೆಗಳ ಕುರಿತು ಆನ್‌ಲೈನ್ ತರಬೇತಿ ನಡೆಸಲಾಗಿದೆ. ಮೊದಲಿಗೆ ದಿನಾಂಕ 25.10.2025ರಂದು ಪ್ರಯಾಣ, ವಿಮೆ(ಭಾಗಶಃ) ಮತ್ತು ಡಿಜಿಪೇ ಕುರಿತು 39 ಹಸಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಮತ್ತು ದಿನಾಂಕ 27.10.2025ರಂದು ವಿಮೆ, ಅಗ್ರಿ ಇ–ಸ್ಟೋರ್, ಗ್ರಾಮೀಣ್ ಇಸ್ಟೋರ್, ಜೀವನ್ ಪ್ರಮಾಣ್ ಪತ್ರ ಹಾಗೂ ಬಿಬಿಪಿಎಸ್(ಭಾರತ್ ಬಿಲ್ ಪೇ ಸಿಸ್ಟಮ್) ಕುರಿತು 39 ಸಹಕಾರಿಗಳಿಗೆ ಮಾಹಿತಿ ನೀಡಲಾಗಿದೆ.

**ಸಿ.ಎಸ್.ಸಿ ಕೇಂದ್ರದ ಮೂಲಕ ಸಾರ್ವಜನಿಕರಿಗೆ ಈ ಕೆಳಗಿನ ಯೋಜನೆಗಳಿಗೆ ಸಂಬಂಧಿಸಿದಂತೆ ಸೇವೆಗಳು ನೀಡಬಹುದಾಗಿದೆ**

1. ಪ್ರಧಾನ ಮಂತ್ರಿ ಕಲ್ಯಾಣ ಯೋಜನೆಗಳು, (ಆಯುಷ್ಮಾನ್ ಕಾರ್ಡ್, ಕಿಸಾನ್ ಮಾನಧನ್ ಯೋಜನೆ, ಕಿಸಾನ್ ಸಮ್ಮಾನ್ ಯೋಜನೆ, ಆತ್ಮನಿರ್ಭರ್ ನಿಧಿ ಯೋಜನೆ, ಶ್ರಮ ಯೋಗಿಮಾನ್ ಯೋಜನೆ, ಲಘು ವ್ಯಾಪಾರಿ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್, ಇ–ಶ್ರಮ್ ಪೋರ್ಟಲ್, ವಿಶ್ವಕರ್ಮ ಯೋಜನೆ) ಇವುಗಳ ನೋಂದಣಿ, ಕೆ.ವೈ.ಸಿ, ಇಂದೀಕರಣ, ಮುದ್ರಣದಂತಹ ಸೇವೆಗಳನ್ನು ನೀಡಬಹುದಾಗಿದೆ.
2. ಐ.ಎನ್.ಎಸ್ ವಿ.ಎಲ್.ಇ ಪರೀಕ್ಷೆ ತೇರ್ಗಡೆ ಮಾಡಿದ ನಂತರ ಮಾಸಿಕ 5ಲಕ್ಷಕ್ಕಿಂತ ಕಡಿಮೆ ಮೊತ್ತದ ವಿಮಾ ಸೌಲಭ್ಯ ಒದಗಿಸಬಹುದು, ರ್‍ಯಾಪ್ ಪರೀಕ್ಷೆ ತೇರ್ಗಡೆ ಮಾಡಿದ ನಂತರ ಮಾಸಿಕ 5ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ವಿಮಾ ಸೌಲಭ್ಯ ಒದಗಿಸಬಹುದು, ಜೀವವಿಮೆ, ಮೋಟಾರು ವಿಮೆ, ಪಶುವಿಮೆ ಮತ್ತು ಫಸಲು ವಿಮಾ ಸೌಲಭ್ಯಗಳನ್ನು ಒದಗಿಸಬಹುದಾಗಿರುತ್ತದೆ.
3. ಅಗ್ರಿ ಇ–ಸ್ಟೋರ್‌ನಿಂದ ರೈತರಿಗೆ ಸಂಬಂಧಿಸಿದ ಸಲಕರಣೆಗಳನ್ನು ಒದಗಿಸುವ ಸೇವೆಗಳು, ಇ–ಪಶು ಚಿಕಿತ್ಸೆ, ನರ್ಸರಿ ಮತ್ತು ಬೀಜಗಳ ಉತ್ಪಾದನೆ, ಮಣ್ಣಿನ ಪರೀಕ್ಷೆ, ಡ್ರೋಣ್ ಪೈಲೆಟ್ ತರಬೇತಿ, ಇಫ್ಕೋ ಇ–ಬಝಾರ್, ಸಾವಯವ ಕೃಷಿಗಳ ಕುರಿತು ನೀಡಬಹುದಾದ ಆನ್‌ಲೈನ್ ಸೇವೆಗಳು.
4. ಸರ್ಕಾರದಿಂದ ಗ್ರಾಹಕರ ಸೇವೆಗಳು, (ಪ್ಯಾನ್ ಕಾರ್ಡ್, ಜೀವನ ಪ್ರಮಾಣ, ಐಟಿಆರ್ ಫೈಲಿಂಗ್, ಸರ್ಕಾರ ಇ–ಮಾರ್ಕೆಟಿಂಗ್(GEM), ಉದ್ಯಮ್, ಗ್ರಾಹಕ ಸಮಸ್ಯೆ(CPGRAMS) ನೋಂದಣಿ, ಇಂದೀಕರಣ, ಬುಕಿಂಗ್, ಪರಿಶೀಲನೆಯಂತಹ ಸೇವೆಗಳು ಒದಗಿಸಬಹುದಾಗಿದೆ.
5. ಸಾಕ್ಷರತಾ ಕಾರ್ಯಕ್ರಮಗಳು (ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಗೆ ಮುದ್ರಿತ ಉಪನ್ಯಾಸ, ಲೈವ್‌ಕ್ಲಾಸ್, ಮಾಕ್‌ಟೆಸ್ಟ್, ಇ–ಪುಸ್ತಕಗಳು ಮತ್ತು ಪುಸ್ತಕಗಳು, ಬೇಸಿಕ್ ಕಂಪ್ಯೂಟರ್ ಕೋರ್ಸ್ (ನೋಂದಣಿ ಮತ್ತು ಪ್ರಮಾಣೀಕರಣ), ಜಿ.ಎಸ್.ಟಿಯೊಂದಿಗೆ ಟ್ಯಾಲಿ(ನೋಂದಣಿ), ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ (ಅರ್ಹ ಅಭ್ಯರ್ಥಿಗಳ ನೋಂದಣಿ, ತರಬೇತಿ, ಪರೀಕ್ಷೆ), ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲ್ (ಪ್ರವೇಶ & ಪರೀಕ್ಷಾ ನೋಂದಣಿ), ಐಎಂಎಸ್, ಬಿಎಸ್‌ಇ, ಐಐಎಫ್‌ಬಿ ನಂತಹ ಸಂಸ್ಥೆಗಳ ಪ್ರಾಮಾಣಿಕೃತ ಕೋರ್ಸ್‌ಗಳಿಗೆ (ನೋಂದಣಿ ಮತ್ತು ಪ್ರಮಾಣೀಕರಣ), ಬಾಲ ವಿದ್ಯಾಲಯ, ಸೈಬರ್ ಸೆಕ್ಯೂರಿಟಿ, ಮಾಹಿತಿ ತಂತ್ರಜ್ಞಾನ ಮೂಲ ಕೋರ್ಸ್‌ಗಳು, ಇನ್ನು ಮುಂತಾದ

ಯೋಜನೆಗಳಿಗೆ ಸಂಬಂಧಿಸಿದ ಕೆಲವು ಸೇವೆಗಳು ಒದಗಿಸಬಹುದಾಗಿದೆ.

6. ಭಾರತ್ ಬಿಲ್ ಪೇ ಸಿಸ್ಟಮ್, ಸಿಎಸ್‌ಸಿ ಧ್ವನಿ (ಧ್ವನಿ ಜಾಹಿರಾತು), ಇ-ವಿಗ್ಯಾಪನೆ (ಜಾಹಿರಾತು), ಮೊಬೈಲ್ ಡಿಟಿಎಚ್ ಬಿಲ್ ಪಾವತಿ, ಡಿಜಿನೇಮ್ (ವೆಬ್‌ಸೈಟ್ ಡಿಸೈನ್ & ಬಿಲ್ಡರ್ ಟೂಲ್, ಡೊಮೇನ್ ನೋಂದಣಿ & ಡಿಎಸ್‌ಎಸ್ ನಿರ್ವಹಣೆ) ಕುರಿತು ಸೇವೆಗಳು ಒದಗಿಸಬಹುದಾಗಿದೆ.
7. ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಸಾರ್ವಜನಿಕರಿಗೆ ಬ್ಯಾಂಕಿಂಗ್ ಸೇವೆಗಳು, ಲೋನ್ ಸೇವೆಗಳು, ಇಎಂಐ ವಸೂಲಿ, ಫಾಸ್ಟ್‌ಟ್ಯಾಗ್, ಎನ್‌ಪಿಎಸ್, ಸಿಬಿಎಲ್, ವಿಮೆ, ಡಿಜಿಪೇ ನಂತಹ ಸೇವೆಗಳನ್ನು ಒದಗಿಸಬಹುದಾಗಿರುತ್ತದೆ,
8. ಆರೋಗ್ಯ ಸೇವೆಗಳು (ಆರೋಗ್ಯ ಮತ್ತು ಸ್ವಾಸ್ತ್ಯ ಔಷಧಗಳು, ಮೆಡಿಕಾಬಝಾರ್, ಟೆಲಿ ಮೆಡಿಸಿನ್, ಡಯಾಗ್ನಾಸ್ಟಿಕ್ ಸೇವೆಗಳು)
9. ಕಾನೂನು ಸೇವೆಗಳು (ಟೆಲಿಲಾ, ಇ-ಕೋರ್ಟ್, ಕಲ್ಚರಲ್ ಮ್ಯಾಪಿಂಗ್)
10. ಗ್ರಾಮೀಣ ಇ-ಸ್ಟೋರ್‌ನಿಂದ ಸ್ಥಳೀಯರಿಗೆ ಇ-ಕಾಮರ್ಸ್ ಸೇವೆಗಳು, ಸ್ತ್ರೀ ಸ್ವಾಭೀಮಾನ, ಪ್ರಯಾಣ/ಪ್ರವಾಸಕ್ಕೆ (ರೈಲು, ವಿಮಾನ ಮತ್ತು ಬಸ್) ಸಂಬಂಧಿಸಿದಂತೆ ಟಿಕೆಟ್ ಬುಕಿಂಗ್ ಸೌಲಭ್ಯ ಒದಗಿಸುವುದು, ಹೋಟೆಲ್ ಬುಕಿಂಗ್ ಸೌಲಭ್ಯಗಳು, ಮಿಲಿಟರಿ ಹೆರಿಟೇಜ್ ಟೂರಿಸಂ, ಸೇವೆ ನೀಡಬಹುದಾಗಿದೆ.

**– ಶ್ರೀ ರಾಜೇಂದ್ರ ರಾವ್ ಶಿಂಧೆ, ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

## ಪ್ರವೇಶ ತರಬೇತಿ ಕಾರ್ಯಕ್ರಮ



**ಮೈಸೂರು** : ದಿನಾಂಕ : 28.11.2025 ಹಾಗೂ 29.11.2025 ರಂದು ಮೈಸೂರು ಪ್ರಾಂತದಿಂದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ನೋಂದಣಿಯಾದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಎರಡು ದಿನಗಳ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮವನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯ ಸಂಚಾಲಕರಾದ ಶ್ರೀ ಮಹಾಮೇಧಾನಂದ ಸ್ವಾಮೀಜಿ ರವರು ಹಾಗೂ ಸಂಯುಕ್ತ ಸಹಕಾರಿಯ ಶಿಕ್ಷಣ ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್. ವಿ. ರಾಜೀವ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ ರವರು ಹಾಗೂ ಮೈಸೂರು ಮಂಡ್ಯ ಹಾಗೂ ಕೊಡಗು ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಆರ್ ನಾರಾಯಣ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕವನ್ನು ಶ್ರೀ ಗುರುಪ್ರಸಾದ್ ಬಂಗೇರ ಪ್ರಾಂತೀಯ ಅಧಿಕಾರಿ, ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 93 ಪ್ರತಿನಿಧಿಗಳು ಭಾಗವಹಿಸಿದ್ದರು.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಪದಗ್ರಹಣ ಕಾರ್ಯಕ್ರಮ




**ಉಡುಪಿ:** ದಿನಾಂಕ 15.00.2025 ರಂದು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಪದಗ್ರಹಣ ಕಾರ್ಯಕ್ರಮವು ಬ್ರಹ್ಮಾವರದ ರಾಯಲ್ ಇನ್ ಹೋಟೆಲ್‌ನ ಚಂದನ್ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಯಾಂಪ್ಕೊದ ಅಧ್ಯಕ್ಷರಾದ ಕಿಶೋರ್ ಕುಮಾರ್ ಕೊಡ್ಗಿರವರು ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ಭಾಗವಹಿಸಿ ಸೌಹಾರ್ದ ಸಾಧಕಗಳ ಕುರಿತು ಮಾಹಿತಿ ನೀಡಿದರು. ನಂತರ ಮೈಸೂರು ಪ್ರಾಂತೀಯ ವ್ಯವಸ್ಥಾಪಕಕರಾದ ಶ್ರೀ ಗುರುಪ್ರಸಾದ್ ಬಂಗೇರರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಇತ್ತೀಚಿನ ಸೌಹಾರ್ದ ಕಾಯ್ದೆ ತಿದ್ದುಪಡಿಯ ಕುರಿತು ವಿಷಯವನ್ನು ಮಂಡಿಸಿದರು.ಈ ಕಾರ್ಯಕ್ರಮದಲ್ಲಿ ನೂತನವಾಗಿ ಆಯ್ಕೆಯಾದ ಎಲ್ಲಾ ನಿರ್ದೇಶಕರು ಹಾಗೂ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ನಿ., 441 ಇಲ್ಲಿ ದಾಖಲಿಸುವ ದಾವೆಗಳ ಶೀಘ್ರ ಇತ್ಯರ್ಥಕ್ಕಾಗಿ ಸಹಕಾರಿಗಳ ಪಾತ್ರ

– ಶ್ರೀ ಚಂದ್ರಶೇಖರಯ್ಯ, ಅಧಿಕಾರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

## ನಮೂನೆ-01

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ನಿ.,441 ಇಲ್ಲಿ ದಾಖಲಿಸುವ ದಾವೆಗಳ ಶೀಘ್ರ ಇತ್ಯರ್ಥಕ್ಕಾಗಿ ಸಹಕಾರಿಗಳ ಪಾತ್ರ.

ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಲ್ಲಿ ಸುಸ್ತಿದಾರರಿಂದ ಸಾಲ ವಸೂಲಾತಿಗಾಗಿ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ನಿ.,441 ಬೆಂಗಳೂರು ಮತ್ತು ಬೆಳಗಾವಿ ಪೀಠಗಳಲ್ಲಿ ದಾವೆಗಳನ್ನು ದಾಖಲಿಸುವ ಸಂದರ್ಭದಲ್ಲಿ ಈ ಕೆಳಕಂಡ ಚೆಕ್ ಲಿಸ್ಟನಂತೆ ಅಗತ್ಯ ದಾಖಲೆಗಳನ್ನು ಕ್ರಮಬದ್ಧವಾಗಿ ಲಗತ್ತಿಸಿದ ಪಕ್ಷದಲ್ಲಿ ದಾವೆಯ ಸುನಾವಣೆ ಪ್ರಕ್ರಿಯೆಗಳು ಸುಗಮವಾಗಿ ನಡೆದು ಶೀಘ್ರವಾಗಿ ಐತೀರ್ಪು ಪಡೆದು ಸುಸ್ತಿದಾರರಿಂದ ಸಾಲ ವಸೂಲಾತಿ ಮಾಡಲು ಸಹಕಾರಿಯಾಗುತ್ತದೆ. ಇದರಿಂದ ಸಹಕಾರಿಗಳು ನಷ್ಟದಿಂದ ಪಾರಾಗಿ ಎನ್‌ಪಿಎ %ಶೇಕಡವಾರು ಕಡಿಮೆಯಾಗಿ ತನ್ನ ಸದಸ್ಯರಿಗೆ ಇನ್ನೂ ಹೆಚ್ಚಿನ ಸೇವೆ ಒದಗಿಸಿ ಲಾಭಾಂಶವನ್ನು ನೀಡಲು ಅವಕಾಶ ದೊರೆಯಲಿದೆ.

ಸದಸ್ಯ ಸಹಕಾರಿಗಳು ಸಾಲವನ್ನು ಮಂಜೂರು ಮಾಡುವ ಪೂರ್ವದ ದಿನಾಂಕಗಳಲ್ಲಿಯೇ ಸಾಲಗಾರರ ಸದಸ್ಯತ್ವದ ಅರ್ಜಿಯಲ್ಲಿ ದಿನಾಂಕವನ್ನು ನಮೂದಿಸಿ ಪಡೆಯತಕ್ಕದ್ದು. ನಂತರದಲ್ಲಿ ನಡೆಯುವ ಆಡಳಿತ ಮಂಡಲಿ ಸಭೆಯಲ್ಲಿ ಸದರಿ ಸಾಲಗಾರರ ಸದಸ್ಯತ್ವ ಪಡೆಯಲು ಒಪ್ಪಿಗೆಯಾದ ಬಗ್ಗೆ ನಡಾವಳಿಯಲ್ಲಿ ಸ್ಪಷ್ಟವಾಗಿ ನಮೂದಿಸಿಕೊಳ್ಳುವುದು. ಸಾಲಗಾರರ ಸದಸ್ಯತ್ವ ಅನುಮೋದನೆಯಾದ ನಂತರದ ದಿನಾಂಕದಲ್ಲಿ ಸಾಲ ಅರ್ಜಿಯನ್ನು ವಿತರಿಸಿ ಮುಂದಿನ ಆಡಳಿತ ಮಂಡಲಿ ಸಭೆಯಲ್ಲಿ ಅನುಮೋದನೆ ಪಡೆದ ನಂತರದಲ್ಲಿಯೇ ಸಾಲವನ್ನು ಸಾಲಗಾರರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವುದು. ಸಾಲಗಾರರಿಗೆ ಸಾಲವನ್ನು ಪಾವತಿಸುವ ಪೂರ್ವದಲ್ಲಿಯೇ ಸಾಲಕ್ಕೆ ಅಗತ್ಯವಾದ ಎಲ್ಲಾ ಬಗೆಯ ದಾಖಲೆಗಳನ್ನು ಸಿದ್ಧಪಡಿಸಿ ವಿಧಿಸುವ ಬಡ್ಡಿ ದರ & ಸುಸ್ತಿ ದರಗಳ ಮಾಹಿತಿಯನ್ನು ಸಾಲಗಾರರು ಮತ್ತು ಜಾಮೀನುದಾರರಿಗೆ ಸ್ಪಷ್ಟವಾಗಿ ತಿಳಿಸಿ ಸುಸ್ತಿಯಾದ ನಂತರ ಕ್ರಮವಿಡುವ ಕುರಿತು ಮಾಹಿತಿಯನ್ನು ತಿಳಿಸಬೇಕು.

ಸಹಕಾರಿಗಳು ಸುಸ್ತಿಯಾದ ಸಾಲಗಾರರಿಗೆ ಬೈಲಾದಲ್ಲಿ ನಮೂದಿಸಿರುವಂತೆ ನಿಗದಿತ ಸಮಯದಲ್ಲಿ ಸಾಲ ಮರುಪಾವತಿಯ ನೋಟೀಸ್‌ಗಳನ್ನು ದೃಢೀಕೃತ ಅಂಚೆ ಮೂಲಕ ಜಾಮೀನುದಾರರಿಗೂ ಪ್ರತಿಯನ್ನು ಸಹ ಕಳುಹಿಸಬೇಕಾಗುತ್ತದೆ. ಈ ಕ್ರಮದಿಂದ ಜಾಮೀನುದಾರರು ಸಾಲಗಾರರಿಗೆ ಮರುಪಾವತಿ ಮಾಡುವಂತೆ ಒತ್ತಾಯಿಸಲು ಅವಕಾಶವಿರುತ್ತದೆ. ಪ್ರಥಮ ನೋಟೀಸ್‌ಗೂ ಎರಡನೇ & ಅಂತಿಮ ನೋಟೀಸ್‌ಗೆ ಅಂತರಗಳ ದಿನಾಂಕಗಳನ್ನು ಸಾಲಗಳ ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ನಮೂದಿಸಿಕೊಂಡಿರಬೇಕು.

## ಸಾಲ ವಸೂಲಾತಿಗಾಗಿ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ದಾವೆ ದಾಖಲಿಸುವ ಸಮಯದಲ್ಲಿ ದಾವೆಯ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆ ವಿವರಗಳ ಚೆಕ್ ಲಿಸ್ಟ್

- ಸಹಕಾರಿ ಸದಸ್ಯತ್ವದ ಅರ್ಜಿ ಮತ್ತು ಸದಸ್ಯತ್ವಕ್ಕೆ ಅನುಮೋದನೆಯಾದ ಆಡಳಿತ ಮಂಡಲಿ ಸಭೆಯ ಠರಾವು ಪ್ರತಿ. (ಸಾಲಗಾರ ಮತ್ತು ಜಾಮೀನುದಾರರು)
- ಸದಸ್ಯತ್ವದ ಷೇರ ಲೆಡ್ಜರ್, ಎಕ್ಸ್ಟ್ರ್ಯಾಕ್ಟ್ ಪ್ರತಿಗಳು. (ಪ್ರತಿವಾದಿ ಷೇರುದಾರರೆಂದು ಸಮರ್ಥಿಸಲು)
- ಸಹಕಾರಿಯ ಉಪವಿಧಿಯಲ್ಲಿನ ಕಾರ್ಯವ್ಯಾಪ್ತಿ ಉಲ್ಲೇಖ ಪುಟದ ಪ್ರತಿ
- ಸಹಕಾರಿಯ ಉಪವಿಧಿಯಲ್ಲಿರುವಂತೆ ಸಾಲದ ನಿಯಮಾವಳಿಗಳ ಹಾಗೂ ಸಾಲ ಮಂಜೂರಾತಿ ಮಿತಿ ದಾಖಲೆಗಳ ಪ್ರತಿ.
- ಸಾಲ ಮಂಜೂರಾದ ಉಪಸಮಿತಿ /ಆಡಳಿತ ಮಂಡಳಿ ಠರಾವು.
- ಸಾಲದ ಅರ್ಜಿಯ ಪ್ರತಿ. (ಸಾಲ ಮಂಜೂರಾದ ಆಡಳಿತ ಮಂಡಳಿಯ ಠರಾವು)
- ಸಾಲದ ಮೊತ್ತವನ್ನು ಸಾಲಗಾರರಿಗೆ ಪಾವತಿಯಾದ ಬಗ್ಗೆ ಅಗತ್ಯ ದಾಖಲೆಗಳ ಪ್ರತಿ.
- ದಾವಾ ಅರ್ಜಿಯಲ್ಲಿನ ವಿವರಗಳು ಅಂತಿಮವಾಗಿರುತ್ತವೆ.

## ಸಾಲದ ಅರ್ಜಿಗಳೊಂದಿಗೆ ಲಗತ್ತಿಸ ಬೇಕಾದ ಅಗತ್ಯವಾದ ಲಗತ್ತುಗಳು:-

- ಜಾಮೀನು ಆಧಾರದ ಸಾಲವಾಗಿದ್ದರೆ ಜಾಮೀನುದಾರರ ಮಾಹಿತಿ
- ವಾಹನ ಸಾಲವಾಗಿದ್ದರೆ (ವಾಹನ ಹೈಪಾಥೀಕೇಶನ್ ವಿವರಗಳು)
- ಆಭರಣ ಸಾಲವಾಗಿದ್ದರೆ (ಆಭರಣ ಸಾಲದ ವಿವರ)
- ಸ್ಥಿರಾಸ್ತಿ ಆಧಾರದ ಸಾಲವಾಗಿದ್ದರೆ (ಸ್ಥಿರಾಸ್ತಿ ಅಡಮಾನ ಮಾಡಿರುವ ದಾಖಲೆ) ಮಾರ್ಟಗೇಜ್ ಡೀಡ್, ಆಸ್ತಿಯ ವಿವರ, ಮೌಲ್ಯ ಮಾಪನ ವರದಿ ಹಾಗೂ ಇದಕ್ಕೆ ಸಂಬಂದಿಸಿದ ಇತರೆ ದಾಖಲೆಗಳು, ಇ.ಸಿಭೋಜಾ ದಾಖಲೆ, ಆರ್.ಟಿ.ಸಿ, ಸಾಲ ವಿತರಿಸುವ ಸಂಸ್ಥೆಯ ವಿವರ ಇರಬೇಕು)
- ಸಾಲದ ಮೊತ್ತ ಸಾಲಗಾರರಿಗೆ ಪಾವತಿಯಾಗಿರುವ ಬಗ್ಗೆ ದಾಖಲೆ (ಉಳಿತಾಯ ಖಾತೆಗೆ ಜಮೆ ಆಗಿರುವ ಉಳಿತಾಯ ಖಾತೆಯ ಉದ್ಧೃತ ಭಾಗ, ಅಥವಾ ಇನ್ನಾವುದೇ ತರಹ ಸಾಲ ವಿತರಿಸಿದ್ದರೆ ಅದರ ದಾಖಲೆ)
- ಪ್ರಾಮಿಸರಿ ನೋಟ್
- ಕರಾರು ಪತ್ರ
- ಸಾಲಗಾರರ ವಂಶವೃಕ್ಷ ದಾಖಲೆ.
- ಸಾಲದ ಖಾತೆಯ ಉದ್ಧೃತ ಭಾಗ (Loan Ledger Extract/ last repayment statement)
- ಸಾಲಗಾರರಿಗೆ ಸುಸ್ತಿ ಸಾಲ ಮರುಪಾವತಿ ಕುರಿತು ನೀಡಿದ ಅಂತಿಮ ನೋಟಿಸ್ ಹಾಗೂ ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಗಳು.
- ಸಾಲಕ್ಕೆ ಸಂಬಂಧಿಸಿದ ಇತರೆ ದಾಖಲಾತಿಗಳು.
- ನ್ಯಾಯಾಲಯದ ದಾವಾ ಶುಲ್ಕ ಪಾವತಿಸಿರುವುದಕ್ಕೆ ವಿವರದ ಚಲನ್ ಪ್ರತಿ.

- ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಪ್ರತಿವಾದಿಗಳಿಗೆ ನೋಟಿಸ್ನೊಂದಿಗೆ ಜಾರಿಗೊಳಿಸಲು ಅಗತ್ಯವಿರುವಷ್ಟು ಪ್ರತಿಗಳನ್ನು ಸಲ್ಲಿಸಬೇಕು. (ಪ್ರತಿವಾದಿಗಳ ಸಂಖ್ಯೆ ಆಧರಿಸಿ)
- ಈ ಎಲ್ಲಾ ದಾಖಲೆಗಳನ್ನು ಮುಖ್ಯಕಾರ್ಯನಿರ್ವಾಹಕರ/ಸಿಇಓ ಸಹಿ ಮತ್ತು ಸಹಕಾರಿಯ ಮೊಹರುನೊಂದಿಗೆ ಧೃಡೀಕರಿಸಿ ಸಲ್ಲಿಸತಕ್ಕದ್ದು. (ಉಪವಿಧಿಯಲ್ಲಿ ದಾವೆ ದಾಖಲಿಸಲು ಅಧಿಕಾರವಿರುವ ವ್ಯಕ್ತಿಯಿಂದ ಅಂದರೆ ಮುಖ್ಯ ಕಾರ್ಯನಿರ್ವಾಹಕ ಇವರ ಸಹಿ ಮತ್ತು ಮೊಹರುನೊಂದಿಗೆ ದೃಡೀಕರಿಸಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು) ಸದರಿ ದಾಖಲೆಗಳನ್ನು ವಾದಿಸಾಕ್ಷ್ಯ ಸಲ್ಲಿಸುವ ಸಂದರ್ಭದಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.
- ದಾವಾ ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ ಕಾಲ ವಿಳಂಬವಾಗಿದ್ದಲ್ಲಿ ಪ್ರಮಾಣದೊಂದಿಗೆ ಕಾಲ ವಿಳಂಬ ಮನ್ನಾ ಅರ್ಜಿಯನ್ನು ಸಕಾರಣಗಳೊಂದಿಗೆ ಹಾಗೂ ಪೂರಕ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.
- ದಾವಾ ಅರ್ಜಿಯೊಂದಿಗೆ ಸಲ್ಲಿಸುವ ದಾಖಲೆಗಳ ಪಟ್ಟಿಯನ್ನು ಪುಟಗಳ ಸಂಖ್ಯೆ ನಮೂದಿಸಿ. (ಚೆಕ್‌ಲಿಸ್ಟ್).

## ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರ ಸಪ್ತಾಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



**ಮೈಸೂರು :** ದಿನಾಂಕ 16.11.2025 ಭಾನುವಾರದಂದು ಮೈಸೂರು ನಗರದ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ನಡೆದ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ, ಸಹಕಾರ ಸಪ್ತಾಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್.ಚಂದ್ರಶೇಖರ್‌ರವರು ವಹಿಸಿದ್ದರು. ಸಮಾರೋಪ ಭಾಷಣವನ್ನು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇದರ ಮುಖ್ಯಸ್ಥರಾದ ಪ್ರೋ. ಶೆಲ್ವಪಿಳ್ಳೈ ಅಯ್ಯಂಗಾರ್ ರವರು ನೆರವೇರಿಸಿದರು ಈ ಕಾರ್ಯಕ್ರಮದಲ್ಲಿ ಸಹಕಾ–ರಿಯ ವಯೋಮಾನ ಹಿರಿಯ ಸದಸ್ಯರಿಗೆ, ಸದಸ್ಯತ್ವದ ಹಿರಿಯ ಸದಸ್ಯರಿಗೆ ಸನ್ಮಾನ ಹಾಗೂ ಸಹಕಾರಿಯ ಸದಸ್ಯರು ಮತ್ತು ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು. ಇದರೊಂದಿಗೆ ಹಾಸ್ಯೋತ್ಸವ ಕಾರ್ಯಕ್ರಮವನ್ನು ಜನಪ್ರಿಯ ಹಾಸ್ಯ ಕಲಾವಿದರಾದ ಶ್ರೀ ಮೈಸೂರು ಆನಂದ್‌ರವರು ಮತ್ತು ಶ್ರೀಮತಿ ರೂಪಶ್ರೀ ಆನಂದ್‌ರವರು ದೇವರ ನಾಮಗಳು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಸಹಕಾರಿಯ ಸದಸ್ಯರು, ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾ–ರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ

**ಬೆಂಗಳೂರು:** ದಿನಾಂಕ 10.11.2025ರಂದು ಬೆಂಗಳೂರು ನಗರದ 1&4ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಬನವಾಸಿ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿನ ವಿಷಯಗಳ ಕುರಿತು ಮಾಹಿತಿ ನೀಡಿದರು.

**ದಿನಾಂಕ 13.11.2025 ರಂದು** ಬೆಂಗಳೂರು ನಗರದ 1&4ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನವಕಲ್ಯಾಣ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿನ ವಿಷಯಗಳ ಕುರಿತು ಮಾಹಿತಿ ನೀಡಿದರು.

**ದಿನಾಂಕ 13.11.2025 ರಂದು** ಬೆಂಗಳೂರು ನಗರದ 2&3ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸಮುದಾಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿನ ವಿಷಯಗಳ ಕುರಿತು ಮಾಹಿತಿ ನೀಡಿದರು ಹಾಗೂ ಚುನಾವಣೆ. ಸುಸ್ತಿ ಸಾಲಗಳಿಗೆ ಸಂಬಂಧಿಸಿದಂತೆ ಕ್ರಮವಿಡಲು ಸಲಹೆ ನೀಡಿದರು.

**ದಿನಾಂಕ 15.11.2025 ರಂದು** ಬೆಂಗಳೂರು ನಗರದ 1&4ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಗೋವಿಂದರಾಜ ನಗರ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿ ಚರ್ಚಿಸಬೇಕಿರುವ ವಿಷಯಗಳ ಕುರಿತು ವಿವರವಾದ ಟಿಪ್ಪಣಿಗಳೊಂದಿಗೆ ಮಾಹಿತಿ ನೀಡಿದರು.

**ದಿನಾಂಕ 15.11.2025 ರಂದು** ಬೆಂಗಳೂರು ನಗರದ 1&4ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿ ಚರ್ಚಿಸಬೇಕಿರುವ ವಿಷಯಗಳ ಕುರಿತು ವಿವರವಾದ ಟಿಪ್ಪಣಿಗಳೊಂದಿಗೆ ಮಾಹಿತಿ ನೀಡಿದರು.

**ದಿನಾಂಕ 18.11.2025 ರಂದು** ಬೆಂಗಳೂರು ನಗರದ 2&3ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸುಂದರ್‌ರಾಮ್ ಶೆಟ್ಟಿ ನಗರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿನ ವಿಷಯಗಳ ಕುರಿತು ಮಾಹಿತಿ ನೀಡಿದರು. ಲೆಕ್ಕಪರಿಶೋಧಕರ ನೇಮಕಾತಿ, ಜಿಎಸ್‌ಟಿ ನೋಂದಣಿ, ನಿರ್ದೇಶಕರ ಜವಾಬ್ದಾರಿಗಳು ಮತ್ತು ಸುಸ್ತಿ ಸಾಲಗಳಿಗೆ ಕ್ರಮವಿಡುವಂತೆ ಕ್ರಮವಿಡಲು ಸಲಹೆ ನೀಡಿದರು.

**ದಿನಾಂಕ 18.11.2025 ರಂದು** ಬೆಂಗಳೂರು ನಗರದ 1&4ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಕುಸುಮಾಂಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಭೆಯಲ್ಲಿ ಚರ್ಚಿಸಬೇಕಿರುವ ವಿಷಯಗಳ ಕುರಿತು ಮಾಹಿತಿ ನೀಡಿದರು.

**ದಿನಾಂಕ 22.11.2025 ರಂದು** ಬೆಂಗಳೂರು ನಗರದ 2&3ನೇ ವಲಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸಮೃದ್ಧ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಜವಾಬ್ದಾರಿಗಳು ಮತ್ತು ಸುಸ್ತಿ ಸಾಲಗಳಿಗೆ ಕ್ರಮವಿಡುವಂತೆ ಕ್ರಮವಿಡಲು ಸಲಹೆ ನೀಡಿದರು.

**ತುಮಕೂರು:** ದಿನಾಂಕ 15.11.2025ರಂದು ತುಮಕೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಶ್ರೀ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಹಾಗೂ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.

**ದಕ್ಷಿಣ ಕನ್ನಡ : ದಿನಾಂಕ 14–11–2025ರ** ಶುಕ್ರವಾರದಂದು ಬೆಳಿಗ್ಗೆ 11:00 ಗಂಟೆಗೆ ಸವಿತಾ ಸೌಹಾರ್ದ ಸಹಕಾರಿ ನಿ., ಇದರ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದ್ ಬಂಗೇರ ರವರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗೆ ಮಾಹಿತಿಯನ್ನು ಪಡೆದು ಸಹಕಾರಿಯು ಸರಿಪಡಿಸಬೇಕಾದ ಅಂಶಗಳ ಕುರಿತಂತೆ ಹಾಜರಿದ್ದ ಎಲ್ಲಾ ಸದಸ್ಯರ ಗಮನಕ್ಕೆ ತಂದು ಸರಿಪಡಿಸಿಕೊಂಡ ವರದಿಯನ್ನು ನೀಡಲು ಅಗತ್ಯ ಮಾರ್ಗದರ್ಶನ ಮಾಡಲಾಯಿತು. ಸದರಿ ಸಭೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಸೇರಿ 12 ಮಂದಿ ಹಾಜರಿದ್ದರು.

**ಹಾಸನ : ದಿನಾಂಕ : 21.11.2025ರ** ಶುಕ್ರವಾರದಂದು ಹಾಸನದ ಶ್ರೀ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ಭಾಗವಹಿಸಿ ನಿರ್ದೇಶಕರ ಹಕ್ಕುಗಳು, ಕರ್ತವ್ಯಗಳು ಮತ್ತು ಸಾಲ ವಸೂಲಾತಿಯ ಮತ್ತು ಸೌಹಾರ್ದ ಕಾಯ್ದೆ ಮತ್ತು ಉಪವಿಧಿಗಳ ಕುರಿತಂತೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಅಗತ್ಯ ಮಾಹಿತಿಯನ್ನು ಆಡಳಿತ ಮಂಡಳಿ ಸದಸ್ಯರಿಗೆ ನೀಡಿದರು.

## 72ನೇ ಅಖಿಲ ಭಾರತೀಯ ಸಹಕಾರ ಸಪ್ತಾಹ ಧ್ವಜಾರೋಹಣ ಕಾರ್ಯಕ್ರಮ



**ಹಾವೇರಿ :** ದಿನಾಂಕ 18.11.2025 ರಂದು ಹಾವೇರಿಯ ರಜನಿ ಸಭಾಂಗಣದಲ್ಲಿ ನಡೆದ ರಾಜ್ಯಮಟ್ಟದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಎಚ್. ಕೆ. ಪಾಟೀಲ್, ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿ, ಬೆಂಗಳೂರು ಇವರು ಉದ್ಘಾಟನೆಯನ್ನು ನೆರವೇರಿಸಿದರು.

ಪ್ರದರ್ಶನ ಮಳಿಗೆಗಳ ಉದ್ಘಾಟನೆಯನ್ನು ಶ್ರೀ ಜಿ. ಟಿ. ದೇವೇಗೌಡ ಸರ್, ಸನ್ಮಾನ್ಯ ಶಾಸಕರು, (ವಿಧಾನಸಭೆ) ಚಾಮುಂಡೇಶ್ವರಿ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ, ಬೆಂಗಳೂರು. ಹಾಗೂ ಶ್ರೀ ಬಸವರಾಜ್ ಹೊರಟ್ಟಿ ಸರ್, ಸನ್ಮಾನ್ಯ ಸಭಾಪತಿ, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು ಇವರು ಉಪಸ್ಥಿತರಿದ್ದರು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರುದ್ರಪ್ಪ ಲಮಾಣಿ , ಸನ್ಮಾನ್ಯ ಉಪ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಹಾಗೂ ಶಾಸಕರು ಹಾವೇರಿ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಹಾವೇರಿ ಜಿಲ್ಲೆಯ ಹಲವಾರು ಗಣ್ಯಮಾನ್ಯ ವ್ಯಕ್ತಿಗಳು ಭಾಗವಹಿಸಿದ್ದರು ಹಾಗೂ ಹಾವೇರಿ ಜಿಲ್ಲೆಯ ಸಹಕಾರ ಇಲಾಖೆಯ ಸಿಬ್ಬಂದಿಗಳು ಮತ್ತು 2000 ಕ್ಕಿಂತ ಹೆಚ್ಚಿನ ಸಹಕಾರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ದಿ ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಸವಣೂರು ಈ ಸಹಕಾರಿಯನ್ನು ಉತ್ತಮ ಸೌಹಾರ್ದ ಸಹಕಾರಿ ಸಂಘ ಎಂದು ಗೌರವಿಸಲಾಯಿತು.



**ಚಿತ್ರದುರ್ಗ :** ದಿನಾಂಕ 14.11.2025ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಚಿತ್ರದುರ್ಗ ಇವರ ವತಿಯಿಂದ 72ನೇ ಅಖಿಲ ಭಾರತೀಯ ಸಹಕಾರ ಸಪ್ತಾಹದ ಆಚರಣೆಯನ್ನು ಸಹಕಾರಿ ದ್ವಜಾರೋಹಣ ಮಾಡುವ ಮೂಲಕ ಆಚರಣೆ ಮಾಡಿದರು. ದ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಲ್ಲಿಕಾರ್ಜುನ್ ರವರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.



**ಚಿತ್ರದುರ್ಗ :** ದಿನಾಂಕ 14.11.2025ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



**ಬಾಗಲಕೋಟೆ :** ದಿನಾಂಕ 14.11.2025 ರಂದು ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಲ್ಲಿ ಆಯೋಜಿಸಿದ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್ ಇವರು ನೇರವೆರಿಸಿ ಸಹಕಾರ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ವೇದಿಕೆ ಮೇಲೆ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು, ನಿರ್ದೇಶಕರು, ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಹಾಯಕ ನಿಬಂಧಕರು ಉಪಸ್ಥಿತರಿದ್ದರು.

## 72ನೇ ಅಖಿಲ ಭಾರತೀಯ ಸಹಕಾರ ಸಪ್ತಾಹ ಧ್ವಜಾರೋಹಣ ಕಾರ್ಯಕ್ರಮ



72ನೇಯ ಅಖಿಲ ಭಾರತ ಸಹಕಾರ ಸಪ್ತಾಹ 2025 ಅಂಗವಾಗಿ ಶ್ರೀ ಕೃಷ್ಣಾ ವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ, ಸಂಕೇಶ್ವರ. ಇದರ ನಿರ್ದೇಶಕರಾದ ಶ್ರೀ ಗಣಪತಿ, ಭೀ, ಕುಟೋಳಿ ಯವರಿಂದ "ಧ್ವಜಾರೋಹಣ ನೆರವೇರಿಸಿಲಾಯಿತು



**ಹುಲ್ಲೋಳಿ** : ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿಯಲ್ಲಿ 14–11–2025 ರಂದು 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ನಿಮಿತ್ಯವಾಗಿ ಧ್ವಜಾರೋಹಣವನ್ನು ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಜಯಪಾಲ ಪಾ. ಚೌಗಲಾ ಅವರು ಸಹಕಾರಿ ಧ್ವಜ ಹಾರಿಸಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಸಹಕಾರ ಸಪ್ತಾಹದ ಬಗ್ಗೆ ಹಾಗೂ ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯ ಕೆಲಸಗಳ ಬಗ್ಗೆ ಸಮಾಜದ ಕೆಳಮಟ್ಟದ ಜನರಿಗೆ ತಲುಪಿಸಿ ಅದರ ಅರಿವು ಅವರಿಗೆ ಮೂಡಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಮ್ಮ ಸಹಕಾರಿಯ ನಿರ್ದೇಶಕರು ಹಾಗೂ ಶಾಖಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಕೊಪ್ಪಳ** : ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 2024–25ನೇ ಸಾಲಿಗೆ ಸಾಮಾಜಿಕ ಚಟುವಟಿಕೆಗಳ ಯೋಜನೆಯಡಿ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾಗುವ ಸ್ಥಳಗಳಲ್ಲಿ ಅದರಲ್ಲಿಯ ವಿಶೇಷವಾಗಿ ಅಧಿಕ ಸಂಖ್ಯೆಯ ಭಕ್ತಾಧಿಗಳು, ಮಹಿಳೆಯರು, ಹಿರಿಯನಾಗರಿಕರು, ಇನ್ನಿತರ ಸಾರ್ವಜನಿಕರ ಭೇಟಿ ನೀಡುವಂತಹ ಸ್ಥಳಗಳಲ್ಲಿ ಅವರಿಗೆ ವಿಶ್ರಾಂತಿ ಹಾಗೂ ಕೂಡಲು ಅನುಕೂಲವಾಗುವಂತಹ 10 ವಿವಿಧ ಸ್ಥಳಗಳಲ್ಲಿ 25 ಸಿಮೆಂಟ್ ಬೆಂಚ್‌ಗಳಲ್ಲಿ ಹಾಕಲಾಯಿತು.

2025–26ನೇ ಸಾಲಿನ ಸಹಕಾರಿ ರತ್ನ ಪ್ರಶಸ್ತಿಗೆ ಭಾಜನರಾದ ಶ್ರೀಯುತ ಶ್ರೀ ಗೌಳಿ ಕುಮಾರಸ್ವಾಮಿ ರವರಿಗೆ ದಿನಾಂಕ 26/11/2025 ರಂದು ನಮ್ಮ ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹೊಸಪೇಟೆ ಹಾಗೂ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹೊಸಪೇಟೆ ಅವರ ವತಿಯಿಂದ ಸಹಕಾರಿಯ ಆವರಣದಲ್ಲಿ ಸಹಕಾರಿ ರತ್ನ ಶ್ರೀಯುತ ಗೌಳಿ ಕುಮಾರಸ್ವಾಮಿ ರವರಿಗೆ ಗೌರವಪೂರ್ವಕವಾಗಿ ಸನ್ಮಾನಿಸಿದರು.

## ಕ್ಯಾಲೆಂಡರ್ ಬಿಡುಗಡೆ



**ಹೊಸಪೇಟೆ** : ದಿನಾಂಕ 04.12.2025ರ ಗುರುವಾರದಂದು ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹೊಸಪೇಟೆ ಸಹಕಾರಿಯ 2026ನೇ ವರ್ಷದ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಭರಮಪ್ಪ ರವರು ನೆರವೇರಿಸಿದರು. ನಂತರ ಮಾತನಾಡಿದ ಮಾನ್ಯ ಅಧ್ಯಕ್ಷರು ನಮ್ಮ ಸಹಕಾರಿಯ ಸಂಬಂಧಿಸಿದ ಅನೇಕ ಮಾಹಿತಿಗಳು ಲಭ್ಯವಿದ್ದು ಇದರಿಂದ ಜನರು ನಮ್ಮ ಸಂಘದ ಬಗ್ಗೆ ಎಲ್ಲಾ ವಿವರಗಳನ್ನು ತಿಳಿದುಕೊಂಡು ನಮ್ಮ ಸಂಘದಿಂದ ವ್ಯವಹಾರ ಮಾಡಲು ಮುಂದಾಗುವವರು ಎಂದು ತಿಳಿಸಿ ಇದರಿಂದ ನಮ್ಮ ಸಹಕಾ–ರಿಯ ವ್ಯವಹಾರವು ವೃದ್ಧಿಗೊಳ್ಳುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಹಾವೇರಿ:** ದಿನಾಂಕ 27.10.2025 ರಂದು ಶ್ರೀ ಛತ್ರಪತಿ ಶಿವಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾನಗಲ್ ಇದರ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜು ಗೌಳಿ ಇವರು ವಹಿಸಿದ್ದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ, ಹಾಗೂ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಶ್ರೀ ಎಂ.ಬಿ.ಕಲಾಲ್, ಅಧ್ಯಕ್ಷರು, ಆದಿಶಕ್ತಿ ಸೌಹಾರ್ದ ಸಹಕಾರಿ ಸಂಘ, ಹಾನಗಲ್ ಮತ್ತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು, ಶ್ರೀ ಬಿ.ಎಸ್.ಅಕ್ಕಿವಳ್ಳಿ, ಮಾಜಿ ಅಧ್ಯಕ್ಷರು, ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘ ನಿಯಮತ, ಹಾನಗಲ್ ಇವರು ಆಗಮಿಸಿದ್ದರು. ಈ ಸಂಧರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 12.11.2025ರಂದು ಆದಾಯ ತೆರಿಗೆ ಇಲಾಖೆ. ತುಮಕೂರು ಇವರ ವತಿಯಿಂದ ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ಎಸ್ಎಸ್‌ಪುರಂ ಶಾಖೆ, ತುಮಕೂರು ಇಲ್ಲಿ ಆದಾಯ ತೆರಿಗೆ ಕುರಿತು ಜನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಓಬಳೇಶ್ ರವರು, ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕರಾದ ಶ್ರೀ ಟಿ.ಎಲ್. ಸುರೇಶರಾವ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು. ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.



**ಬೀದರ :** ಭದ್ರಕೋಟೆಯ ಸೌಹಾರ್ದ ಸಹಕಾರಿ ನಿ., ಬೀದರ ಸಹಕಾ–ರಿಯ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ನೆರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪ.ಪೂ ಡಾ. ಬಸವಲಿಂಗ ಪಟ್ಟ ದೇವರು, ಅಧ್ಯಕ್ಷರು, ಅನುಭವ ಮಂಟಪ ಕೂಡಲಸಂಗಮ ಇವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ ರಾಜೇಂದ್ರ ಬಿರಾದಾರ ರವರು ವಹಿಸಿದ್ದರು.



**ಬೆಳಗಾವಿ:** ದಿನಾಂಕ 15.11.2025 ರಂದು ದಿ ಕುಡಚಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ., ಕುಡಚಿ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಟಿ.ಎಮ್.ಸಿ ಅಧ್ಯಕ್ಷರಾದ ಶ್ರೀ ಹಮೀದುದ್ದಿನ್ ಎಸ್ ರೋಹಿಲೆ ಇವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮುಸ್ತಾಕಅಹ್ಮದ ಬಾಗಶಿರಾಜ ಇವರು ವಹಿಸಿದ್ದರು.ಈ ಸಮಾರಂಭದಲ್ಲಿ ಸೌಹಾರ್ದ ಅಭಿವೃದ್ದಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ಭಾಗವಹಿಸಿ ಆಡಳಿತ ಮಂಡಲಿ ಹಾಗೂ ಸದಸ್ಯರ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.

# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರ ನಿರ್ದೇಶಕರ ಸೇರ್ಪಡೆ ಮತ್ತು ಅವಶ್ಯಕತೆ - ಒಂದು ವಿಮರ್ಶೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಕಲಂ.24(1)ರ ಮೂರನೇ ಪರಂತುಕ ಈ ಕೆಳಕಂಡಂತೆ ಇದೆ.**

"ಅಲ್ಲದೆ ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವ ವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಅಂಥ ಸಹಕಾರಿಯ ಮಂಡಳಿಯ ಸದಸ್ಯರನ್ನಾಗಿ ಸಹ ಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಅಂತಹ ಸಹಮತದ ಸದಸ್ಯರು ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಳಿ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಅಲ್ಲದೇ ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು(1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಗರಿಷ್ಠ ಸಂಖ್ಯೆ ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ."

**ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.28ಎ (4ಎ) ಈ ಕೆಳಕಂಡಂತೆ ಇದೆ.**

"ಸಹಕಾರ ಸಂಘದ ಮಂಡಳಿಯು, ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ಕ್ಷೇತ್ರದಲ್ಲಿ ಅನುಭವವಿರುವ ಅಥವಾ ಸಹಕಾರ ಸಂಘವು ಕೈಗೊಳ್ಳಬೇಕಾದ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರೆ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಮಂಡಳಿ ಸದಸ್ಯರನ್ನಾಗಿ ಕೋಆಪ್ಟ್ ಮಾಡಿಕೊಳ್ಳತಕ್ಕದ್ದು.

ಪರಂತು ಹಾಗೆ ಕೋಆಪ್ಟ್‌ರನ್ನಾಗಿ ನೇಮಕ ಮಾಡಿಕೊಂಡ ಸದಸ್ಯರ ಸಂಖ್ಯೆಯು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಗರಿಷ್ಟ ಸಂಖ್ಯೆಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ.

ಮತ್ತು ಪರಂತು, ಹಾಗೆ ಕೋಆಪ್ಟ್ ಆದಂಥವರು ಅಂಥ ಸದಸ್ಯರಾಗಿ ಅವರ ಸಾಮರ್ಥ್ಯದಲ್ಲಿ ಸಹಕಾರ ಸಂಘಗಳ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗತಕ್ಕದ್ದಲ್ಲ."

ಪ್ರಥಮ ಬಾರಿಗೆ ಭಾರತದ ಸಂವಿಧಾನಕ್ಕೆ 97ನೇ ತಿದ್ದುಪಡಿ ಅಧಿನಿಯಮ 2011 ರಲ್ಲಿ ಇದರ ಚಿಂತನೆಗೆ ಅವಕಾಶ ಕಲ್ಪಿಸಿತು. ಅನುಛೇದ 243 ಝಡ್‌ಜೆ (3) ರಡಿ ಈ ಕೆಳಕಂಡಂತೆ ಸೇರಿಸಿತು.

"ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನಿನಲ್ಲಿ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರ ಸಂಘವು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಆಡಳಿತ ಸಮಿತಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು.

ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಖಂಡ(1)ರಲ್ಲಿ ನಿರ್ದಿಷ್ಟ ಪಡಿಸಿದ ಇಪ್ಪತ್ತೊಂದು ನಿರ್ದೇಶಕರ ಜೊತೆಗೆ (ಹೆಚ್ಚುವರಿಯಾಗಿ) ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಅಧಿಕಾರ ವುಳ್ಳವರಾಗಿ ಸಹಕಾರ ಸಂಘದ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳವರಾಗಿರತಕ್ಕದ್ದಲ್ಲ ಅಥವಾ ಆಡಳಿತ ಸಮಿತಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ."

97ನೇ ಸಂವಿಧಾನ ತಿದ್ದುಪಡಿ ನಂತರ ಭಾರತದ ಶ್ರೇಷ್ಠ ನ್ಯಾಯಾಲಯವು, ಬಹುರಾಜ್ಯಗಳ ಒಪ್ಪಿಗೆ ಪಡೆದಿಲ್ಲವಾದ್ದರಿಂದ ಇದು ಅಸಿಂಧು ಎಂದು ಘೋಷಿಸಿದೆ ಮತ್ತು ಬಹುರಾಜ್ಯ ಸಹಕಾರಿ ಕಾಯಿದೆಗೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸಿದ್ದರೂ, ಕರ್ನಾಟಕ ರಾಜ್ಯ ಸರ್ಕಾರವು ಈ ಅವಕಾಶದಂತೆ, ಎರಡೂ ಕಾಯಿದೆಗಳಿಗೆ ತಿದ್ದುಪಡಿ ಮೂಲಕ ಅಳವಡಿಸಿಕೊಂಡಿರುವುದರಿಂದ ಇದು ಕರ್ನಾಟಕದ ಎರಡೂ ಕಾಯಿದೆಯಲ್ಲಿ ಇದು ಜಾರಿಯಲ್ಲಿ ಇದೆ.

## ವೃತ್ತಿಪರ ನಿರ್ದೇಶಕರನ್ನು ನೇಮಕ ಮಾಡಲೇಬೇಕೆ?

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.28ಎ(4ಎ) ನಡಿ "ಕೋಆಪ್ಟ್ ಮಾಡಿಕೊಳ್ಳತಕ್ಕದ್ದು" ಎಂದು ಪದಪ್ರಯೋಗ ಮಾಡಲಾಗಿದೆ. ಅದೇ ರೀತಿ ಕರ್ನಾಟಕ ಸೌಹಾರ್ದ ಕಾಯಿದೆ ಕಲಂ.24(1) ರಲ್ಲಿ "ಸೇರಿಸಿಕೊಳ್ಳತಕ್ಕದ್ದು" ಎಂಬ ಪದ ಪ್ರಯೋಗವಿದೆ. ಅಂದರೆ ಎರಡೂ ಕಾಯಿದೆಯಡಿ, ಪ್ರತಿಯೊಂದು ನೋಂದಾಯಿತ ಸಹಕಾರಿ/ಸಂಘವು ವೃತ್ತಿಪರ ನಿರ್ದೇಶಕರನ್ನು ಸೇರಿಸಿಕೊಳ್ಳಲೇಬೇಕು. ಆದರೆ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕ ಸಹಕಾರ ಸಂಘಗಳು, ಸೌಹಾರ್ದ ಪ್ರಾಥಮಿಕ ಸಹಕಾರಿ'ಗಳು ಬಹು ಸಂಖ್ಯೆಯಲ್ಲಿದ್ದು. (ಒಟ್ಟು ಸಹಕಾರಿ/ಸಂಘಗಳ ಶೇ.80%) ವೃತ್ತಿ ಪರನಿರ್ದೇಶಕರನ್ನು ನೇಮಿಸಿಕೊಂಡಿಲ್ಲ. ಇದನ್ನು ಸಹಕಾರ ಇಲಾಖೆ/ಸಂಯುಕ್ತ ಸಹಕಾರಿ ಯಾವುದೇ ಕ್ರಮ

ಜರುಗಿಸಿಲ್ಲ. ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಂಡಿದ್ದರೂ, ಅದನ್ನು ಜಾರಿ ಮಾಡುತ್ತಿಲ್ಲ ಇದಕ್ಕೆ ಕಾರಣ, ಸೂಕ್ತ ಮಾರ್ಗದರ್ಶನ ಇಲ್ಲದೇ ಇರುವುದು.

**ವೃತ್ತಿಪರ ನಿರ್ದೇಶಕರ ಅವಶ್ಯಕತೆ :** ಎರಡೂ ಕಾಯಿದೆಗಳಲ್ಲಿ ಒಂದು ಸಂಸ್ಥೆ ನಡೆಸಿಕೊಂಡು ಹೋಗುವ ಬಗ್ಗೆ ನೀತಿ ನಿಯಮ ರೂಪಿಸಿದೆ. ಉದಾಹರಣೆಗೆ ಸಾಲ ನೀಡುವ ಸಂಸ್ಥೆಗಳಲ್ಲಿ ಹಣ ಶೇಖರಣೆ (ಠೇವಣಿ) ಮತ್ತು ಸಾಲ ನೀಡುವ ವಿಧಿವಿಧಾನಗಳನ್ನು ರೂಪಿಸಲು ತಜ್ಞರ ಸಲಹೆ ಬೇಕು. ಇದಕ್ಕೆ ಕಾರಣವೆಂದರೆ ಠೇವಣಿಯನ್ನು ಯಾವ ದರದಲ್ಲಿ ಶೇಖರಿಸಬೇಕು. ಅದು ಮಾರುಕಟ್ಟೆದರಕ್ಕೆ ಪೂರಕವಾಗಿರಬೇಕು ಹಾಗೂ ಸಾಲ ನೀಡುವಾಗ, ಮಾರಾಟಕ್ಕೆ ದರ ನಿಗದಿ ಪಡಿಸುವಾಗ ಅನುಸರಿಸುವ ನೀತಿ. ಕೆಲವು ಸಹಕಾರ ಸಂಸ್ಥೆಗಳು ಠೇವಣಿಗೆ ಶೇ.12% ರಷ್ಟು ಬಡ್ಡಿ ನೀಡುತ್ತಿವೆ. (ಈ ಹಿಂದೆ ಶೇ.16%, 18% ರಷ್ಟು ಬಡ್ಡಿ ನೀಡುತ್ತಿದ್ದವು.) ಇದರಿಂದ ಆದ ಪರಿಣಾಮವಾದ ಪ್ರಸಂಗಳೆಂದರೆ, ಹೆಚ್ಚು ಠೇವಣಿ ಸಂಗ್ರಹಣೆ ಮಾಡಿ ಲಾಭದಾಯಕ ವಿನಿಯೋಗಕ್ಕೆ ವಿನಿಯೋಗಿಸಿದೆ, ನಷ್ಟ ಹೊಂದುವುದರ ಜೊತೆ ಠೇವಣಿದಾರರಿಗೆ ಮರಳಿ ನೀಡದೆ ಅವ್ಯವಹಾರಗಳಾಗಿ ತೊಂದರೆ ಅನುಭವಿಸುತ್ತಿವೆ. ಇದೇ ರೀತಿ, ಮಾರಾಟ, ಗ್ರಾಹಕ, ಸಂಸ್ಥೆ ಮತ್ತಿತರ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಚುನಾಯಿತ ಪ್ರತಿನಿಧಿಗಳಿಗೆ ಮಾಹಿತಿ ಕೊರತೆಯಿಂದ ನಷ್ಟ ಅನುಭವಿಸುತ್ತಿವೆ. ಚುನಾಯಿತ ಪ್ರತಿನಿಧಿಗಳು ಸದಸ್ಯರಿಂದ ಆಯ್ಕೆಯಾಗುತ್ತಿದ್ದು, ಆ ಸಹಕಾರಿ ಮಾಡುವ ವ್ಯವಹಾರದ ಬಗ್ಗೆ ಪರಿಣಿತಿ ಹೊಂದಿರಬೇಕಾಗಿಲ್ಲ. ಸಹಕಾರ ಮೂಲ ತತ್ವ, ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಸಂಗ್ರಹಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ನೋಂದಾಯಿಸಿದ ಸಂಸ್ಥೆ ಎಂದಿದ್ದರೂ, ಹಿಂದಿನ ವ್ಯವಹಾರ ಸಣ್ಣ ಪ್ರಮಾಣದಲ್ಲಿದ್ದು, ಮಂಡಳಿ ಸದಸ್ಯರು ಪ್ರಾಮಾಣಿಕತೆ ಮತ್ತು ಭದ್ರತೆಯಿಂದ ಕೆಲಸವನ್ನು, ಸಂಘದ ಹಿತಾಸಕ್ತಿ ಗಮನಿಸಿ ನೆರವೇರಿಸುತ್ತಿದ್ದರು. ಈಗಿನ ವ್ಯವಹಾರ ವೈವಿದ್ಯಮಯವಾಗಿದ್ದು ಮತ್ತು ಕ್ಲಿಷ್ಟಕರವಾಗಿದೆ. ಈಗಿನ ವ್ಯವಹಾರಗಳನ್ನು ಪರಿಣಿತರ ಸಲಹೆ ಸೂಚನೆ ಇಲ್ಲದೇ ನಡೆಸುವುದು ಬಹಳ ಕಷ್ಟಕರ. ಅದಕ್ಕಾಗಿ ವೃತ್ತಿಪರ ನಿರ್ದೇಶಕರ ಅವಶ್ಯಕತೆ ಅತಿ ಅವಶ್ಯ. ಆದ್ದರಿಂದ ಕಾಯಿದೆಯಲ್ಲಿ ಸೂಚಿಸಿದಂತೆ ಪ್ರತಿಯೊಂದು ಸಹಕಾರಿ/ಸಂಘ ಮತ್ತು ಪರ ನಿರ್ದೇಶಕರು ಸೇರಿಸಿಕೊಳ್ಳಲೇಬೇಕು.

**ವೃತ್ತಿಪರ ನಿರ್ದೇಶಕರ ಕರ್ತವ್ಯ ಮತ್ತು ಜವಾಬ್ದಾರಿಗಳು :**

ಆಡಳಿತ ಮಂಡಳಿ ಸಹಮತದಿಂದ ಸೇರಿಸಿಕೊಂಡ ಈ ವೃತ್ತಿಪರ ನಿರ್ದೇಶಕರಿಗೆ ಕಾಯಿದೆಯಲ್ಲಿಯೇ ನೀತಿ ರೂಪಿಸಿದೆ. ಪದಾಧಿಕಾರಿಗಳ ಚುನಾವಣೆಯಲ್ಲಿ ಮತ ಚಲಾಯಿಸತಕ್ಕದ್ದಲ್ಲ ಹಾಗೂ ಆ ಸಹಕಾರ/ಸಂಘದ ಪದಾಧಿಕಾರಿಯಾಗತಕ್ಕದ್ದಲ್ಲ. ಆದರೆ ವಿಷಯಗಳ ಚರ್ಚೆ ಮಾಡುವಾಗ, ಆರ್ಥಿಕ ವಿಷಯ, ಆಡಳಿತಾತ್ಮಕ ವಿಷಯ, ತಾಂತ್ರಿಕ ವಿಷಯ, ವೈಜ್ಞಾನಿಕ ವಿಷಯಗಳ ಬಗ್ಗೆ ವೃತ್ತಿಪರ ನಿರ್ದೇಶಕರು ಸಲಹೆ ನೀಡಿದರೆ, ಅದನ್ನು ಪರಿಗಣಿಸಬೇಕು ಮತ್ತು ಅವರ ಸೂಚನೆಯಂತೆ ತೀರ್ಮಾನವಾಗದಿದ್ದರೆ, ಅಂತಹ ವೃತ್ತಿಪರ ನಿರ್ದೇಶಕ ವಿರುದ್ಧ ಷರಾ ಬರೆಸುವ ಅಧಿಕಾರ ಹೊಂದಿದ್ದಾನೆ ಮತ್ತು ಆಡಳಿತ ಮಂಡಳಿ ಅವನ ಸಲಹೆಯಂತೆ ತೀರ್ಮಾನ ತೆಗೆದುಕೊಂಡಾಗ, ಆಗುವ ನಷ್ಟಕ್ಕೆ ಅವನೂ ಸಂಯುಕ್ತವಾಗಿ ಜವಾಬ್ದಾರನಾಗುತ್ತಾನೆ.

**ರಾಜ್ಯ ಸಂಸ್ಥೆಗಳು ಮಾದರಿಯಾಗಿವೆಯೇ?**

1959ರ ಕಾಯಿದೆಯಡಿ ರಾಜ್ಯ ಮಟ್ಟದ ಸಹಕಾರ ಮಹಾಮಂಡಳ, ವೃತ್ತಿಪರ ನಿರ್ದೇಶಕರನ್ನು ನೇಮಿಸಿಕೊಳ್ಳುವಾಗ ಅನುಸರಿಸುವ ನೀತಿಯನ್ನು ಸದಸ್ಯ ಸಹಕಾರಿಗಳು ಅಳವಡಿಸಿಕೊಂಡರೆ, ಸಂವಿಧಾನದ 21ರ ಮಿತಿಯನ್ನು ಅಣಕಿಸುವಂತಿದೆ. ಚುನಾವಣೆಯಲ್ಲಿ ಸ್ಪರ್ಧಿಸುವ, ನಾಮ ಪತ್ರ ಹಿಂಪಡೆಯುವಂತೆ ಮಾಡಿದ ವ್ಯಕ್ತಿಗಳಿಗೆ ಸ್ಥಾನ ಕಲ್ಪಿಸಲು, ಹಿಂದಿನ ಬಾಗಿಲಿನಿಂದ ಪ್ರವೇಶ ನೀಡುವುದೇ ವೃತ್ತಿಪರ ನಿರ್ದೇಶಕರನ್ನು ನೇಮಿಸಿಕೊಳ್ಳುವುದು ಎಂದು ತಿಳಿಸುತ್ತಿವೆ. ಇದನ್ನು ಸದಸ್ಯ ಸಹಕಾರಿಗಳ ಮಾದರಿಯಾದರೆ, ಅದನ್ನು ಸಂವಿಧಾನವನ್ನು ಕಾಯಿದೆಯಲ್ಲಿ ದುರುಪಯೋಗಿಸಿಕೊಂಡಂತೆ ಮತ್ತು ಸದಸ್ಯ ಸಂಘಗಳಿಗೆ ತಪ್ಪು ಸಂದೇಶ ನೀಡಿದಂತೆ ಎಂದು ಏಕೆ ತಿಳಿಯುತ್ತಿಲ್ಲ. ಆಡಳಿತ ಮಂಡಳಿಯ ಮಿತಿಯನ್ನು ಸಂವಿಧಾನ ಮತ್ತು ಎರಡೂ ಕಾಯಿದೆಯಡಿ 21ಕ್ಕೆ ಸಮಿತಿಗೊಳಿಸಿದ್ದರೂ, ಅದನ್ನು ಅಣಕಿಸುವಂತೆ, ಹಿಂಬಾಗಿಲಿನ ಮೂಲಕ ಚುನಾಯಿತ ಪ್ರತಿನಿಧಿಗೆ ಅರ್ಹತೆ ಇದ್ದ ವ್ಯಕ್ತಿಗಳೇ ವೃತ್ತಿಪರ ನಿರ್ದೇಶಕರೆಂದು, ಅದರಿಂದ ಆ ಮಹಾಮಂಡಳಕ್ಕೆ ಆಗುವ ಅನುಕೂಲವೇನು? ಇದಕ್ಕೆ ಸೌಹಾರ್ದ ಕಾಯಿದೆಯೂ ಸಂಯುಕ್ತ ಸಹಕಾರಿಯ ಮಾದರಿಯಾಗಿ ಕೆಲಸ ಮಾಡುತ್ತಿಲ್ಲ. ಇದಕ್ಕೆ ಮತ್ತೊಂದು ಉದಾಹರಣೆ ನೀಡುವುದಾದರೆ, ರಾಜ್ಯ ಮಟ್ಟದ ಮತ್ತೊಂದು ಶಿಕ್ಷಣ ನೀಡುವ ಸಂಸ್ಥೆಯು 21ರ ಮಿತಿ ಜೊತೆಗೆ, ಸಲಹೆಗಾರರೆಂದು 4 ಜನರು, ಶಿಕ್ಷಣ ಸಮಿತಿಗೆ 7 ಜನರು ಎಂದು ಸಂಖ್ಯೆಯನ್ನು ಏರಿಸಿ ಮಂಡಳಿ ಸದಸ್ಯತ್ವವನ್ನು ಪರೋಕ್ಷವಾಗಿ ನೀಡಿ, ಅವರಿಗೆ ಸಲ್ಲುವ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನೀಡಿದರೆ, ಸದಸ್ಯ ಸಹಕಾರಿಗಳು ಅದನ್ನು ಮಾದರಿಯಾಗಿ ಪರಿಗಣಿಸುವುದಿಲ್ಲವೇ? ಇದನ್ನು ಏಕ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳು ಮಾದರಿಯಾಗಿ ಕೆಲಸ ಮಾಡುತ್ತಿಲ್ಲ.

**ಉಪಸಂಹಾರ :**

ಪ್ರತಿಯೊಂದು ಸಹಕಾರಿ/ಸಂಸ್ಥೆಯಲ್ಲಿ ಕಾಯಿದೆಯಲ್ಲಿ ನಿಗದಿ ಪಡಿಸಿದಂತೆ ವೃತ್ತಿಪರ ನಿರ್ದೇಶಕರನ್ನು ಸಹಮತದಿಂದ ಸೇರಿಸಿಕೊಳ್ಳತಕ್ಕದ್ದು ಮತ್ತು ಕಾಯಿದೆಯಲ್ಲಿ ನಿಗದಿಪಡಿಸಿದಂತೆ ವೃತ್ತಿಪರ ನಿರ್ದೇಶಕರು ಎಂದರೆ, ಆಡಳಿತ, ಹಣಕಾಸು, ಬ್ಯಾಂಕಿಂಗ್ ಇದಲ್ಲಿ ಪರಿಣಿತರನ್ನು ನೇಮಿಸಬೇಕೆಂದು ಮತ್ತು ಸಂಸ್ಥೆಗಳು ಮಾದರಿಯಾಗಿ ಏಕೆ ಮಾರ್ಗದರ್ಶನ ನೀಡುತ್ತಿಲ್ಲ. ರಾಜ್ಯ ಮಟ್ಟದ ಸಂಸ್ಥೆಗಳು ಮಾದರಿಯಾಗಬೇಕೆ ಹೊರತು, ಕಾಯಿದೆಯನ್ನು ಪರೋಕ್ಷವಾಗಿ ಉಲ್ಲಂಘಿಸುವ ಪ್ರಯತ್ನಗಳನ್ನು ಏಕೆ ನಿಲ್ಲಿಸುತ್ತಿಲ್ಲ.?

# ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಮಹತ್ವ

– ಶ್ರೀಮತಿ ಕವಿತ ಆರ್, ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಪೀಠಿಕೆ :** 2017ರ ಆರ್ಥಿಕ ಸೇರ್ಪಡೆಯು ಹೊಸ ಆರ್ಥಿಕ ಬೆಳವಣಿಗೆಯ ಮಾದರಿಯಾಗಿ ಹೊರಹೊಮ್ಮುತ್ತಿದೆ, ಇದು ದೇಶದಲ್ಲಿ ಬಡತನವನ್ನು ನಿರ್ಮೂಲನ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆರ್ಥಿಕ ಸೇರ್ಪಡೆಯು ಸಾರ್ವಜನಿಕ ಬ್ಯಾಂಕಿಂಗ್ ಸೇವೆಗಳ ವಿತರಣೆಯನ್ನು ಸೂಚಿಸುತ್ತದೆ. ನಿಯಮಗಳು ಮತ್ತು ಷರತ್ತುಗಳಿಂದಾಗಿ ಅನುಕೂಲಗಳನ್ನು ಹೊಂದಿರುವ ಜನರಿಗೆ ಇದು ಕೈಗೆಟುಕುವಂತಿದೆ. ಭಾರತ ಸರ್ಕಾರವು ಶ್ರೀಮಂತ ಮತ್ತು ಬಡ ಜನರ ನಡುವಿನ ಅಂತರವನ್ನು ಕಡಿಮೆ ಮಾಡಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ, ಹಣಕಾಸು ಸಂಸ್ಥೆಗಳ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಯ ಆಧಾರಸ್ತಂಭಗಳಿವೆ. ಇದು ಹತ್ತು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಸೇರ್ಪಡೆಯ ಪ್ರಭಾವದ ಪ್ರಸ್ತುತ ಅಧ್ಯಯನವಾಗಿದೆ.

**ಪರಿಚಯ :** ಭಾರತ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತನ್ನ ರಾಷ್ಟ್ರೀಯ ದೃಷ್ಟಿಯ ಭಾಗವಾಗಿ ಹಣಕಾಸು ಸೇರ್ಪಡೆಗಳನ್ನು ಉತ್ತೇಜಿಸುವ ಪ್ರಯತ್ನವನ್ನು ಮಾಡಿದೆ. ಕಳೆದ ಐದು ದಶಕಗಳಲ್ಲಿ, ಭಾರತ ಸರ್ಕಾರವು ಪ್ರಮುಖ ಕ್ರಮಗಳನ್ನು ಕೈಗೊಂಡಿದೆ: ಬ್ಯಾಂಕಿನ ರಾಷ್ಟ್ರೀಕರಣ, ಬಲವಾದ ಶಾಖೆಯ ಜಾಲಗಳನ್ನು ನಿರ್ಮಿಸುವುದು, ಉದಾರ ಆದ್ಯತೆಯ ಸಾಲ, ಲೀಡ್ ಬ್ಯಾಂಕ್ ಯೋಜನೆಗಳು, ಎನ್‌ಜಿಓಗಳು ಮತ್ತು ಬ್ಯಾಂಕಿಂಗ್ ಸೇವೆಗಳ ವಿಸ್ತರಣೆ, ವ್ಯವಹಾರ ಪ್ರತಿನಿಧಿಗಳ (Business Correspondents) ಮೂಲಕ ಸೇವೆ ನೀಡಲು ಅನುಮತಿ, ಶೂನ್ಯ ಬ್ಯಾಲೆನ್ಸ್‌ನ ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ (BSBD) ಖಾತೆಗಳು ಇತ್ಯಾದಿ ಕ್ರಮಗಳು. ಈ ಎಲ್ಲಾ ಉಪಕ್ರಮಗಳ ಮೂಲ ಉದ್ದೇಶವು ಆರ್ಥಿಕವಾಗಿ ಹೊರಗುಳಿದಿರುವ ಭಾರತೀಯ ಜನಸಂಖ್ಯೆಯ ದೊಡ್ಡ ವಲಯಕ್ಕೆ ಆರ್ಥಿಕ ಸೇವೆಗಳನ್ನು ಒದಗಿಸುವುದಾಗಿದೆ.

ಭಾರತ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮೈಕ್ರೋ ಫೈನಾನ್ಸ್ – ಸ್ವಯಂಸಹಾಯ ಗುಂಪು (SHG) ಮಾದರಿ (1992), ಕಿಸಾನ್ ಕ್ರೆಡಿಟ್ ಕಾರ್ಡ್ (1998), ಮೈಕ್ರೋ ಫೈನಾನ್ಸ್, ನೋ–ಫ್ರಿಲ್ ಖಾತೆಗಳು (2004), ವ್ಯವಹಾರ ಪ್ರತಿನಿಧಿಗಳು ಮತ್ತು ವ್ಯವಹಾರ ಸುಧಾರಕರು (2006, 2009) ಮುಂತಾದ ಆರ್ಥಿಕ ಒಳಗೊಳ್ಳುವಿಕೆ ಮಾದರಿಗಳನ್ನು ಪರಿಚಯಿಸಿವೆ. ಆದರೂ, ಆರ್ಥಿಕ ಒಳಗೊಳ್ಳುವಿಕೆಯ ಮಾರ್ಗ ಇನ್ನೂ ಹಲವು ಸವಾಲುಗಳನ್ನು ಎದುರಿಸುತ್ತಿದೆ.

ಸರಳವಾಗಿ ಹೇಳುವುದಾದರೆ, ಆರ್ಥಿಕ ಒಳಗೊಳ್ಳುವಿಕೆ ಎಂದರೆ ಸಮಾಜದ ಅಡಿಪಾಯದಲ್ಲಿರುವ ಜನರನ್ನು ಆರ್ಥಿಕ ಮುಖ್ಯವಾಹಿನಿಗೆ ತರಿಸುವ ಪ್ರಕ್ರಿಯೆಯಾಗಿದೆ. ಆರ್ಥಿಕ ಒಳಗೊಳ್ಳುವಿಕೆಯ ಮೂಲಕ ಬ್ಯಾಂಕಿಂಗ್ ಮತ್ತು ಸಾಲ ಸೌಲಭ್ಯಗಳನ್ನು ಹಿಂದುಳಿದ ಹಾಗೂ ಕಡಿಮೆ ಆದಾಯದ ಜನರಿಗೆ ಕಡಿಮೆ ವೆಚ್ಚದಲ್ಲಿ ವಿತರಿಸುವುದು ಸಾಧ್ಯವಾಗುತ್ತದೆ.

ಭಾರತದಲ್ಲಿ, ದೇಶದ ಅಭಿವೃದ್ಧಿಗಾಗಿ ಆರ್ಥಿಕ ಸೇರ್ಪಡೆಯಲ್ಲಿ ರಾಜಕೀಯ ನಿಲುವು ಯಾವುದೇ ಆಗಿರಲಿ, ಭಾರತೀಯ ಅಧಿಕಾರಿಗಳು ಕಳೆದ ಹಲವು ವರ್ಷಗಳಿಂದ ಆರ್ಥಿಕ ಒಳಗೊಳ್ಳುವಿಕೆಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ, ವಿಶೇಷವಾಗಿ ಕಳೆದ ಹತ್ತು ವರ್ಷಗಳಲ್ಲಿ ತಮ್ಮ ಪ್ರಯತ್ನಗಳನ್ನು ವೇಗಗೊಳಿಸಿದ್ದಾರೆ. ವಿವಿಧ ಸಾರ್ವಜನಿಕ ಹಿತಾಧಿಕಾರಿಗಳು ಹಲವಾರು ಉಪಕ್ರಮಗಳು ಮತ್ತು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದಾರೆ.

**ಆರ್ಥಿಕ ಸೇರ್ಪಡೆಯ ವ್ಯಾಖ್ಯಾನ :** ಆರ್ಥಿಕ ಸೇರ್ಪಡೆ ಎಂದರೆ, "ದುರ್ಬಲ ವರ್ಗಗಳು ಮತ್ತು ಕಡಿಮೆ–ಆದಾಯದ ಗುಂಪುಗಳಂತಹ ದುರ್ಬಲ ವರ್ಗಗಳಿಗೆ ಅಗತ್ಯವಿರುವ ಹಣಕಾಸು ಸೇವೆಗಳಿಗೆ ಸಕಾಲಿಕ ಮತ್ತು ಸಾಕಷ್ಟು ಸಾಲ ನೀಡುವ ಪ್ರಕ್ರಿಯೆ" ಎಂದು ವ್ಯಾಖ್ಯಾನಿಸಲಾಗಿದೆ (ರಂಗರಾಜನ್, 2008). ಏಪ್ರಿಲ್ 2012 ರಲ್ಲಿ, ವಿಶ್ವಬ್ಯಾಂಕ್ ನಡೆಸಿದ ಅಧ್ಯಯನವು ಕಳೆದ ಒಂಬತ್ತು ವರ್ಷಗಳಲ್ಲಿ ಕೇವಲ 9% ವ್ಯಕ್ತಿಗಳು ಮಾತ್ರ ಬ್ಯಾಂಕುಗಳಿಂದ ಹೊಸ ಸಾಲಗಳನ್ನು ಪಡೆಯುತ್ತಾರೆ ಮತ್ತು 35% ಜನರು ಭಾರತದಲ್ಲಿ ಅಧಿಕೃತ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದಾರೆ, ಉದಯೋನ್ಮುಖ ಆರ್ಥಿಕತೆಗಳ ಶೇಕಡಾವಾರು ಪ್ರಮಾಣವು 41% ಆಗಿದೆ.

ಚಕ್ರವರ್ತಿ ಮತ್ತು ಪಾಲ್ (2013) ಪ್ರಕಾರ, ಆರ್ಥಿಕ ಸೇರ್ಪಡೆ ಎಂದರೆ ಸಮಾಜದ ಎಲ್ಲ ವರ್ಗಗಳಿಗೆ, ವಿಶೇಷವಾಗಿ ದುರ್ಬಲ ಮತ್ತು ಕಡಿಮೆ ಆದಾಯದ ವರ್ಗಗಳಿಗೆ, ಅಗತ್ಯವಿರುವ ಸೂಕ್ತ ಹಣಕಾಸು ಉತ್ಪನ್ನಗಳು ಮತ್ತು ಸೇವೆಗಳನ್ನು ನ್ಯಾಯಸಮ್ಮತವಾಗಿ, ಪಾರದರ್ಶಕವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಲಭ್ಯವಾಗುವಂತೆ ಮಾಡುವ ಪ್ರಕ್ರಿಯೆ.

ಆರ್ಥಿಕ ಸೇರ್ಪಡೆಯ ಉದ್ದೇಶವು ದೇಶದ ದೊಡ್ಡ ಪ್ರಮಾಣದ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನಸಂಖ್ಯೆಗೆ ಸುಲಭವಾಗಿ ಹಣಕಾಸು ಸೇವೆಗಳನ್ನು ಲಭ್ಯವಾಗುವಂತೆ ಮಾಡುವುದಾಗಿದೆ. ಸಮಾಜದ ಬಡ ಮತ್ತು ನಿರ್ಲಕ್ಷಿತ ವರ್ಗಗಳತ್ತ ಭಾರತದ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ.

ಕ್ಯಾಂಪೋಸ್ ಮತ್ತು ಡೆರ್ಕಾನ್ (2014) ತಮ್ಮ ಅಧ್ಯಯನದಲ್ಲಿ, ಹಣಕಾಸು ಮತ್ತು ಬೆಳವಣಿಗೆಯ ನಡುವಿನ ಸಂಬಂಧದ ಕುರಿತು ಇತ್ತೀಚಿನ ಸಂಶೋಧನೆಗಳನ್ನು ಸಂಕ್ಷಿಪ್ತಗೊಳಿಸಿದ್ದಾರೆ, ಇದನ್ನು ಹಣಕಾಸಿನಿಂದ ಬೆಳವಣಿಗೆಗೆ ಕಾರಣ ಮತ್ತು ಏಕಮುಖವೆಂದು ಪರಿಗಣಿಸಲಾಗುತ್ತದೆ. ಡೆಲಿಸ್, ಸ್ಟೈಕೌರಾಸ್ & ಟ್ಸೌಮಾಸ್ (2013) ವರದಿಯ ಪ್ರಕಾರ ಬಂಡವಾಳದ ಕಠಿಣತೆ ಮತ್ತು ಮೇಲ್ವಿಚಾರಣಾ ಶಕ್ತಿ ನಿಯಂತ್ರಣವು ಅಸಮಾನತೆಯನ್ನು ಕಡಿಮೆ ಮಾಡುತ್ತವೆ. ಆದರೆ

ಮಾರುಕಟ್ಟೆ ಶಿಸ್ತು ಮತ್ತು ಚಟುವಟಿಕೆಯ ನಿರ್ಬಂಧಗಳು ಅಸಮಾನತೆಯನ್ನು ಹೆಚ್ಚಿಸಬಹುದು. ಹಣಕಾಸು ಒಳಗೊಳ್ಳುವಿಕೆ ವ್ಯಕ್ತಿಗಳಿಗೆ ಮಹತ್ತರವಾದ ಸಕಾರಾತ್ಮಕ ಪರಿಣಾಮ ಬೀರಬಹುದು ಎಂಬುದನ್ನು ಸೂಚಿಸುವ ಸಾಹಿತ್ಯ ವೇಗವಾಗಿ ಬೆಳೆಯುತ್ತಿದೆ. ಹಲವು ಅಧ್ಯಯನಗಳು, ಹಣಕಾಸು ಸೇವೆಗಳ ಲಭ್ಯತೆಯ ಕೊರತೆ ಬಡತನ ಹಾಗೂ ಅಸಮಾನತೆಗೆ ಕಾರಣವಾಗುತ್ತದೆ ಎಂದು ತೋರಿಸಿವೆ.

ಇತ್ತೀಚೆಗೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಂಶೋಧಕರು ಮತ್ತು ನೀತಿ ನಿರೂಪಕರಿಂದ ಆರ್ಥಿಕ ಸೇರ್ಪಡೆಯ ವಿಷಯವು ಹೊಸ ಗಮನವನ್ನು ಸೆಳೆದಿದೆ. ದೊಡ್ಡ ಪ್ರಮಾಣದ ಬಜೆಟ್ ಸೇರ್ಪಡೆಯು ಅಧಿಕೃತ ಹಣಕಾಸು ಸೇವೆಯನ್ನು ಒದಗಿಸುವುದಾಗಿದೆ. ಭಾರತವು 29 ರಾಜ್ಯಗಳು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿರುವ 1.45 ಬಿಲಿಯನ್ ಜನ ಸಂಖ್ಯೆಯ ದೇಶವಾಗಿದೆ. ದೇಶದಲ್ಲಿ ಸುಮಾರು 600,000 ಹಳ್ಳಿಗಳು ಮತ್ತು 640 ಜಿಲ್ಲೆಗಳಿವೆ. ಕೈಗೆಟುಕುವ ಬೆಲೆಯಲ್ಲಿ ಹಣ–ಕಾಸು ಸೇವೆಗಳ ಲಭ್ಯತೆ ಎಂದಿಗೂ ಜಾಗತಿಕ ಸಮಸ್ಯೆಯಾಗಿಯೇ ಉಳಿದಿದೆ. ಆದ್ದರಿಂದ, ಒಬ್ಬೊಬ್ಬರನ್ನೂ ಒಳಗೊಂಡ ಹಣಕಾಸು ವ್ಯವಸ್ಥೆ ಭಾರತ ಮತ್ತು ಅನೇಕ ದೇಶಗಳಲ್ಲಿ ನೀತಿ ಪ್ರಾಮುಖ್ಯತೆಯಾಗಿದೆ. ಬಡ ಮತ್ತು ಹಿಂದುಳಿದ ವರ್ಗಗಳಿಗೆ ಹಣಕಾಸು ಸೇವೆಗಳ ಪ್ರವೇಶ ದೊರೆತರೆ ಅವರ ಆರ್ಥಿಕ ಸ್ಥಿತಿ ಮತ್ತು ಜೀವನಮಟ್ಟವು ಉತ್ತಮಗೊಳ್ಳುತ್ತದೆ.

ಈ ಕಾರಣಕ್ಕಾಗಿ ಆರ್‌ಬಿಐ ಬ್ಯಾಂಕಿಂಗ್ ಕ್ಷೇತ್ರವನ್ನು ಹೊಸ ಶಾಖೆಗಳು ಮತ್ತು ಎಟಿಎಂಗಳನ್ನು ಸ್ಥಾಪಿಸುವ ಮೂಲಕ ಬ್ಯಾಂಕಿಂಗ್ ಜಾಲವನ್ನು ವಿಸ್ತರಿಸಲು ಉತ್ತೇಜಿಸುತ್ತಿದೆ. ಹಣಕಾಸಿನ ಸೇರ್ಪಡೆ ಎಂದರೆ ಬ್ಯಾಂಕಿಂಗ್ ಸೇವೆಗಳೊಂದಿಗೆ ಹಣಕಾಸು ಸೇವೆಗಳ ವಿತರಣೆಯನ್ನು ಹೊರತುಪಡಿಸಿ ಮತ್ತು ವಂಚಿತ ಮತ್ತು ಕಡಿಮೆ ಆದಾಯದ ಗುಂಪುಗಳ ದೊಡ್ಡ ಪ್ರಮಾಣದ ವೆಚ್ಚಗಳಿಗೆ ಸಾಲವನ್ನು ನೀಡುತ್ತದೆ. ಹಣಕಾಸು ಸೇವೆಗಳ ಪ್ರವೇಶಕ್ಕೆ ಇರುವ ಮಿತಿಗಳಿಂದ ಹೊರತಾಗಿಯೂ, ಉಳಿತಾಯ ಖಾತೆಗಳು, ಹಣಕಾಸು ಖಾತೆಗಳು, ಸಾಲ, ವಿಮೆ, ಪಿಂಚಣಿ ಇತ್ಯಾದಿ ಸೇವೆಗಳ ಮೂಲಕ ಹಿಂದುಳಿದ ಮತ್ತು ಕಡಿಮೆ ಆದಾಯದ ವರ್ಗಗಳು ಸಮಾಜದಲ್ಲಿ ಪಾಲ್ಗೊಳ್ಳಬಹುದು (Law & Singh, 2014). ವಿವಿಧ ಹಣಕಾಸು ಸೇವೆಗಳು ಎಂದರೆ ಉಳಿತಾಯ, ಸಾಲ, ವಿಮೆ, ಪಾವತಿ ಹಾಗೂ ವಹಿವಾಟು ಸೌಲಭ್ಯಗಳನ್ನು ಒಳಗೊಂಡಿದ್ದು, ಇವುಗಳನ್ನು ಅಧಿಕೃತ ಹಣ–ಕಾಸು ವ್ಯವಸ್ಥೆಗಳು ಒದಗಿಸುತ್ತವೆ.

**ಭಾರತದಲ್ಲಿ ರಾಜ್ಯಗಳಾದ್ಯಂತ ಹಣಕಾಸು ಸೇರ್ಪಡೆ :** ಭಾರತ ಸರ್ಕಾರದ ಯೋಜನಾ ಆಯೋಗವು 12ನೇ ಐದು ವರ್ಷದ ಯೋಜನೆ (2012–2017)ಅಡಿಯಲ್ಲಿ "ವೇಗವಾದ, ಸ್ಥಿರ ಮತ್ತು ಹೆಚ್ಚು ಸಮಾವೇಶಿತ ಬೆಳವಣಿಗೆ" ಸಾಧಿಸುವುದನ್ನು ತನ್ನ ಗುರಿಯಾಗಿ ಹೊಂದಿದೆ. ಯೋಜನಾ ಆಯೋಗ ರೂಪಿಸಿರುವ ನೀತಿಗಳು ದೇಶದೊಳಗೆ ಕೈಗೆಟುಕುವ ಬೆಲೆಯಲ್ಲಿ ಹಣಕಾಸು ಉತ್ಪನ್ನಗಳು ಮತ್ತು ಸೇವೆಗಳು ಪ್ರವೇಶಿಸಲು ಉತ್ತೇಜನ ನೀಡುತ್ತವೆ, ವಿಶೇಷವಾಗಿ ಬಡ ಮತ್ತು ಹಿಂದುಳಿದ ವರ್ಗಗಳಿಗೆ. ಇದು ಶಾಶ್ವತ ಮತ್ತು ಸಮಾವೇಶಿತ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಲಿದೆ.

ಗ್ರಾಮೀಣ ಭಾರತದ ಸುಮಾರು 14 ಕೋಟಿ ಕುಟುಂಬಗಳನ್ನು ಸಂಘಟಿ–ತ ಹಣಕಾಸು ವ್ಯವಸ್ಥೆಯೊಳಗೆ ತರಲು ಅವರು ಕ್ರಮಗಳನ್ನು ಕೈಗೊಂಡಿದ್ದಾರೆ. ಈ ಜನರಿಗೆ ಬ್ಯಾಂಕಿಂಗ್ ಹಾಗೂ ಹಣಕಾಸು ಸೇವೆಗಳ ಪ್ರವೇಶ ಇಲ್ಲದಿರುವುದ–ರಿಂದ, ಅವರು ದೇಶದ ಆರ್ಥಿಕ ಅಭಿವೃದ್ಧಿಯ ಪ್ರವಾಹದಿಂದ ದೂರವಾಗಿರುತ್ತಾರೆ. ಹಣಕಾಸು ಒಳಗಾವಲಿನ ಮುಖ್ಯ ಗುರಿ ಎಂದರೆ ಸುರಕ್ಷಿತ, ದೇಶದ ಅಸುರಕ್ಷಿತ ಜನರಿಗೆ ಪಾರದರ್ಶಕ ಮತ್ತು ಸಮಾನ ಹಣಕಾಸು ಸೇವೆಯನ್ನು ಒದಗಿಸುವುದು ಅವರ ಬೆಳವಣಿಗೆಯ ಸಾಮರ್ಥ್ಯವನ್ನು ಬಹಿರಂಗಪಡಿಸುವುದು. ಹಣಕಾಸಿನ ಸೇರ್ಪಡೆಯನ್ನು ಉದಾರ ಅಥವಾ ನಿಯಂತ್ರಕ ಹೊಣೆಗಾರಿಕೆಯಾಗಿ ನೋಡಬಾರದು, ಆದರೆ ಜನಸಂಖ್ಯೆಯಲ್ಲಿ ಭಾಗಿಯಾಗಿರುವ ಅನೇಕ ಜನರಿಗೆ ಯಾವುದೇ ಅಶಿಕ್ಷಿತ ಅವಕಾಶಗಳು ಇರಬಾರದು. ಹಣಕಾಸಿನ ಸೇರ್ಪಡೆಯು ಜನರ ಯೋಗಕ್ಷೇಮಕ್ಕಾಗಿ ಮಾತ್ರವಲ್ಲದೆ ಪ್ರಮುಖ ವಾಣಿಜ್ಯ ವಿವೇಚನೆಗೂ ಸಹ ಆಗಿದೆ. ಅನನುಕೂಲಕರ ಜನರು ತಮ್ಮ ಮನೆಯ ಉಳಿತಾಯವನ್ನು ಪರಿಣಾಮಕಾರಿಯಾಗಿ ವಿತರಿಸಲು ಮತ್ತು ದೇಶದ ಹೆಚ್ಚುತ್ತಿರುವ ಸಾಲದ ಅಗತ್ಯಗಳನ್ನು ಪೂರೈಸಲು ಪರಿಣಾಮಕಾರಿ ಹಣಕಾಸು ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಬೇಕು.

ಹಣಕಾಸಿನ ಸೇರ್ಪಡೆಯನ್ನು ಅಡೆತಡೆಗಳನ್ನು ನಿವಾರಿಸುವ ಮತ್ತು ಕೆಲವು ಸಾಮಾಜಿಕ ಗುಂಪುಗಳು ಮತ್ತು ಬಡ ಮತ್ತು ವಂಚಿತ ಸಮಸ್ಯೆಗಳಿರುವ ವ್ಯಕ್ತಿಗಳ ಅನಾನುಕೂಲಗಳನ್ನು ನಿವಾರಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಬಹುದು, ಇದು ಕಡಿಮೆ ವೆಚ್ಚದ, ಸಮಂಜಸ ಮತ್ತು ಸುರಕ್ಷಿತ ಅಧಿಕೃತ ಹಣಕಾಸು ಸೇವೆಗಳಾದ ಕ್ರೆಡಿಟ್, ಠೇವಣಿ, ವಿಮೆ ಮತ್ತು ಅಗತ್ಯವಿದ್ದಾಗ ಪಾವತಿಗಳನ್ನು ಒದಗಿಸುತ್ತದೆ.

**ಉಪಸಂಹಾರ:** ಭಾರತದಂತಹ ಉದಯೋನ್ಮುಖ ಆರ್ಥಿಕತೆಯಲ್ಲಿ, ಹಣಕಾಸಿನ ಹಸ್ತಕ್ಷೇಪವು ಉದ್ಯಮಿಗಳಿಗೆ ಹೊಸ ವ್ಯವಹಾರ ಚಟುವಟಿ–ಕೆಗಳನ್ನು ಯಶಸ್ವಿಯಾಗಿ ಪ್ರಾರಂಭಿಸಲು ಅವಕಾಶಗಳನ್ನು ಸೃಷ್ಟಿಸುವ ಮೂಲಕ ಮತ್ತು ಅವರಿಗೆ ಸಾಲ ವಹಿವಾಟು ಹಂಚುವ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ.

ಬಡ ಜನಸಂಖ್ಯೆಯ ಆರ್ಥಿಕ ಸ್ಥಿತಿ ಮತ್ತು ಜೀವನಶೈಲಿಯನ್ನು ಹಣಕಾಸಿನ ಪ್ರವೇಶವು ಹೆಚ್ಚಿಸಬಹುದು. ಪ್ರವೇಶಿಸಬಹುದಾದ, ಕೈಗೆಟುಕುವ ಮತ್ತು ಸೂಕ್ತವಲ್ಲದ ಹಣಕಾಸು ಸೇವೆಗಳ ಲಭ್ಯತೆ ಯಾವಾಗಲೂ ಭಾರತೀಯ ಸಮಸ್ಯೆಯಾಗಿದೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಗೆ ಪರಿಣಾಮಕಾರಿಯಾದ ಅಂತರ್ಗತ ಹಣಕಾಸು ವ್ಯವಸ್ಥೆ ಅತ್ಯಗತ್ಯ. ಬ್ಯಾಂಕಿಂಗ್ ಪ್ರವೇಶವನ್ನು ಹೆಚ್ಚಿಸಲು, ಹೊಸ ಎಟಿಎಂಗಳ ಸ್ಥಾಪನೆ ಮತ್ತು ದೇಶದ ವಿವಿಧ ಯೋಜನೆಗಳ ಅನುಷ್ಠಾನ ಕಡ್ಡಾಯವಾಗಿದೆ. ಆರ್ಥಿಕ ಬೆಳವಣಿಗೆಗೆ ಹಣಕಾಸು ಸೇರ್ಪಡೆಯನ್ನು ಉತ್ತೇಜಿಸುವಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಮುಖ ಪಾತ್ರ ವಹಿಸುತ್ತದೆ.

# ಸಸಿಗಳನ್ನೇ ಮಕ್ಕಳೆಂದು ಬೆಳೆಸಿದ ವೃಕ್ಷಮಾತೆ ಸಾಲುಮರದ ಡಾ. ತಿಮ್ಮಕ್ಕ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ಪರಿಸರ ಎಂದರೆ ಕರ್ನಾಟಕದಲ್ಲಿ ತಕ್ಷಣ ನೆನಪಾಗುವ ಹೆಸರು ಸಾಲುಮರದ ಡಾ. ತಿಮ್ಮಕ್ಕ. ವೃಕ್ಷಮಾತೆ ಎಂದು ಸಹ ಇವರನ್ನು ಕರೆಯುತ್ತಾರೆ. ವರ್ಷಗಳ ಹಿಂದೆ ನೂರಾರು ಸಸಿಗಳನ್ನು ನೆಟ್ಟು ಪರಿಸರಕ್ಕೆ ಕೊಡುಗೆ ನೀಡಿರುವ ತಿಮ್ಮಕ್ಕ, ತಾವು ನೆಟ್ಟ ಸಾಲು ಸಸಿಗಳಿಂದಲೇ ಸಾಲು ಮರದ ತಿಮ್ಮಕ್ಕ ಎಂಬ ಹೆಸರು ಪಡೆದುಕೊಂಡರು.

### ಜೀವನ

ಸಾಲುಮರದ ಡಾ. ತಿಮ್ಮಕ್ಕ ಜನನ 30 ಜೂನ್ 1911 ರಂದು ಹಾಗೂ ಮರಣ 14 ನವೆಂಬರ್ 2025 ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಜನಿಸಿದರು. ತಂದೆ ಚಿಕ್ಕರಂಗಯ್ಯ ತಾಯಿ ವಿಜಯಮ್ಮ. ಇವರಿಗೆ ಯಾವುದೇ ಔಪಚಾರಿಕ ಶಿಕ್ಷಣ ಲಭ್ಯವಾಗದೆ ಹತ್ತಿರದ ಒಂದು ಕಲ್ಲು ಗಣಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡಿದರು. ಇವರು ಚಿಕ್ಕಯ್ಯ ಎಂಬ ಒಬ್ಬ ದನಕಾಯುವವರನ್ನು ಮದುವೆಯಾಗಿದ್ದು, ಅವರು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದವರು. ಇವರಿಗೆ ಮಕ್ಕಳಿರಲಿಲ್ಲ. ತಿಮ್ಮಕ್ಕ ಅವರು ತಮಗೆ ಮಕ್ಕಳಿರದ ದುಃಖವನ್ನು ಮರೆಯಲು ಆಲದ ಮರಗಳನ್ನು ನೆಡಲಾರಂಭಿಸಿದರು ಎಂದು ಹೇಳಲಾಗಿದೆ. ತಿಮ್ಮಕ್ಕ ಅವರ ಪತಿ 1991ರಲ್ಲಿ ಮೃತಪಟ್ಟರು..

### ಸಾಲುಮರಗಳು

ಕುದೂರಿನಿಂದ ಹುಲಿಕಲ್ ತನಕವಿರುವ ರಾಜ್ಯ ಹೆದ್ದಾರಿ 1994ರಲ್ಲಿ ತಿಮ್ಮಕ್ಕರವರು ಬೆಳಸಿದ ಆಲದ ಮರಗಳು ಇವೆ. ತಿಮ್ಮಕ್ಕ ಅವರ ಹಳ್ಳಿಯ ಬಳಿ ಆಲದ ಮರಗಳು ಹೇರಳವಾಗಿದ್ದವು. ತಿಮ್ಮಕ್ಕ ಮತ್ತು ಅವರ ಪತಿ ಈ ಮರಗಳಿಂದ ಸಸಿಗಳನ್ನು ಕಸಿಮಾಡಲು ಆರಂಭಿಸಿದರು. ಮೊದಲ ವರ್ಷದಲ್ಲಿ ಹತ್ತು ಸಸಿಗಳನ್ನು ನೆರೆಯ ಕುದೂರು ಹಳ್ಳಿಯ ಬಳಿ 4 ಕಿ.ಮೀ. ಉದ್ದಳತೆಯ ದೂರ ನೆಡಲಾಯಿತು. ಹೀಗೆಯೇ ಎರಡನೇ ವರ್ಷ ಹದಿನೈದು ಮತ್ತು ಮೂರನೇ ವರ್ಷ 20 ಸಸಿಗಳನ್ನು ನೆಡಲಾಯಿತು. ಇವರು ಈ ಸಸಿಗಳನ್ನು ನೆಡಲು ತಮ್ಮ ಅತ್ಯಲ್ಪ ಆದಾಯವನ್ನೇ ಬಳಸಿದರು. ಈ ಗಂಡ–ಹೆಂಡಿರು ಸಸಿಗಳಿಗೆ ನೀರುಣಿಸಲು ಬಿಂದಿಗೆ ಕೊಳಗಗಳಲ್ಲಿ ನೀರನ್ನು ನಾಲ್ಕು ಕಿ.ಮೀ. ದೂರ ಸಾಗಿಸುತ್ತಿದ್ದರು. ಹಾಗೂ ಸಸಿಗಳನ್ನು ಮೇವಿನ ಜಾನುವಾರುಗಳ ಕಾಟದಿಂದ ತಪ್ಪಿಸಲು ಅವುಗಳ ಸುತ್ತ ಮುಳ್ಳು ಪೊದೆಗಳನ್ನು ಹೊದಿಸಿ ಕಾಪಾಡಿದರು. ಸಸಿಗಳು ಬೆಳೆಯಲು ನೀರಿನ ಅವಶ್ಯಕತೆಯಿರುವುದರಿಂದ, ಅವುಗಳನ್ನು ಹೆಚ್ಚಾಗಿ ಮುಂಗಾರು ಮಳೆಯ ಕಾಲದಲ್ಲಿ ನೆಡಲಾಯಿತು.

ಸಾಲು ಮರದ ತಿಮ್ಮಕ್ಕ ಈ ರೀತಿ ತಮ್ಮ ಸ್ವಂತ ಖರ್ಚಿನಲ್ಲಿ 8000 ಸಸಿಗಳನ್ನು ನೆಟ್ಟಿದ್ದಾರೆ. ಇಂದಿಗೆ ಅವುಗಳ ಮೌಲ್ಯವು ಸುಮಾರು 15ಕ್ಕೂ ಲಕ್ಷ ಅಧಿಕ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಮರಗಳ ನಿರ್ವಹಣೆಯನ್ನು ಈಗ ಕರ್ನಾಟಕ ಸರ್ಕಾರವು ವಹಿಸಿಕೊಂಡಿದೆ. ಅನಕ್ಷರಸ್ಥೆಯಾಗಿದ್ದರೂ ತಿಮ್ಮಕ್ಕ ಪರಿಸರ ಸಂರಕ್ಷಣೆಯಲ್ಲಿ ಮಹತ್ಕಾರ್ಯ ಮಾಡಿದರು. ಮುಂದಿನ ಪೀಳಿಗೆಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮರಗಳಿಗೆ ನೀರುಣಿಸಿ ಬೆಳೆಸಿದರು. ಪರಿಸರ ಸಮಸ್ಯೆಗಳತ್ತಲೂ ಮುಖ ಮಾಡಿದ ತಿಮ್ಮಕ್ಕ ಅವರು ಈ ಕುರಿತ ಹಲವು ಪ್ರತಿಭಟನೆಗಳಲ್ಲೂ ಪಾಲ್ಗೊಂಡಿದ್ದಾರೆ.

ಸಾಲುಮರದ ತಿಮ್ಮಕ್ಕ ಒಬ್ಬ ಭಾರತೀಯ ಪರಿಸರವಾದಿ. ತಮಗೆ ಮಕ್ಕಳಿಲ್ಲದ ಕಾರಣಕ್ಕೆ ರಸ್ತೆಯ ಬದಿಯಲ್ಲಿ ನೂರಾರು ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದಾಕೆ. ಅನಕ್ಷರಸ್ಥೆಯಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಕಾರ್ಯ ಮಾಡಿದುದನ್ನು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಗಮನಿಸಿ ಪುರಸ್ಕರಿಸಿವೆ. ಇವರ ಈ ಕೆಲಸವನ್ನು ಭಾರತದ ರಾಷ್ಟ್ರೀಯ ಪೌರ ಪ್ರಶಸ್ತಿಯಿತ್ತು ಸನ್ಮಾನಿಸಲಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಲಾಸ್ ಎಂಜಲೀಸ್ ಮತ್ತು ಓಕ್‌ಲ್ಯಾಂಡ್, ಕ್ಯಾಲಿಫೋರ್ನಿಯಗಳಲ್ಲಿ ಸ್ಥಿತವಾಗಿರುವ ಪರಿಸರ ಶಿಕ್ಷಣಕ್ಕಾಗಿ ತಿಮ್ಮಕ್ಕರವರ ಸಂಪನ್ಮೂಲಗಳು ಎಂಬ ಪರಿಸರವಾದಿ ಸಂಘಟನೆಯ ಹೆಸರನ್ನು ತಿಮ್ಮಕ್ಕ ಅವರನ್ನು ಆಧರಿಸಿ ಇಡಲಾಗಿದೆ.

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 35
Licensed to post without Prepayment License No. PMG BG/WPP-384/2023-2025.



### ಪ್ರಶಸ್ತಿ ಹಾಗೂ ಗೌರವ

**ತಮ್ಮ ಸಾಧನೆಗಾಗಿ ತಿಮ್ಮಕ್ಕ ಅವರಿಗೆ ಈ ಕೆಳಗಿನ ಸನ್ಮಾನಗಳು ಮತ್ತು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗಿದೆ.**

- ರಾಷ್ಟ್ರೀಯ ಪೌರ ಪ್ರಶಸ್ತಿ – 1995ರಲ್ಲಿ
- ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ – 1997ರಲ್ಲಿ
- ವೀರಚಕ್ರ ಪ್ರಶಸ್ತಿ – 1997ರಲ್ಲಿ
- ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ – ಇವರಿಂದ ಮಾನ್ಯತೆಯ ಪ್ರಮಾಣ ಪತ್ರ
- ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು – ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ.
- ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ – 2000ರಲ್ಲಿ
- ಗಾಡ್‌ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ – 2006ರಲ್ಲಿ
- ಪಂಪಾಪತಿ ಪರಿಸರ ಪ್ರಶಸ್ತಿ
- ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ
- ವನಮಾತೆ ಪ್ರಶಸ್ತಿ
- ಮಾಗಡಿ ವ್ಯಕ್ತಿ ಪ್ರಶಸ್ತಿ
- ಶ್ರೀಮಾತಾ ಪ್ರಶಸ್ತಿ
- ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ
- ಕರ್ನಾಟಕ ಪರಿಸರ ಪ್ರಶಸ್ತಿ
- ಮಹಿಳಾರತ್ನ ಪ್ರಶಸ್ತಿ
- ನ್ಯಾಷನಲ್ ಸಿಟಿಜನ್ ಪ್ರಶಸ್ತಿ
- ರಾಜ್ಯೋತ್ಸವ ಪ್ರಶಸ್ತಿ
- ಹೂವಿನಹೊಳೆ ಪ್ರತಿಷ್ಠಾನ
- ವೇಬ್ಯಾಕ್ ಮೆಷಿನ್ ನಲ್ಲಿ.ದ ವಿಶ್ವಾತ್ಮ ಪುರಸ್ಕಾರ 2015
- ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ.
- 2010ರ ಸಾಲಿನ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ಲಭಿಸಿದೆ.
- 2019ರಲ್ಲಿ ಪದ್ಮಶ್ರೀ ಪ್ರಶಸ್ತಿ.
- 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ
- ಗೌರವ ಡಾಕ್ಟರೇಟ್

### ಚಟುವಟಿಕೆಗಳು

ಭಾರತದಲ್ಲಿ ಹಲವಾರು ಕಾಡು ಬೆಳೆಸುವ ಕಾರ್ಯಕ್ರಮಗಳಿಗೆ ತಿಮ್ಮಕ್ಕ ಅವರನ್ನು ಆಹ್ವಾನಿಸಲಾಗುತ್ತಿತ್ತು. ತಮ್ಮ ಹಳ್ಳಿಯ ವಾರ್ಷಿಕ ಜಾತ್ರೆಗಾಗಿ ಮಳೆ ನೀರು ಶೇಖರಿಸಲು ದೊಡ್ಡ ತೊಟ್ಟಿಯ ನಿರ್ಮಾಣವೂ ಸೇರಿದಂತೆ ಇವರು ಇತರೆ ಸಮಾಜ ಸೇವೆಯ ಕೆಲಸಗಳಲ್ಲಿ ತೊಡಗಿದ್ದರು. ಇವರು ತಮ್ಮ ಹಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟುವ ಆಸೆಯನ್ನಿಟ್ಟುಕೊಂಡಿದ್ದರು. ಇದಕ್ಕಾಗಿ ಒಂದು ನಿಧಿಯನ್ನು ನಿಯೋಜಿಸಲಾಗಿತ್ತು.

ತಿಮ್ಮಕ್ಕ ಅವರಿಗೆ 110 ವರ್ಷ ವಯಸ್ಸಾಗಿದ್ದು, ಇಂದಿಗೂ ತಮ್ಮ ಆರೋಗ್ಯ ಸಮಸ್ಯೆಗಳ ಬದಿಗೊತ್ತಿ ಕಾಲೇಜುಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಈ ಕಾರ್ಯಕ್ರಮಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಸಂದೇಶಗಳನ್ನು ನೀಡಿದ್ದರು. ಸಾಧನೆ ಮಾಡಲು ಯಾವುದೇ ಪದವಿ, ನೆರವು, ಅವಕಾಶದ ಅಗತ್ಯವಿಲ್ಲ. ಕಾಯಕನಿಷ್ಠೆ ಇಟ್ಟುಕೊಂಡು ಎಲ್ಲರಿಗೂ ಒಳ್ಳೆಯದು ಮಾಡಬೇಕು ಎಂಬ ಧ್ಯೇಯ ಇದ್ದರೆ ಜಗತ್ತನ್ನೆ ಬದಲಾವಣೆ ಮಾಡುವ ಶಕ್ತಿ ಆಗಬಹುದು ಎಂಬುದಕ್ಕೆ ತಿಮ್ಮಕ್ಕ ನಿದರ್ಶನವಾಗಿದ್ದಾರೆ. ತಿಮ್ಮಕ್ಕ ಅವರು ತಮಗೆ ತಾವೇ ಅವಕಾಶ ಮಾಡಿಕೊಂಡು ಸಾಧನೆ ಮಾಡಿದ ಮಹಿಳೆಯಾಗಿದ್ದಾರೆ. ಅವರ ಸಾಧನೆ ಚಿರಸ್ಥಾಯಿ ಆಗಿದೆ. ರಾಜ್ಯದ ಸಹಕಾರಿಗಳಿಂದ ಅವರಿಗೊಂದು ನಮನ.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003